
ಗುರುವಾರ, ಜನವರಿ 19, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಾಲೀಮು
ಗಣರಾಜ್ಯೋತ್ಸವ ನಿಮಿತ್ತ ದೆಹಲಿಯಲ್ಲಿ ನಡೆಯಲಿರುವ ಪಥಸಂಚಲನಕ್ಕಾಗಿ ಮಹಿಳಾ ಎನ್‌ಸಿಸಿ ಕೆಡೆಟ್‌ಗಳು ಬುಧವಾರ ತಾಲೀಮು ನಡೆಸಿದರು



ಅಮೃತ ನಗರೋತ್ಥಾನ ಯೋಜನೆ: ದಾಸರಹಳ್ಳಿ ವಿಧಾನಸಭೆ ಕ್ಷೇತ್ರದಲ್ಲಿ ₹90 ಕೋಟಿ ಪ್ಯಾಕೇಜ್

ಅರ್ಹ ಗುತ್ತಿಗೆದಾರರ ಕಡೆಗಣನೆ: ದೂರು

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ದಾಸರಹಳ್ಳಿ ವಿಧಾನಸಭೆ ಕ್ಷೇತ್ರದಲ್ಲಿ ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ ಯೋಜನೆಯ ಟೆಂಡರ್ ಮಂಜೂರಾತಿಯಲ್ಲಿ ಅಕ್ರಮ ನಡೆದಿದ್ದು, ಅರ್ಹ ಗುತ್ತಿಗೆದಾರರನ್ನು ಕಡೆಗಣಿಸಲಾಗಿದೆ ಎಂದು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ದೂರು ಸಲ್ಲಿಸಲಾಗಿದೆ.

ದಾಸರಹಳ್ಳಿ ವಿಧಾನಸಭೆ ಕ್ಷೇತ್ರದಲ್ಲಿ ಅಮೃತ ನಗರೋತ್ಥಾನ ಯೋಜನೆಯಡಿ ₹90 ಕೋಟಿ ಅನುದಾನದ ಕಾಮಗಾರಿಗಳಿಗೆ 6 ಪ್ಯಾಕೇಜ್‌ನಲ್ಲಿ (ಕೆಡಬ್ಲ್ಯು–4) 2022ರ ಜುಲೈ 11ರಂದು ಟೆಂಡರ್ ಕರೆಯಲಾಗಿತ್ತು. ಎಂಟು ಗುತ್ತಿಗೆದಾರರು ಈ ಟೆಂಡರ್‌ನಲ್ಲಿ ಭಾಗವಹಿಸಿದ್ದರು. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ದಾಖಲೆಗಳನ್ನೂ ಸಲ್ಲಿಸಿದ್ದರು. ಆ.17ರಂದು ತಾಂತ್ರಿಕ ಅಂಶಗಳನ್ನು ಪರಿಶೀಲಿಸಿದ್ದಾರೆ. ಅ.29ರಂದು ಮುಖ್ಯ ಆಯುಕ್ತರ ಅಧ್ಯಕ್ಷತೆಯ ಸಭೆಯಲ್ಲಿ ಟೆಂಡರ್ ಪ್ರಕ್ರಿಯೆ ರದ್ದುಪಡಿಸಿ ಮರು ಟೆಂಡರ್‌ಗೆ ನಿರ್ಣಯಿಸಲಾಗಿದೆ.

ಅರ್ಹತೆ ಹೊಂದಿರುವ ಗುತ್ತಿಗೆದಾರರು ತಮ್ಮನ್ನು ಏಕೆ ನಿರ್ಲಕ್ಷಿಸಲಾಗಿದೆ ಹಾಗೂ ಟೆಂಡರ್ ರದ್ದುಪಡಿಸಿರುವ ಕಾರಣ ಎಂದು ಇ–ಪ್ರೊಕ್ಯೂರ್‌ಮೆಂಟ್ ಮೂಲಕವೇ ಮನವಿ ಸಲ್ಲಿಸಿದ್ದಾರೆ. ಆದರೆ ಈವರಗೆ ಅದಕ್ಕೆ ಉತ್ತರ ಬಂದಿಲ್ಲ. ನ.8ರಂದು ಮರು ಟೆಂಡರ್ ಕರೆಯಲಾಗಿದ್ದು, ಏಳು ಗುತ್ತಿಗೆದಾರರು ಭಾಗವಹಿಸಿದ್ದರು. ಡಿ.29ರಂದು ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆಸ ಸಭೆಯಲ್ಲಿ ತಲಾ ಎರಡು ಪ್ಯಾಕೇಜ್ ಅನ್ನು ಇಬ್ಬರು ಗುತ್ತಿಗೆದಾರರು, ಇನ್ನೆರಡನ್ನು ಇಬ್ಬರಿಗೆ ಮಂಜೂರು ಮಾಡಲಾಗಿದೆ.

'ತಿರಸ್ಕೃತಗೊಂಡ ಗುತ್ತಿಗೆದಾರರಾದ ಎಂ.ಎಸ್.ವಿ ಕನ್‌ಸ್ಟ್ರಕ್ಷನ್ಸ್‌ನವರ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮೇಲ್ಮನವಿ ಸಲ್ಲಿಸಿದ್ದಾರೆ. ಆದರೆ, ಈವರೆಗೂ ಮಾಹಿತಿ ನೀಡಿಲ್ಲ. ಅಲ್ಲದೆ, 6 ಪ್ಯಾಕೇಜ್‌ಗಳ ಟೆಂಡರ್ ಮಂಜೂರು ಮಾಡಿರುವ ಮೂವರು ಗುತ್ತಿಗೆದಾರರು ಮಾನದಂಡಗಳನ್ನು ಪೂರೈಸುವುದಿಲ್ಲ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿನ ಪಾರದರ್ಶಕ ಕಾಯ್ದೆಯಡಿ (ಕೆಟಿಪಿಪಿ) ಬಿಡ್ ಕ್ಯಾಪಾಸಿಟಿಯನ್ನು ಲೆಕ್ಕ ಮಾಡಿಲ್ಲ. ಕಾಮಗಾರಿ ದೃಢೀಕರಣ ಪತ್ರದಲ್ಲಿ ವರ್ಷವಾರು ತುಲನೆ ಮಾಡಿದ ತಾಂತ್ರಿಕ ಮೌಲ್ಯಮಾಪನ ಪಡೆಯದೆ, ಉಮೇಶ್, ಸಿದ್ದೇಗೌಡ ಮತ್ತು ಬೆನಕ ಡೆವಲಪರ್ಸ್‌ಗೆ ಎಲ್ಲ ಮಾನದಂಡಗಳನ್ನು ಉಲ್ಲಂಘಿಸಿ ಅನುಕೂಲ ಮಾಡಿಕೊಡಲಾಗಿದೆ' ಎಂದು ಗುತ್ತಿಗೆದಾರರ ಪರವಾಗಿ ವಕೀಲ ಕೆ.ಎನ್. ಪ್ರದೀಪ್ ಕುಮಾರ್ ದಾಖಲೆ ಸಹಿತ ದೂರು ಸಲ್ಲಿಸಿದ್ದಾರೆ.

'ದಾಸರಹಳ್ಳಿ ವಲಯದ ಕಾರ್ಯಪಾಲಕ ಎಂಜಿನಿಯರ್ ಎಂ.ಟಿ. ಬಾಲಾಜಿ ಹಾಗೂ ಮುಖ್ಯ ಎಂಜಿನಿಯರ್ ಆರ್. ರಂಗನಾಥ್ ಅವರು ತಮ್ಮ ಪರಿಚಿತರಿಗೆ ಅನುಕೂಲ ಮಾಡಲು ಮಾನದಂಡಗಳು ಪೂರೈಸಿದ್ದಾರೆ ಎಂದು ಪ್ರಧಾನ ಎಂಜಿನಿಯರ್ ಹಾಗೂ ಮುಖ್ಯ ಎಂಜಿನಿಯರ್ ಅವರಿಗೆ ತಪ್ಪಾಗಿ ಕಡತ ಸಲ್ಲಿಸಿದ್ದಾರೆ. ಹೀಗಾಗಿ, ಟೆಂಡರ್ ಆದೇಶವನ್ನು ಸಂಪೂರ್ಣ ರದ್ದು ಮಾಡಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ಕಾರ್ಯಪಾಲಕ ಎಂಜಿನಿಯರ್ ಎಂ.ಟಿ. ಬಾಲಾಜಿ ಪ್ರತಿಕ್ರಿಯಿಸಿ, 'ಮೊದಲ ಬಾರಿಗೆ ಈ ಟೆಂಡರ್ ಆಹ್ವಾನಿಸಿದಾಗ ಮೌಲ್ಯಮಾಪನ ಸರಿ ಇಲ್ಲದ ಕಾರಣ ಕೆಲವರನ್ನು ಮುಖ್ಯ ಆಯುಕ್ತರು ವರ್ಗಾಯಿಸಿದ್ದರು. ಆದ್ದರಿಂದ ಎರಡನೇ ಬಾರಿಗೆ ಟೆಂಡರ್ ಕರೆದು ಎಲ್ಲವನ್ನೂ ಸರಿಪಡಿಸಲಾಗಿದೆ' ಎಂದರು. ಮುಖ್ಯ ಎಂಜಿನಿಯರ್ ಆರ್. ರಂಗನಾಥ್ ಅವರನ್ನು ಈ ಬಗ್ಗೆ ಸಂಪರ್ಕಿಸಲು ಪ್ರಯತ್ನಿಸಿದಾಗ ಪ್ರತಿಕ್ರಿಯಿಸಲಿಲ್ಲ.

'ಎಲ್ಲೆಡೆ ಅಕ್ರಮ'

'ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ ಯೋಜನೆಯಲ್ಲಿ ₹6 ಸಾವಿರ ಕೋಟಿಯಷ್ಟು ಅನುದಾನ ನೀಡಲಾಗಿದ್ದು, ಇದರಲ್ಲಿ ವಲಯವಾರು, ಕಾರ್ಯಪಾಲಕ ಎಂಜಿನಿಯರ್ ಮಟ್ಟದಲ್ಲಿ ಟೆಂಡರ್ ಕರೆಯಲಾಗಿದೆ. ಅವರವರ ಪರಿಚಿತರಿಗೆ ಅನುವು ಮಾಡಿಕೊಡಲು ಅರ್ಹತೆ ಹೊಂದಿರುವ ಗುತ್ತಿಗೆದಾರರನ್ನು ನಿರ್ಲಕ್ಷಿಸಲಾಗಿದೆ. ಮಾನದಂಡಗಳನ್ನು ಅನುಸರಿಸಿಲ್ಲ. ಇದನ್ನು ಮುಖ್ಯ ಆಯುಕ್ತರಿಂದ ಮುಚ್ಚಿಟ್ಟು ಟೆಂಡರ್ ಮಂಜೂರು ಮಾಡಲಾಗಿದೆ. ದಾಸರಹಳ್ಳಿ ವಿಧಾನಸಭೆ ಕ್ಷೇತ್ರದಲ್ಲಿ ಮಾತ್ರವಲ್ಲ, ಎಲ್ಲ ಕ್ಷೇತ್ರಗಳಲ್ಲೂ ಈ ರೀತಿ ಅಕ್ರಮ ಉಂಟಾಗಿದೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಿ ಕ್ರಮ ವಹಿಸುವಂತೆ ದೂರು ಸಲ್ಲಿಸಲಾಗಿದೆ' ಎಂದು ವಕೀಲ ಕೆ.ಎನ್. ಪ್ರದೀಪ್‌ಕುಮಾರ್ ತಿಳಿಸಿದರು.

₹72 ಕೋಟಿ ಕಾಮಗಾರಿ ರದ್ದು

ಬೆಂಗಳೂರು: ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ ಯೋಜನೆಯಲ್ಲಿ ಚಾಮರಾಜಪೇಟೆ ವಿಧಾನಸಭೆ ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾದ ₹72.51 ಕೋಟಿ ಮೌಲ್ಯದ ಕಾಮಗಾರಿಗಳನ್ನು ಟೆಂಡರ್‌ನಲ್ಲಿ ನಿಯಮ ಪಾಲಿಸದ ಕಾರಣ ರದ್ದುಗೊಳಿಸಲಾಗಿದೆ.

ರಾಜ್ಯ ಸರ್ಕಾರದ ಅನುದಾನದಲ್ಲಿ ಕೈಗೊಳ್ಳಬೇಕಾದ ಈ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದ ಬಿಬಿಎಂಪಿ, ಆಡಳಿತಾತ್ಮಕ ಮತ್ತು ಟೆಂಡರ್ ಒಪ್ಪಿಗೆಗಾಗಿ ಪ್ರತ್ಯೇಕ ಕಡತವನ್ನು ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಿತ್ತು. ಎರಡು ತಿಂಗಳ ನಂತರ ತಾಂತ್ರಿಕ ಸಮಸ್ಯೆಯ ಆಧಾರದಲ್ಲಿ ಟೆಂಡರ್ ನಿಯಮಗಳನ್ನು ಪಾಲಿಸಿಲ್ಲ ಎಂದು ಕಾಮಗಾರಿಗಳನ್ನು ರದ್ದುಗೊಳಿಸಿದೆ.

ಬಿಬಿಎಂಪಿ ಜ.3ರಂದು ನಗರಾಭಿವೃದ್ಧಿ ಇಲಾಖೆಗೆ ಸಲ್ಲಿಸಿರುವ ಪತ್ರದಲ್ಲಿ ವಾರ್ಡ್ ನಂ. 135, 136, 137, 138, 139, 140ಗಳಲ್ಲಿನ ಮೂರು ಕಾಮಗಾರಿಗಳಲ್ಲಿ ಕಡಿಮೆ ಬಿಡ್ ಸಲ್ಲಿಸಿದ ಗುತ್ತಿಗೆದಾರರು 'ಕಾಮಗಾರಿ ಮುಗಿದಿರುವ ಪ್ರಮಾಣಪತ್ರ' ಸಲ್ಲಿಸಿಲ್ಲ. ನಾಲ್ಕನೇ ಕಾಮಗಾರಿ ರಸ್ತೆ ಮತ್ತು ಚರಂಡಿಯನ್ನು ಸ್ಥಳಾಂತರಿಸಿ ಕಟ್ಟಡ ನಿರ್ಮಿಸುವ ₹4.4 ಕೋಟಿ ಯೋಜನೆಯಾಗಿದೆ. ಇವುಗಳನ್ನು ನಗರಾಭಿವೃದ್ಧಿ ಇಲಾಖೆ ರದ್ದುಪಡಿಸಿದೆ.

ಸಂವಿಧಾನ ಅಭಿಯಾನೋತ್ಸವದಲ್ಲಿ ಶಾಸಕ ರಿಜ್ವಾನ್ ಅರ್ಷದ್ ಅಭಿಮತ

ಶ್ರೇಷ್ಠತೆಗೆ ಅಡ್ಡಿ; ಜಾತಿ, ಧರ್ಮ ಸಂಘರ್ಷಕ್ಕೆ ದಾರಿ

ಪ್ರಜಾವಾಣಿ ವಾರ್ತೆ



ನಗರದಲ್ಲಿ ಬುಧವಾರ ಆಯೋಜಿಸಿದ್ದ ಸಂವಿಧಾನ ಅಭಿಯಾನೋತ್ಸವವನ್ನು ಶಾಸಕ ಜಮೀರ್ ಅಹಮದ್ ಖಾನ್ ಉದ್ಘಾಟಿಸಿದರು. ಟಿ.ವೆಂಕಟರಮಣಯ್ಯ, ವಡ್ಡಗೆರೆ ನಾಗರಾಜಯ್ಯ, ಮಾ.ಮುನಿರಾಜು, ಜಿ.ಮಂಜುನಾಥ್ ಇದ್ದರು –ಪ್ರಜಾವಾಣಿ ಚಿತ್ರ.

ಬೆಂಗಳೂರು: ಹುಟ್ಟಿನ ಕಾರಣವನ್ನು ಮುಂದಿಟ್ಟುಕೊಂಡು ವರ್ಗದ ಶ್ರೇಷ್ಠತೆಯನ್ನು ನಿರ್ಧರಿಸುವುದಕ್ಕೆ ಸಂವಿಧಾನ ಅಡ್ಡಿಯಾಗಿರುವುದೇ ಜಾತಿ, ಧರ್ಮಗಳ ಮಧ್ಯೆ ಸಂಘರ್ಷಕ್ಕೆ ಮೂಲ ಕಾರಣ ಎಂದು ಶಾಸಕ ರಿಜ್ವಾನ್ ಅರ್ಷದ್ ಹೇಳಿದರು.

ದಲಿತ ವಿಮೋಚನಾ ಸೇನೆ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸಂವಿಧಾನ ಅಭಿಯಾನೋತ್ಸವ, 20ನೇ ರಾಜ್ಯ ಸಮಾವೇಶದಲ್ಲಿ ಅವರು ಮಾತನಾಡಿದರು.

ರಾಜಕಾರಣಕ್ಕಾಗಿ ಹಿಂದೂ ಮುಸ್ಲಿಮರ ಮಧ್ಯೆ ಸಮರ ಸೃಷ್ಟಿಸುತ್ತಿದ್ದಾರೆ. ಮೇಲುನೋಟಕ್ಕೆ ಇದು ಒಂದು ಧರ್ಮದ ಜನರನ್ನು ಗುರಿಯಾಗಿಸಿದಂತೆ ಕಂಡರೂ, ಅದರ ಹಿಂದಿರುವ ಸತ್ಯವೇ ಬೇರೆ. ಸಾಮಾಜಿಕ ನ್ಯಾಯ, ಸಮಾನತೆ, ಗೌರವವೇ ಪ್ರಧಾನವಾಗಿರುವ ಅಂಬೇಡ್ಕರ್ ಸಿದ್ಧಾಂತ ಹಾಗೂ ಮನುವಾದ ಮಧ್ಯದ ಸಂಘರ್ಷಕ್ಕೆ ಕೋಮು ರೂಪ ನೀಡುತ್ತಿದ್ದಾರೆ. ಮನುವಾದದ ನಿಜವಾದ ವಿರೋಧ ಸಂವಿಧಾನಕ್ಕೆ. ಸಂವಿಧಾನ ಎಲ್ಲರಿಗೂ ಶ್ರೇಷ್ಠತೆ ನೀಡಿದ್ದೇ ಅದಕ್ಕೆ ಕಾರಣ. ಅದನ್ನು ನಿರ್ನಾಮ ಮಾಡಲು ಜಾತಿ, ಧರ್ಮದ ಅಸ್ತ್ರ ಬಳಸುತ್ತಿದ್ದಾರೆ. ಮುಸ್ಲಿಮರ ವಿರೋಧ ನೆಪ ಮಾತ್ರ. ಈಗಿನ ಬಹುತೇಕ ಮುಸ್ಲಿಮರು ಹಿಂದೆ ದಲಿತರಾಗಿದ್ದಿರಬಹುದು. ಅದಕ್ಕಾಗಿ ಅಷ್ಟೊಂದು ದ್ವೇಷ ಎಂದು ವಿಶ್ಲೇಷಿಸಿದರು.

ದೇಶದ ಶೇಕಡ 1ರಷ್ಟು ಜನಸಂಖ್ಯೆ ಶೇ 40 ಸಂಪತ್ತನ್ನು ತಮ್ಮ ವಶದಲ್ಲಿ ಇಟ್ಟುಕೊಂಡಿದೆ. ತಳಹಂತದ ಶೇ 50 ಜನರು ಶೇ 3ರಷ್ಟು ಸಂಪತ್ತು ಹೊಂದಿದ್ದಾರೆ. ಈ ತಳ ಸಮುದಾಯದಲ್ಲಿ ದಲಿತರು, ಅಲ್ಪಸಂಖ್ಯಾತರೂ ಇದ್ದಾರೆ. ದಲಿತ ಸಂಘಟನೆಗಳು ಇನ್ನಷ್ಟು ಗಟ್ಟಿಗೊಳ್ಳಬೇಕು. ಅವುಗಳ ಪ್ರಾಬಲ್ಯ ಕಡಿಮೆಯಾದರೆ ಕೋಮು ಶಕ್ತಿಗಳು ಸಂವಿಧಾನದ ಆತ್ಮವನ್ನೇ ನಾಶ ಮಾಡಲಿವೆ ಎಂದು ಎಚ್ಚರಿಸಿದರು.

ದೊಡ್ಡಬಳ್ಳಾಪುರ ಶಾಸಕ ಟಿ. ವೆಂಕಟರಾಮಯ್ಯ ಮಾತನಾಡಿ, 'ಅಂಬೇಡ್ಕರ್ ದೇಶಕ್ಕೆ ಸರ್ವಶ್ರೇಷ್ಠ ಸಂವಿಧಾನ ಕೊಟ್ಟಿದ್ದಾರೆ. ಸರ್ಕಾರಗಳನ್ನು ಎಚ್ಚರಿಸಲು ಹೋರಾಟ ಅನಿವಾರ್ಯ. ಹೋರಾಟಗಳಿಲ್ಲದೇ ಯಾವ ಬೇಡಿಕೆಗಳೂ ಸುಲಭವಾಗಿ ಈಡೇರುವುದಿಲ್ಲ. ದುರ್ಬಲ ವರ್ಗದ ಜನರು ಬೆಲೆ ಏರಿಕೆಯಿಂದ ಬಸವಳಿದಿದ್ದಾರೆ. ಜನರ ಭಾವನೆ ಅರ್ಥ ಮಾಡಿಕೊಳ್ಳುವ ಸರ್ಕಾರವನ್ನು ಇನ್ನಾದರೂ ಆಯ್ಕೆ ಮಾಡಬೇಕು' ಎಂದರು.

ಸಂಸ್ಕೃತಿ ಚಿಂತಕ ಕೋಟಿಗಾನಹಳ್ಳಿ ರಾಮಯ್ಯ, ಚಿತ್ರದುರ್ಗದ ಹೋರಾಟಗಾರ ದಿ.ಜಯಣ್ಣ (ಮರಣೋತ್ತರ) ಅವರಿಗೆ ಬಿ.ಕೃಷ್ಣಪ್ಪ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜಯಣ್ಣ ಅವರ ಪುತ್ರ ಜಯಪ್ರಕಾಶ್ ಪ್ರಶಸ್ತಿ ಸ್ವೀಕರಿಸಿದರು. ದಲಿತ ವಿಮೋಚನಾ ಸೇನೆ(ಡಿವಿಎಸ್) ಸಂಸ್ಥಾಪಕ ಅಧ್ಯಕ್ಷ ಮಾ.ಮುನಿರಾಜು ಅಧ್ಯಕ್ಷತೆ ವಹಿಸಿದ್ದರು. ಚಿತ್ರದುರ್ಗದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಸಾಹಿತಿ ಬಂಜಗೆರೆ ಜಯಪ್ರಕಾಶ್, ಶಾಸಕ ಜಮೀರ್ ಅಹಮದ್ ಖಾನ್, ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಪ್ರವೀಣ್‌ಕುಮಾರ್ ಶೆಟ್ಟಿ, ಡಿವಿಎಸ್ ಕಾರ್ಯದರ್ಶಿ ಜಿ.ಮಂಜುನಾಥ್, ವಕೀಲ ಹರಿರಾಮ್. ಸಾಹಿತಿ ವಡ್ಡಗೆರೆ ನಾಗರಾಜಯ್ಯ ಉಪಸ್ಥಿತರಿದ್ದರು.

ಹಿಂದುಳಿದವರಿಗೆ ಶೇ 30ರಷ್ಟು ಟಿಕೆಟ್‌ಗೆ ಆಗ್ರಹ

ಬೆಂಗಳೂರು: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಬಿಎಂಪಿ ವ್ಯಾಪ್ತಿಯ 28 ಕ್ಷೇತ್ರಗಳ ವ್ಯಾಪ್ತಿಯಲ್ಲಿ ಪಕ್ಷದಿಂದ ಶೇಕಡ 30 ರಷ್ಟು ಕ್ಷೇತ್ರಗಳಲ್ಲಿ ಹಿಂದುಳಿದ ವರ್ಗಗಳು ಮತ್ತು ಅತಿ ಹಿಂದುಳಿದ ವರ್ಗಗಳ ಅಭ್ಯರ್ಥಿಗಳನ್ನು ಕಣಕ್ಕಿಳಿಸುವಂತೆ ವಿಧಾನ ಪರಿಷತ್ ಸದಸ್ಯ ಪಿ.ಆರ್. ರಮೇಶ್ ಕಾಂಗ್ರೆಸ್ ವರಿಷ್ಠರನ್ನು ಆಗ್ರಹಿಸಿದ್ದಾರೆ.

ರಾಜ್ಯ ಕಾಂಗ್ರೆಸ್ ಉಸ್ತುವಾರಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲಾ ಅವರಿಗೆ ಪತ್ರ ಬರೆದಿರುವ ರಮೇಶ್, ಹಿಂದುಳಿದ ವರ್ಗಗಳ ಜನರಿಗೆ ಸಾಮಾಜಿಕ ನ್ಯಾಯ ಒದಗಿಸುವ ದೃಷ್ಟಿಯಿಂದ ಟಿಕೆಟ್ ಹಂಚಿಕೆಯಲ್ಲಿ ಮೀಸಲಾತಿ ನೀಡುವಂತೆ ಒತ್ತಾಯಿಸಿ ದ್ದಾರೆ. ಪತ್ರದ ಪ್ರತಿಯನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೂ ಕಳುಹಿಸಿದ್ದಾರೆ.

ಸುದ್ದಿ 2 ನಿಮಿಷ

ಉತ್ತರ ಕರ್ನಾಟಕ ಸಂಸ್ಕೃತಿ ಬಿಂಬಿಸುವ ಉತ್ಸವ 21ಕ್ಕೆ

ಬೆಂಗಳೂರು: ನಗರದ ಅರಮನೆ ಮೈದಾನದ ಶೀಶ್ ಮಹಲ್ ಪ್ಯಾಲೆಸ್‌ನಲ್ಲಿ ಜ. 21, 22ರಂದು 'ಉತ್ತರ ಕರ್ನಾಟಕ ಉತ್ಸವ' ನಡೆಯಲಿದೆ. ಈ ಉತ್ಸವದಲ್ಲಿ ಉತ್ತರ ಕರ್ನಾಟಕದ ಸಂಸ್ಕೃತಿ ಮತ್ತು ಪರಂಪರೆಯ ಅನಾವರಣವಾಗಲಿದೆ.

ಈ ಉತ್ಸವದಲ್ಲಿ ಮಲ್ಲಕಂಬ, ಡೊಳ್ಳು ಕುಣಿತ, ಕರಡಿ ಮಜಲು ಸೇರಿ ಉತ್ತರ ಕರ್ನಾಟಕದ ವಿವಿಧ ಕಲಾ ತಂಡಗಳು ಪ್ರೇಕ್ಷಕರನ್ನು ರಂಜಿಸಲಿವೆ. ಬುಗರಿ ಆಟ, ಗಿಲ್ಲಿ ದಾಂಡು, ಕುಂಟೆ ಬಿಲ್ಲೆ, ಲಗೋರಿ, ಸರಬಡಗಿ, ಗೋಲಿ, ಕಣ್ಣಾಮುಚ್ಚಾಲೆ ಆಟಗಳಲ್ಲಿ ಪಾಲ್ಗೊಂಡು ಮತ್ತೊಮ್ಮೆ ಬಾಲ್ಯವನ್ನು ಮೆಲುಕು ಹಾಕಬಹುದು' ಎಂದು 'ಉತ್ತರ ಕರ್ನಾಟಕ ಸಂಘ–ಸಂಸ್ಥೆಗಳ ಮಹಾಸಂಸ್ಥೆಯ ಅಧ್ಯಕ್ಷ ಶಿವಕುಮಾರ ಮೇಟಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ರೊಟ್ಟಿ ಶೂರ, ಉಡಿ ತುಂಬುವ ಕಾರ್ಯಕ್ರಮ, ಭಜನಾ ಪದ, ಡೊಳ್ಳಿನ ಪದ ಕಾರ್ಯಕ್ರಮಗಳು ನಡೆಯಲಿವೆ. ಉತ್ತರ ಕರ್ನಾಟಕ ಭಾಗದ ಸಂಸ್ಕೃತಿ ಪರಂಪರೆಯ ಉಡುಗೆ–ತೊಡುಗೆ, ಆಹಾರ ಪದ್ಧತಿಯ ಅನಾವರಣವಾಗಲಿದೆ' ಎಂದರು.

ಹೃದಯ ಕಾಯಿಲೆಗೆ ತ್ವರಿತ ಚಿಕಿತ್ಸೆ ಅಗತ್ಯ: ಅಶ್ವತ್ಥನಾರಾಯಣ



ಬೆಂಗಳೂರು: 'ಹಠಾತ್ ಹೃದಯಾಘಾತ ಅಥವಾ ಹೃದಯ ಸಂಬಂಧಿ ಗಂಭೀರ ಕಾಯಿಲೆ ಹೊಂದಿರುವವರಿಗೆ ಶೀಘ್ರವಾಗಿ ಚಿಕಿತ್ಸೆ ನೀಡಬೇಕು. ಇಲ್ಲವಾದಲ್ಲಿ ಜೀವಕ್ಕೆ ಅಪಾಯವಾಗುವ ಸಾಧ್ಯತೆ ಇರುತ್ತದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ನಾಗರಬಾವಿಯ ಫೋರ್ಟಿಸ್ ಆಸ್ಪತ್ರೆಯಲ್ಲಿ ಬುಧವಾರ ಅತ್ಯಾಧುನಿಕ ಕ್ಯಾಥ್ ಲ್ಯಾಬ್ ಉದ್ಘಾಟಿಸಿದ ಅವರು, 'ಹೃದಯ ಸಂಬಂಧಿ ಕಾಯಿಲೆಗಳಿಗೆ ತ್ವರಿತವಾಗಿ ಚಿಕಿತ್ಸೆ ನೀಡಲು ಕ್ಯಾಥ್ ಲ್ಯಾಬ್ ಸಹಾಯಕ. ಹೀಗಾಗಿ, ಹೆಚ್ಚಿನ ಸಂಖ್ಯೆಯಲ್ಲಿ ಕ್ಯಾಥ್ ಲ್ಯಾಬ್ ಪ್ರಾರಂಭಿಸಬೇಕು' ಎಂದು ಹೇಳಿದರು.

ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಎಂ. ಮಹದೇವಯ್ಯ, 'ಆರೋಗ್ಯ ಕ್ಷೇತ್ರದಲ್ಲಿ ಅತ್ಯಾಧುನಿಕ ಉಪಕರಣ ಹೊಂದುವುದು ಅನಿವಾರ್ಯ. ಇಂದು ಯಾವುದೇ ವಯಸ್ಸಿನ ಮಿತಿ ಇಲ್ಲದೇ ಹೃದಯಾಘಾತ ಸಂಭವಿಸುತ್ತಿದೆ. ಅಂತವರನ್ನು ದೂರದ ಆಸ್ಪತ್ರೆಗೆ ಕರೆದೊಯ್ಯುವ ವೇಳೆಗೆ ಮೃತಪಡುವ ಸಾಧ್ಯತೆ ಇರುತ್ತದೆ. ಆದ್ದರಿಂದ ಅತ್ಯಾಧುನಿಕ ಕ್ಯಾಥ್ ಲ್ಯಾಬ್ ನಿರ್ಮಾಣಕ್ಕೆ ಆದ್ಯತೆ ನೀಡಬೇಕು' ಎಂದರು.

ಫೋರ್ಟಿಸ್ ಆಸ್ಪತ್ರೆಯ ಹೃದಯ ತಜ್ಞ ಡಾ. ವಿವೇಕ್ ಜವಳಿ, ಡಾ.ಸಿ. ಪ್ರಭಾಕರ ಕೋರೆಗೋಳ್ ಹಾಗೂ ಆಸ್ಪತ್ರೆಯ ವ್ಯಾಪಾರ ವ್ಯವಹಾರದ ಮುಖ್ಯಸ್ಥ ಅಕ್ಷಯ್ ಒಲೇಟಿ ಉಪಸ್ಥಿತರಿದ್ದರು.

'ಸಹಕಾರಿ ಬ್ಯಾಂಕ್‌ಗಳ ಹಗರಣ ಸಿಬಿಐಗೆ ವಹಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ಸಹಕಾರಿ ಬ್ಯಾಂಕ್‌ಗಳ ಹಗರಣವನ್ನು ಸಿಬಿಐಗೆ ವಹಿಸಬೇಕು ಎಂದು ಗುರು ರಾಘವೇಂದ್ರ ಕೋ–ಆಪರೇಟಿವ್ ಬ್ಯಾಂಕ್ ಷೇರುದಾರರು ಮತ್ತು ಠೇವಣಿದಾರರ ಹಿತರಕ್ಷಣಾ ವೇದಿಕೆಯ ಮಹಾಪೋಷಕ ಶಂಕರ ಗುಹಾ ದ್ವಾರಕಾನಾಥ್ ಅವರು ಆಗ್ರಹಿಸಿದರು.

'ಸುಮಾರು 120 ಸೊಸೈಟಿಗಳಲ್ಲಿ ಹಗರಣಗಳು ನಡೆದಿವೆ. ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ₹2800 ಕೋಟಿ, ಗುರು ಸಾರ್ವಭೌಮ ಸಹಕಾರ ಬ್ಯಾಂಕ್‌ನಲ್ಲಿ ₹300 ಕೋಟಿ, ವಶಿಷ್ಠ ಸೌಹಾರ್ದ ಸಹಕಾರಿ ಬ್ಯಾಂಕ್‌ನಲ್ಲಿ ₹800ಕೋಟಿ, ಕಣ್ವ ಸೊಸೈಟಿಯಲ್ಲಿ ₹2000 ಕೋಟಿ, ನಾಗರತ್ನ ಸೊಸೈಟಿಯಲ್ಲಿ ₹150 ಕೋಟಿ ಮತ್ತು ಮಹಾಗಣಪತಿ ಸೊಸೈಟಿಗಳಲ್ಲಿ ₹40 ಕೋಟಿಯ ಹಗರಣ ನಡೆದಿದೆ. ಈ ಎಲ್ಲ ಸಹಕಾರ ಬ್ಯಾಂಕ್‌ಗಳ ಸಮಗ್ರ ತನಿಖೆ ನಡೆಸಬೇಕು. ಈ ಹಗರಣದಲ್ಲಿ 1.8 ಕೋಟಿ ಜನ ಸಂತ್ರಸ್ತರಾಗಿದ್ದಾರೆ' ಎಂದು ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಹಗರಣದ ತನಿಖೆಯನ್ನು ಮೂರು ವರ್ಷಗಳ ಹೋರಾಟದ ಬಳಿಕ ಈಗ ಸಿಬಿಐಗೆ ಶಿಫಾರಸು ಮಾಡಲಾಗಿದೆ. ಈ ತನಿಖೆಯಿಂದ ಹಗರಣದಲ್ಲಿ ಯಾರ ಯಾರು ಭಾಗಿಯಾಗಿದ್ದಾರೆ ಎಂಬುದು ಬೆಳಕಿಗೆ ಬರಬೇಕು. ಸಹಕಾರಿ ಸಚಿವರು ಹತ್ತು ದಿನಗಳ ಹಿಂದೆ ಸಿಬಿಐ ತನಿಖೆ ಬೇಕಾಗಿಲ್ಲ ಎಂದಿದ್ದರು. ಆದರೆ, ಚುನಾವಣೆ ಉದ್ದೇಶಕ್ಕಾಗಿ ಸಿಬಿಐಗೆ ವರ್ಗಾಯಿಸಿದ್ದಾರೆ. ಕೂಡಲೇ ತನಿಖೆ ಪ್ರಾರಂಭಿಸಿ ಸಂತ್ರಸ್ತರಿಗೆ ಪರಿಹಾರ ಒದಗಿಸಬೇಕು' ಎಂದರು.

'ಸಂತ್ರಸ್ತ ಠೇವಣಿದಾರರು ಮತ್ತು ಷೇರುದಾರರಲ್ಲಿ ಈಗಾಗಲೇ 150ಕ್ಕೂ ಜನ ಮೃತಪಟ್ಟಿದ್ದಾರೆ. ಈಗ ಮತ್ತೆ ವಿಳಂಬವಾಗುವುದು ಸರಿಯಲ್ಲ. ವಿಮೆಯ ಹಣ ಕೆಲವರಿಗೆ ಮಾತ್ರ ದೊರಕಿದೆ. ಶೇ 90ಕ್ಕಿಂತ ಹೆಚ್ಚು ಪರಿಹಾರ ಬರಬೇಕಾಗಿದೆ' ಎಂದರು.

'ಸ್ಥಳೀಯ ಶಾಸಕ, ಸಂಸದರ ವೈಫಲ್ಯ'

'ಸಂಸದ ತೇಜಸ್ವಿಸೂರ್ಯ ಹಾಗೂ ಶಾಸಕ ರವಿ ಸುಬ್ರಮಣ್ಯ ಈ ಹಗರಣವನ್ನು ನಿರ್ವಹಿಸುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ' ಎಂದು ಶಂಕರ ಗುಹಾ ದ್ವಾರಕಾನಾಥ್ ಆರೋಪಿಸಿದರು.

ಬೈಯಪ್ಪನಹಳ್ಳಿ ಎಲಿವೇಟೆಡ್ ರೋಟರಿ: ₹345 ಕೋಟಿ ಅನುದಾನಕ್ಕೆ ಮನವಿ

ಬೆಂಗಳೂರು: ಬೈಯಪ್ಪನಹಳ್ಳಿ ರೈಲ್ವೆ ಟರ್ಮಿನಲ್‌ಗೆ ನಾಲ್ಕು ಕಡೆಗಳಿಂದ ಪ್ರವೇಶ ಕಲ್ಪಿಸಲು ಅನುವಾಗುವಂತೆ ಎಲಿವೇಟೆಡ್ ರೋಟರಿ (ಮೇಲ್ಸೇತುವೆ) ನಿರ್ಮಿಸಲು ₹345 ಕೋಟಿ ಅನುದಾನ ನೀಡುವಂತೆ ರಾಜ್ಯ ಸರ್ಕಾರಕ್ಕೆ ಬಿಬಿಎಂಪಿ ಮನವಿ ಮಾಡಿದೆ.

ಹವಾನಿಯಂತ್ರಿತ ವ್ಯವಸ್ಥೆಯೊಂದಿಗೆ ನಿರ್ಮಾಣವಾಗಿ ರುವ ಟರ್ಮಿನಲ್‌ಗೆ ಸೂಕ್ತ ಸಂಪರ್ಕ ಮಾರ್ಗಗಳಿಲ್ಲ. ಆದ್ದರಿಂದ ನಗರದಲ್ಲಿ ಪ್ರಥಮವಾಗುವ ಈ ಯೋಜನೆಯನ್ನು ವಿನ್ಯಾಸ, ನಿರ್ಮಾಣ, ನಿರ್ವಹಣೆ, ವರ್ಗಾವಣೆ (ಡಿಬಿಓಟಿ) ಮಾದರಿಯಲ್ಲಿ ನಿರ್ಮಿಸಲು ಅನುದಾನ ನೀಡಲು ನಗರಾಭಿವೃದ್ಧಿ ಇಲಾಖೆಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಪತ್ರ ಬರೆದಿದ್ದಾರೆ.

ಮಾರುತಿಸೇವಾನಗರ, ಬಾಣಸವಾಡಿ, ಕಮ್ಮನಹಳ್ಳಿ ಮತ್ತು ಬೈಯಪ್ಪನಹಳ್ಳಿಯನ್ನು ಈ ಮೇಲ್ಸೇತುವೆ ಸಂಪರ್ಕಿಸಲಿದೆ. ರೈಲ್ವೆ ಮೇಲ್ಸೇತುವೆ ಇಲ್ಲಿದ್ದು, ಇದನ್ನು ನೆಲಸಮಗೊಳಿಸಲು ಉದ್ದೇಶಿಸಲಾಗಿದೆ. ಅಲ್ಲದೆ, ಭೂಸ್ವಾಧೀನಕ್ಕೆ ಪ್ರತ್ಯೇಕವಾಗಿ ₹68 ಕೋಟಿ ಅಂದಾಜು ಮಾಡಲಾಗಿದೆ. ಎಲಿವೇಟೆಡ್ ಕಾರಿಡಾರ್ ನಿರ್ಮಿಸಲು ನೈರುತ್ಯ ರೈಲ್ವೆ ಮತ್ತು ಸಬ್ ಅರ್ಬನ್ ರೈಲ್ವೆ ಪ್ರಾಧಿಕಾರ (ಕೆ–ರೈಡ್) ನಿರಾಕ್ಷೇಪಣಾ ಪತ್ರ ನೀಡಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಶಾಂತಾ ಸೇರಿ ಮೂವರಿಗೆ ಪ್ರಶಸ್ತಿ



ಶಾಂತಾ ನರಸಿಂಹನ್



ಗೀತಾ ರಮಾನಂದ



ವಿಘ್ನರಾಜ್ ಸಂಪಗೋಡ್

ಬೆಂಗಳೂರು: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್ ತನ್ನ ವಾರ್ಷಿಕ ಪ್ರಶಸ್ತಿಗಳನ್ನು ಘೋಷಿಸಿದ್ದು, 'ಜೀವಮಾನ ಸಾಧನೆ ಪುರಸ್ಕಾರ'ಕ್ಕೆ ಗಾಯಕಿ ಶಾಂತಾ ನರಸಿಂಹನ್ ಆಯ್ಕೆಯಾಗಿದ್ದಾರೆ.

'ಕಲಾಜ್ಯೋತಿ' ಪ್ರಶಸ್ತಿಗೆ ವೀಣಾ ವಾದಕಿ ಗೀತಾ ರಮಾನಂದ ಅವರು ಭಾಜನರಾಗಿದ್ದಾರೆ. ಈ ಪ್ರಶಸ್ತಿಗಳು ತಲಾ ₹ 20 ಸಾವಿರ ನಗದು ಒಳಗೊಂಡಿವೆ. 'ನಾದಜ್ಯೋತಿ' ಪುರಸ್ಕಾರಕ್ಕೆ ಗಾಯಕ ವಿಘ್ನರಾಜ್ ಸಂಪಗೋಡ್ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ₹ 15 ಸಾವಿರ ನಗದು ಒಳಗೊಂಡಿದೆ.

ಟ್ರಸ್ಟ್ ತನ್ನ 58ನೇ ನಾದಜ್ಯೋತಿ ಸಂಗೀತ ಸಂಭ್ರಮದ ಸಮಾರೋಪ ಸಮಾರಂಭವನ್ನು ಫೆ.26ರಂದು ಹಮ್ಮಿಕೊಂಡಿದೆ. ಈ ಸಮಾರಂಭದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು ಎಂದು ಟ್ರಸ್ಟ್‌ನ ಕಾರ್ಯದರ್ಶಿ ಸತ್ಯನಾರಾಯಣರಾವ್ ಕಟ್ಟೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಇಎಸ್‌ಐ ಸಂಸ್ಥೆ ಸೊಸೈಟಿ ವ್ಯಾಪ್ತಿಗೆ ಬೇಡ'

ಬೆಂಗಳೂರು: ಕಾರ್ಮಿಕ ಇಲಾಖೆ ಯಡಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ರಾಜ್ಯ ವಿಮಾ ಯೋಜನೆಯ ವೈದ್ಯಕೀಯ ಸೇವೆಗಳ ಇಲಾಖೆಯನ್ನು(ಇಎಸ್‌ಐ ಆಸ್ಪತ್ರೆ) ಸೊಸೈಟಿಯಾಗಿ ಪರಿವರ್ತಿಸುವ ಆದೇಶವನ್ನು ಸರ್ಕಾರ ಕೂಡಲೇ ಹಿಂಪಡೆಯಬೇಕು ಎಂದು ರಾಷ್ಟ್ರೀಯ ಮಜ್ದೂರ್ ಕಾಂಗ್ರೆಸ್ ಒತ್ತಾಯಿಸಿದೆ.

'ಈ ಆದೇಶದಿಂದ ಇಎಸ್‌ಐ ವಿಮಾದಾರರು ಮತ್ತು ಅವರ ಕುಟುಂಬದ ಸದಸ್ಯರಿಗೆ ಸಿಗುತ್ತಿರುವ ವೈದ್ಯಕೀಯ ಸೌಲಭ್ಯದಿಂದ ವಂಚಿತರಾಗುತ್ತಾರೆ' ಎಂದು ಸಂಘದ ಅಧ್ಯಕ್ಷ ವಿ. ವೆಂಕಟೇಶ್ ಬುಧವಾರ ಸುದ್ದಿಗೋಷ್ಠಿಯಲ್ಲಿ ಆಕ್ಷೇಪ ವ್ಯಕ್ತಪಡಿಸಿದರು.

ಶೇ 10ರಷ್ಟು ಮೀಸಲಾತಿ ಹೆಚ್ಚಿಸಲು ಮುಸ್ಲಿಂ ಸಮುದಾಯ ಆಗ್ರಹ

ಬೆಂಗಳೂರು: ಪ್ರವರ್ಗ 2ಬಿದಲ್ಲಿ ಬರುವ ಮುಸ್ಲಿಂ ಸಮುದಾಯಕ್ಕೆ ಶೇ 10ರಷ್ಟು ಮೀಸಲಾತಿ ಹೆಚ್ಚಿಸಬೇಕು ಎಂದು ಕರ್ನಾಟಕ ರಾಜ್ಯ ಮುಸ್ಲಿಂ ಜನಾಂಗದ ಜಾಗೃತ ವೇದಿಕೆ ಒತ್ತಾಯಿಸಿದೆ.

'ಮುಸ್ಲಿಂ ಸಮುದಾಯವು ಸದ್ಯ ಶೇ 4ರಷ್ಟು ಮೀಸಲಾತಿಯನ್ನು ಪಡೆಯುತ್ತಿದೆ. ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ ಶೇ 10ಕ್ಕೆ ಹೆಚ್ಚಿಸಬೇಕು. ಈ ಪ್ರವರ್ಗದಲ್ಲಿ ಬೇರೆ ಯಾವುದೇ ಸಮುದಾಯವನ್ನು ಸೇರಿಸಬಾರದು. ಮುಸ್ಲಿಂ ಸಮುದಾಯದವರನ್ನು ಕೆಪಿಎಸ್‌ಸಿ ಸೇರಿ ನೇಮಕಾತಿ ಪ್ರಾಧಿಕಾರಗಳ ಸದಸ್ಯರನ್ನಾಗಿ ನೇಮಿಸಬೇಕು' ಎಂದು ವೇದಿಕೆಯ ಅಧ್ಯಕ್ಷ ಗುಲ್‌ಷದ್ ಅಹ್ಮದ್ ಬಿ.ಝೆಡ್. ಬುಧವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

'2006ರಲ್ಲಿ ನ್ಯಾ. ರಾಜೇಂದ್ರ ಸಾಚಾರ್ ನೇತೃತ್ವದ ಸಮಿತಿಯು ಈ ಸಮುದಾಯದ ಏಳಿಗೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಶಿಫಾರಸು ಮಾಡಿದೆ' ಎಂದರು.

'ರಂಗನಾಥ್ ಮಿಶ್ರಾ ಕಮಿಷನ್ ಹಾಗೂ ಭಾಷಾವಾರು ಅಲ್ಪಸಂಖ್ಯಾತರ ರಾಷ್ಟ್ರೀಯ ಆಯೋಗದ ಪ್ರಕಾರ ಅಲ್ಪಸಂಖ್ಯಾತರಿಗೆ ಸರ್ಕಾರಿ ನೌಕರಿ ಮತ್ತು ಉನ್ನತ ಶಿಕ್ಷಣದ ವಿದ್ಯಾ ಸಂಸ್ಥೆಗಳಲ್ಲಿ ಮುಸ್ಲಿಮರಿಗೆ ಶೇ 10ರಷ್ಟು ಹಾಗೂ ಇತರೆ ಅಲ್ಪಸಂಖ್ಯಾತರಿಗೆ ಶೇ 5ರಷ್ಟು ಮೀಸಲಾತಿ ಸೌಲಭ್ಯ ನೀಡಬೇಕು ಎಂದು ವರದಿ ನೀಡಿದೆ' ಎಂದು ತಿಳಿಸಿದರು.

ಆರ್‌.ವಿ. ದಂತ ವೈದ್ಯ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಜತೆ ಸಂವಾದ

ಸಮಯ ಪಾಲಿಸಿದರೆ ಒತ್ತಡವಿರದು: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿ ಜೀವನದಲ್ಲಿ ಸಮಯಪಾಲನೆ ಬಹಳ ಮುಖ್ಯ. ಸಮಯಕ್ಕೆ ಸರಿಯಾಗಿ ಕೆಲಸಗಳನ್ನು ನಿರ್ವಹಿಸಿದರೆ ಜೀವನದಲ್ಲಿ ಒತ್ತಡವಿರುವುದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಗರದ ಆರ್‌.ವಿ. ದಂತ ವೈದ್ಯಕೀಯ ಕಾಲೇಜಿನಲ್ಲಿ ಬುಧವಾರ ನಡೆದ 'ಯುವ ಸಂಭಾಷಣೆ' ಸಂವಾದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಪ್ರಶ್ನೆಗೆ ಉತ್ತರಿಸಿದ ಅವರು, 'ವಿದ್ಯಾರ್ಥಿಗಳು ಓದಿನತ್ತ ಗಮನಹರಿಸದೇ ಟಿ.ವಿ ವೀಕ್ಷಣೆ, ಅನ್ಯ ಕೆಲಸಗಳಿಗೆ ಸಮಯ ನೀಡಿದರೆ ಮುಂದಿನ ದಿನಗಳಲ್ಲಿ ಒತ್ತಡ ಎದುರಿಸಬೇಕಾಗುತ್ತದೆ. ಸರಿಯಾದ ಸಮಯದಲ್ಲಿ ಓದು, ಸಾಕಷ್ಟು ನಿದ್ದೆ ಮತ್ತು ಬೆಳಿಗ್ಗೆ ವ್ಯಾಯಾಮ ಮಾಡುವುದನ್ನು ರೂಢಿಸಿಕೊಳ್ಳಬೇಕು' ಎಂದರು.

'ಯಾವ ವೃತ್ತಿ ನಿಮಗೆ ಹೆಚ್ಚು ಖುಷಿ ನೀಡಿದೆ' ಎಂಬ ಕೂ ಆ್ಯಪ್ ಸಂಸ್ಥಾಪಕ ಅಪ್ರಮೇಯ ಅವರ ಪ್ರಶ್ನೆಗೆ, 'ವಿದ್ಯಾರ್ಥಿ ಜೀವನದಲ್ಲಿ ಕೊನೆ ಬೆಂಚ್‌ನಲ್ಲಿ ಕುಳಿತ ದಿನಗಳು ಅತ್ಯಂತ ಖುಷಿ ನೀಡಿವೆ. ನಾನು 40 ವರ್ಷಗಳ ಹಿಂದೆ ಕೆಎಲ್‌ಇ ಕಾಲೇಜಿನಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿಯಾಗಿದ್ದೆ. ಈಗಲೂ ಕಾಲೇಜಿನ ಜತೆ ನಂಟು ಇರಿಸಿಕೊಂಡಿದ್ದೇನೆ. ಉದ್ಯಮಿಯಾಗಿ ಇನ್ನೊಬ್ಬರಿಗೆ ಉದ್ಯೋಗ ನೀಡಿದಾಗಲೂ ಹೆಚ್ಚು ಖುಷಿ, ಸಂತೃಪ್ತಿಯ ಭಾವ ಅನುಭವಿಸಿದ್ದೇನೆ' ಎಂದು ಹೇಳಿದರು.

'ರಾಜಕೀಯಕ್ಕೆ ಬಂದ ಬಳಿಕ ಕಷ್ಟದಲ್ಲಿದ್ದವರಿಗೆ ಸ್ಪಂದಿಸುವ ಕೆಲಸ ಮಾಡುತ್ತಿದ್ದೇನೆ. ರಾಜಕಾರಣ ಸಾಕಷ್ಟು ಸವಾಲಿನ ವೃತ್ತಿಯಾದರೂ ತೃಪ್ತಿ ತಂದಿದೆ' ಎಂದರು.

ಯಶಸ್ಸು ವೈಯಕ್ತಿಕ: 'ಯಶಸ್ಸು ಎನ್ನುವುದು ವೈಯಕ್ತಿಕವಾದುದು. ವ್ಯಕ್ತಿಯೊಬ್ಬ ತಾನು ಅಂದುಕೊಂಡಿದ್ದನ್ನು ಸಾಧಿಸಿದರೆ ಅದು ಯಶಸ್ಸು. ಅದನ್ನು ಮೀರಿ ಮುನ್ನಡೆಯುವುದು ಸಾಧನೆ. ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣಗಳನ್ನು ಸೀಮಿತವಾಗಿ ಬಳಸಿಕೊಳ್ಳಬೇಕು. ಸ್ವಂತ ಯೋಚನಾ ಶಕ್ತಿ ಬೆಳಸಿಕೊಳ್ಳಬೇಕು' ಎಂದು ವಿದ್ಯಾರ್ಥಿಗಳ ಪ್ರಶ್ನೆಗೆ ಬೊಮ್ಮಾಯಿ ಉತ್ತರಿಸಿದರು.

ಪ್ರಧಾನಿ ನರೇಂದ್ರ ಮೋದಿಯವರ ಜತೆಗಿನ ಒಡನಾಟದ ಕುರಿತು ವಿದ್ಯಾರ್ಥಿಯೊಬ್ಬರು ಕೇಳಿದಾಗ, 'ಮೋದಿಯವರಿಗೆ ಸದಾ ಹೊಸತನ್ನು ಕಲಿಯುವ ವ್ಯಕ್ತಿ. ಪ್ರತಿ ವಿಷಯವನ್ನೂ ಸಕಾರಾತ್ಮಕವಾಗಿ ನೋಡುತ್ತಾರೆ. ಅವರ ವ್ಯಕ್ತಿತ್ವ ಪರಿಪೂರ್ಣವಾದುದು' ಎಂದರು.

ಕ್ರೀಡಾಪಟು ಪಂಕಜ್ ಅಡ್ವಾಣಿ, ನಟಿ ಪ್ರಣೀತಾ, ಗಾಯಕ ಚಂದನ್ ಶೆಟ್ಟಿ, ಬಿಜೆಪಿ ಯುವ ಮೋರ್ಚಾ ಮುಖಂಡ ಅನಿಲ್ ಶೆಟ್ಟಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

'ಕಾಲೇಜಿನಲ್ಲಿ ಚುನಾವಣೆ ಬೇಡ'

'ಕಾಲೇಜು ಜೀವನ ಶಿಕ್ಷಣಕ್ಕೆ ಮೀಸಲಾದುದು. ಓದುವ ಸಮಯದಲ್ಲಿ ಓದಬೇಕು. ವಿದ್ಯಾರ್ಥಿಗಳು ಕಾಲೇಜು ಜೀವನವನ್ನು ಅನುಭವಿಸಬೇಕು. ಕಾಲೇಜಿನಲ್ಲಿ ಚುನಾವಣೆ ಬೇಡ, ಅದೊಂದು ದೊಡ್ಡ ಜವಾಬ್ದಾರಿ' ಎಂದು ಕಾಲೇಜುಗಳಲ್ಲಿ ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಯೊಬ್ಬರ ಪ್ರಶ್ನೆಗೆ ಮುಖ್ಯಮಂತ್ರಿ ಉತ್ತರಿಸಿದರು.

ಗುರುವಾರ, ಜನವರಿ 19, 2023 | ಬೆಂಗಳೂರು | ₹ 6.00 | ಸಂಪುಟ 26 | ಸಂಚಿಕೆ 19 | ಪುಟ 12 + 2

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತ ಪ್ರಬಂಧ



ಆಳ-ಅಗಲ
ವನ್ಯಜೀವಿ ಕಾಯ್ದೆಗೆ ತಿದ್ದುಪಡಿ ಸಂರಕ್ಷಣೆ ನಿಯಮಗಳು ಸಡಿಲ

‘ಉಸ್ತುವಾರಿ ನೇಮಕಕ್ಕೆ ಇರುವ ಅಧಿಕಾರವೇನು?’ 6

ಬಾಕಿ ಪಾವತಿಗೆ ಆಗ್ರಹಿಸಿ ಗುತ್ತಿಗೆದಾರರ ಪ್ರತಿಭಟನೆ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,045 ▲	18,165 ▲	₹ 58,450 (ಬೆಂಗಳೂರು) ▼	₹ 70,700 (ಬೆಂಗಳೂರು) ▼	81.41 ▲

ಎಂಎನ್‌ಜಿ ಫೌಂಡೇಷನ್‌ನಿಂದ ಬಡವರಿಗೆ ಬಾಡಿಗೆರಹಿತ ಪೂರೈಕೆ • ವರದಕ್ಷಿಣೆ ರಹಿತ 1,500ಕ್ಕೂ ಹೆಚ್ಚು ಮದುವೆಗೆ ಕೊಂಡಿಯಾದ ಸಂಸ್ಥೆ

ವಧು-ವರರ ದುಬಾರಿ ಉಡುಗೆಯ ಆಸೆಗೆ ಬಣ್ಣ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ವಧುವಿನ ಉಡುಪಿನ ಸೌಲಭ್ಯ ಪಡೆದವರು 2,000ಕ್ಕೂ ಅಧಿಕ
- ವಾರಕ್ಕೆ ಸರಾಸರಿ 25 ಜನರಿಂದ ಬೇಡಿಕೆ

ಮಂಗಳೂರು: ಬಡವರಿಗೆ ಮದುವೆ ಉಡುಪುಗಳ ಖರೀದಿ ಹೊರೆಯಾಗಬಾರದು ಎಂಬ ಆಶಯದೊಂದಿಗೆ ಮದುವಣಗಿತ್ತಿಯರ ಉಡುಗೆಗಳನ್ನು ಬಾಡಿಗೆ ರಹಿತವಾಗಿ ಒದಗಿಸುತ್ತಿರುವ ‘ಎಂಎನ್‌ಜಿ ಫೌಂಡೇಷನ್’ ಎಂಬ ಸ್ವಯಂ ಸೇವಾ ಸಂಸ್ಥೆಯು, ಈಗ ಮದುಮಗ ಧರಿಸುವ ಕೋಟ್‌ಗಳನ್ನು ಕೂಡ ಒದಗಿಸಿ, ಬಡ ಕುಟುಂಬದ ಪಾಲಕರ ಮೊಗದಲ್ಲಿ ಮಂದಹಾಸ ಮೂಡಿಸುತ್ತಿದೆ.

ಆರ್ಥಿಕ ಮುಗ್ಗಟ್ಟಿನಲ್ಲಿರುವವರ ವೈದ್ಯಕೀಯ ವೆಚ್ಚಕ್ಕೆ ನೆರವು ನೀಡುವ ಮೂಲಕ 8 ವರ್ಷಗಳ ಹಿಂದೆ ಸೇವಾ ಚಟುವಟಿಕೆ ಆರಂಭಿಸಿರುವ ಎಂಎನ್‌ಜಿ ಫೌಂಡೇಷನ್, ತಂದೆಯನ್ನು ಕಳೆದುಕೊಂಡ ಬಡ ಹೆಣ್ಣು ಮಕ್ಕಳ ಕುಟುಂಬಕ್ಕೆ ನೆರವು ನೀಡುವ ವೇಳೆ ಅವರಿಗೆ, ಮದುವೆ ಉಡುಪುಗಳ ಖರೀದಿಯೇ ದೊಡ್ಡ ಹೊರೆಯಾಗುವುದನ್ನು ಗಮನಿಸಿತು. ಆ ವೇಳೆ ಮದುಮಗಳು ತೊಡುವ 10 ಉಡುಗೆಗಳನ್ನು ಖರೀದಿಸಿ, ಹಲವರಿಗೆ ನೆರವಾಯಿತು. ಸಂಸ್ಥೆಯ ಕಾರ್ಯಕ್ಕೆ ಅನೇಕರು ಕೈ ಜೋಡಿಸಿದರು.


ಎಂಎನ್‌ಜಿ ಫೌಂಡೇಷನ್‌ನಲ್ಲಿ ಉಚಿತವಾಗಿ ನೀಡಲು ಸಂಗ್ರಹಿಸಿರುವ ಸೂಟ್‌ಗಳು

ಈಗ ಸಂಸ್ಥೆಯಲ್ಲಿ ವಧು ತೊಡುವ 1,500ಕ್ಕೂ ಹೆಚ್ಚು ಉಡುಗೆಗಳ ಸಂಗ್ರಹವಿದೆ. ವರ ಧರಿಸುವ 100ಕ್ಕೂ ಅಧಿಕ ಸೂಟ್‌ಗಳು ಇವೆ.

‘ಮದುವೆಗೆ ಒಳ್ಳೆಯ ಉಡುಗೆ ತೊಡಬೇಕು ಎಂಬ ಕನಸು ಆರ್ಥಿಕ ಸಮಸ್ಯೆ ಇರುವ ಯುವತಿಗೆ ಮರೀಚಿಕೆಯಾಗುತ್ತದೆ. ಬಾಡಿಗೆ ಉಡುಗೆಗೆ ದಿನಕ್ಕೆ ₹ 5,000 ವರೆಗೆ ವೆಚ್ಚ ಮಾಡಬೇಕಾಗುತ್ತದೆ. ಈ ಕಾರಣಕ್ಕೆ ಯುವತಿಯರ ಆಸೆ ಕಮರಿಹೋಗಬಾರದು ಎಂದು ಬಾಡಿಗೆರಹಿತವಾಗಿ ಉಡುಗೆ ಪೂರೈಸುತ್ತೇವೆ. ಮದುವೆ ಮುಗಿದ ಮೇಲೆ ಹೆಚ್ಚಿನ ಸಂದರ್ಭಗಳಲ್ಲಿ ನಾವೇ ಅವರ ಮನೆಗೆ ಹೋಗಿ ಅದನ್ನು ಸಂಗ್ರಹಿಸುತ್ತೇವೆ. ಇದೇ ಮಾದರಿಯಲ್ಲಿ ಒಂದು ವರ್ಷದ ಈಚೆಗೆ ವರ ಧರಿಸುವ ಸೂಟ್‌ಗಳನ್ನು ಖರೀದಿಸಿಟ್ಟಿದ್ದೇವೆ. ಕೆಲ ಶ್ರೀಮಂತ ಕುಟುಂಬದವರು ತಮ್ಮ ಮಗ ಅಥವಾ ಮಗಳ ಮದುವೆಯ ವೇಳೆ ಒಂದು ಜತೆ ಹೆಚ್ಚುವರಿಯಾಗಿ ಖರೀದಿಸಿ, ಸಂಸ್ಥೆಗೆ ಕೊಡುಗೆ ನೀಡುತ್ತಾರೆ’ ಎಂದು ಎಂಎನ್‌ಜಿ ಫೌಂಡೇಷನ್ ಸ್ಥಾಪಕ, ಉದ್ಯಮಿ ಮೊಹಮ್ಮದ್ ಇಲ್ಯಾಸ್ ಹೇಳಿದರು.

‘ನೆರವು ಪಡೆದವರು ತಾವು ಆರ್ಥಿಕವಾಗಿ ಸಬಲರಾದ ಮೇಲೆ ಸಂಸ್ಥೆಗೆ ನೆರವು ನೀಡುತ್ತಾರೆ. ಇನ್ನು ಕೆಲವರು ತಮ್ಮ ಮದುವೆಗೆ ಖರೀದಿಸಿದ ಲಕ್ಷ ರೂಪಾಯಿಗೂ ಹೆಚ್ಚು ಬೆಲೆಬಾಳುವ ಬಟ್ಟೆಯನ್ನು ಒಮ್ಮೆ ಧರಿಸಿ, ಸಂಸ್ಥೆಗೆ ದೇಣಿಗೆ ನೀಡುತ್ತಾರೆ. ನಾವು ಡ್ರೈ ವಾಷ್ ಮಾಡಿ ಒಪ್ಪವಾಗಿ ಇಡುತ್ತೇವೆ. ವಧು- ವರರು ತಮಗೆ ಬೇಕಾದ ಬಟ್ಟೆ ಆಯ್ಕೆ ಮಾಡಿಕೊಂಡೊಯ್ಯುತ್ತಾರೆ. ಎಲ್ಲ ಸಮುದಾಯ, ಧರ್ಮದವರಿಗೂ ಈ ಸೌಲಭ್ಯ ಮುಕ್ತವಾಗಿದೆ’ ಎಂದು ವಿವರಿಸಿದರು.

ಸಂಪರ್ಕ ಸಂಖ್ಯೆ: 76192 33322.

ವಿಕಿಪೀಡಿಯಾ ಮಾಹಿತಿ ವಿಶ್ವಾಸಾರ್ಹವಲ್ಲ: ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ‘ವಿಕಿಪೀಡಿಯಾದಂತಹ ಆನ್‌ಲೈನ್ ಮಾಹಿತಿ ಮೂಲಗಳು ಜನಸಮೂಹ ಒದಗಿಸುವ ಮಾಹಿತಿಯನ್ನು ಆಧರಿಸಿರುತ್ತವೆ. ತಮಗೆ ಗೊತ್ತಿರುವ ವಿಚಾರಗಳನ್ನು ಸೇರ್ಪಡೆ ಮಾಡುವ ಅವಕಾಶವನ್ನೂ ಅವು ಬಳಕೆದಾರರಿಗೆ ಒದಗಿಸುತ್ತವೆ. ಹೀಗಾಗಿ ಅವುಗಳನ್ನು ಸಂಪೂರ್ಣವಾಗಿ ಅವಲಂಬಿಸುವಂತಿಲ್ಲ. ಅವು ದಾರಿ ತಪ್ಪಿಸುವಂತಹ ಮಾಹಿತಿ ಪಸರಿಸುವ ಸಾಧ್ಯತೆಯೂ ಇದೆ’ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಅಭಿಪ್ರಾಯಪಟ್ಟಿದೆ.

ಅರ್ಜಿಯೊಂದರ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ವಿಕ್ರಂನಾಥ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠ, ‘ವಿಕಿಪೀಡಿಯಾದಂತಹ ಮಾಹಿತಿ ಮೂಲಗಳು ಉಚಿತವಾಗಿ ಜ್ಞಾನ ಒದಗಿಸುತ್ತವೆ ಎಂಬುದನ್ನು ನಾವು ಒಪ್ಪುತ್ತೇವೆ. ಆದರೆ ಕಾನೂನು ವಿವಾದಗಳಿಗೆ ಸಂಬಂಧಿಸಿದ ಮಾಹಿತಿಗಾಗಿ ಇಂತಹ ಮೂಲಗಳನ್ನು ಅವಲಂಬಿಸುವಾಗ ಎಚ್ಚರದಿಂದ ಇರಬೇಕು’ ಎಂದು ಪೀಠ ಹೇಳಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ಅಂತಿಮ ವೇಳಾಪಟ್ಟಿ ಪ್ರಕಟ

ಬೆಂಗಳೂರು: 2022–23ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಗಳ ಅಂತಿಮ ವೇಳಾಪಟ್ಟಿಯನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಬುಧವಾರ ಬಿಡುಗಡೆ ಮಾಡಿದೆ. ಮಾರ್ಚ್ 31ರಿಂದ ಏಪ್ರಿಲ್ 15ರವರೆಗೆ ಪರೀಕ್ಷೆಗಳು ನಡೆಯಲಿವೆ.

ಮಾರ್ಚ್ 31ರಂದು ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್, ಸಂಸ್ಕೃತ (100 ಅಂಕಗಳು), ಏ.3ರಂದು ಗಣಿತ, ವಿಭಿನ್ನ ಸಾಮರ್ಥ್ಯದ ಅಭ್ಯರ್ಥಿಗಳಿಗೆ ಸಮಾಜಶಾಸ್ತ್ರ (80 ಅಂಕಗಳು), 6ರಂದು ದ್ವಿತೀಯ ಭಾಷೆ ಇಂಗ್ಲಿಷ್, ಕನ್ನಡ (80 ಅಂಕಗಳು), 8ರಂದು ಎಂಜಿನಿಯರಿಂಗ್, ಅರ್ಥಶಾಸ್ತ್ರ ಸೇರಿದಂತೆ ಇತರೆ ವಿಷಯಗಳು (ಜೆಟಿಎಸ್ ಶಾಲೆಯ ವಿದ್ಯಾರ್ಥಿಗಳಿಗೆ), 10ರಂದು ವಿಜ್ಞಾನ, ರಾಜ್ಯಶಾಸ್ತ್ರ, ಹಿಂದೂಸ್ತಾನಿ, ಕರ್ನಾಟಕ ಸಂಗೀತ (80 ಅಂಕಗಳು) 12ರಂದು ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು (80 ಅಂಕಗಳು), ಮಾಹಿತಿ ತಂತ್ರಜ್ಞಾನ, ರಿಟೇಲ್, ಆಟೊಮೊಬೈಲ್, ಹೆಲ್ತ್ ಕೇರ್, ಬ್ಯೂಟಿಷಿಯನ್ (60 ಅಂಕಗಳು), 15ರಂದು ಸಮಾಜ ವಿಜ್ಞಾನ (80 ಅಂಕಗಳು) ಪರೀಕ್ಷೆಗಳು ನಡೆಯಲಿವೆ.

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



3 ರಾಜ್ಯಗಳ ಚುನಾವಣೆಗೆ ಮುಹೂರ್ತ ನಿಗದಿ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ 2023ರಲ್ಲಿ ಮೊದಲ ಚುನಾವಣೆಗೆ ಮುಹೂರ್ತ ನಿಗದಿಯಾಗಿದೆ. ಈಶಾನ್ಯ ರಾಜ್ಯಗಳಾದ ತ್ರಿಪುರಾ, ಮೇಘಾಲಯ ಹಾಗೂ ನಾಗಾಲ್ಯಾಂಡ್ ವಿಧಾನಸಭೆಗಳ ಚುನಾವಣೆಗೆ ಕೇಂದ್ರ ಚುನಾವಣಾ ಆಯೋಗ ಬುಧವಾರ ವೇಳಾಪಟ್ಟಿ ಪ್ರಕಟಿಸಿದೆ.

ಚುನಾವಣಾ ವೇಳಾಪಟ್ಟಿ

ಪ್ರಕ್ರಿಯೆ	ತ್ರಿಪುರಾ	ಮೇಘಾಲಯ, ನಾಗಾಲ್ಯಾಂಡ್
ಅಧಿಸೂಚನೆ	ಜನವರಿ 21	ಜನವರಿ 31
ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ	ಜನವರಿ 30	ಫೆಬ್ರುವರಿ 7
ಮತದಾನ	ಫೆಬ್ರುವರಿ 16	ಫೆಬ್ರುವರಿ 27
ಮತ ಎಣಿಕೆ	ಮಾರ್ಚ್ 2	ಮಾರ್ಚ್ 2

ತ್ರಿಪುರಾ ವಿಧಾನಸಭೆಗೆ ಫೆಬ್ರುವರಿ 16 ರಂದು, ನಾಗಾಲ್ಯಾಂಡ್ ಹಾಗೂ ಮೇಘಾಲಯ ವಿಧಾನಸಭೆಗಳಿಗೆ ಫೆಬ್ರುವರಿ 27ರಂದು ಮತದಾನ ನಡೆಯಲಿದೆ. ಮೂರು ರಾಜ್ಯಗಳ ಮತ ಎಣಿಕೆಯನ್ನು ಮಾರ್ಚ್ 2ರಂದು ನಡೆಸಲಾಗುವುದು ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

2024ರ ಲೋಕಸಭಾ ಚುನಾವಣೆಗೆ ಮುಂಚಿತವಾಗಿ ಈ ವರ್ಷ 9 ವಿಧಾನಸಭೆಗಳಿಗೆ ನಡೆಯುವ ಚುನಾವಣೆ ರಾಜಕೀಯ ಪಕ್ಷಗಳಿಗೆ ನಿರ್ಣಾಯಕ. ತ್ರಿಪುರಾದಲ್ಲಿ ಬಿಜೆಪಿ ಅಧಿಕಾರದಲ್ಲಿದೆ. ಉಳಿದ ಎರಡು ರಾಜ್ಯಗಳಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಬೇಕು ಎಂಬ ಹವಣಿಕೆಯಲ್ಲಿ ಆ ಪಕ್ಷ ಇದೆ. ಈ ರಾಜ್ಯಗಳಲ್ಲಿ ಕಳೆದುಕೊಂಡ ತಮ್ಮ ಪ್ರಭಾವವನ್ನು ಮರಳಿ ಪಡೆಯುವ ಪ್ರಯತ್ನದಲ್ಲಿ ಕಾಂಗ್ರೆಸ್ ಹಾಗೂ ಎಡ ಪಕ್ಷಗಳು ಇವೆ. ಈ ಮೂರು ರಾಜ್ಯಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುವ ಮೂಲಕ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಶ್ಚಿಮ ಬಂಗಾಳದ ಆಚೆಗೆ ನೆಲೆ ವಿಸ್ತರಿಸುವ ಯತ್ನದಲ್ಲಿದೆ. ನಾಗಾಲ್ಯಾಂಡ್‌ನಲ್ಲಿ ನ್ಯಾಷನಲಿಸ್ಟ್ ಡೆಮೊಕ್ರಾಟಿಕ್ ಪ್ರೊಗ್ರೆಸಿವ್ ಪಾರ್ಟಿ (ಎನ್‌ಡಿಪಿಪಿ), ಮೇಘಾಲಯದಲ್ಲಿ ನ್ಯಾಷನಲ್ ಪೀಪಲ್ಸ್ ಪಾರ್ಟಿ (ಎನ್‌ಪಿಪಿ) ಅಧಿಕಾರದಲ್ಲಿವೆ.

ಮೂರು ರಾಜ್ಯಗಳು ತಲಾ 60 ಸದಸ್ಯ ಬಲವನ್ನು ಹೊಂದಿವೆ. ನಾಗಾಲ್ಯಾಂಡ್ ವಿಧಾನಸಭೆಯ ಅವಧಿ ಮಾರ್ಚ್ 12, ಮೇಘಾಲಯ ಹಾಗೂ ತ್ರಿಪುರಾ ವಿಧಾನಸಭೆಗಳ ಅವಧಿ ಕ್ರಮವಾಗಿ ಮಾರ್ಚ್ 15 ಹಾಗೂ 22ರಂದು ಕೊನೆಗೊಳ್ಳಲಿವೆ. ಮಾರ್ಚ್‌ನಲ್ಲಿ ಪರೀಕ್ಷೆಗಳು ನಡೆಯಲಿರುವ ಕಾರಣ ಫೆಬ್ರುವರಿಯಲ್ಲಿ ಚುನಾವಣೆ ಪ್ರಕ್ರಿಯೆ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ ಎಂದು ಮುಖ್ಯ ಚುನಾವಣಾ ಆಯುಕ್ತರು ತಿಳಿಸಿದರು.

ಎಲೆಕ್ಟ್ರಾನಿಕ್ ಮತ ಯಂತ್ರಗಳ (ಇವಿಎಂ) ಸಮಗ್ರತೆಯನ್ನು ಬಿಎಸ್ಪಿ ಮುಖ್ಯಸ್ಥೆ ಮಾಯಾವತಿ ಇತ್ತೀಚೆಗೆ ಪ್ರಶ್ನಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತರು, ‘ಈ ಯಂತ್ರಗಳ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದ ಹಲವು ರಾಜಕೀಯ ಪಕ್ಷಗಳು, ಈ ಹಿಂದೆ ಅದೇ ಸಾಧನ ಬಳಕೆಯಲ್ಲಿದ್ದಾಗ ಗೆಲುವು ಸಾಧಿಸಿದ್ದವು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು’ ಎಂದರು.

ಯಾದಗಿರಿ, ಕಲಬುರಗಿಗೆ ಇಂದು ಪ್ರಧಾನಿ ಮೋದಿ ಭೇಟಿ



ಕಲಬುರಗಿ: ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ (ಜ.19) ಯಾದಗಿರಿ ಮತ್ತು ಕಲಬುರಗಿ ಜಿಲ್ಲೆಗೆ ಭೇಟಿ ನೀಡಿ, ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು.

ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಕೊಡೆಕಲ್‌ಗೆ ಮಧ್ಯಾಹ್ನ 12ಕ್ಕೆ ಆಗಮಿಸುವರು. ನಾರಾಯಣಪುರ ಎಡದಂಡೆ ಕಾಲುವೆ ಜಾಲದ ವಿಸ್ತರಣೆ ನವೀಕರಣ ಮತ್ತು ಆಧುನಿಕ ಕಾಮಗಾರಿ ಲೋಕಾರ್ಪಣೆ, ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ ಮತ್ತು ಸೂರತ್–ಚೆನ್ನೈ ಎಕ್ಸ್‌ಪ್ರೆಸ್ ವೇ ಪ್ಯಾಕೇಜ್–3 ಕಾಮಗಾರಿ ಶಂಕುಸ್ಥಾಪನಾ ಸಮಾರಂಭದಲ್ಲಿ ಭಾಗವಹಿಸುವರು.

ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮಳಖೇಡದಲ್ಲಿ ಮಧ್ಯಾಹ್ನ 2 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಕಂದಾಯ ಗ್ರಾಮಗಳ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸುವರು ಮತ್ತು ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡುವರು. 51,000 ಕುಟುಂಬಗಳಿಗೆ ಹಕ್ಕುಪತ್ರ ವಿತರಣೆ ಮಾಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ರಾಜ್ಯಪಾಲ ಥಾವರಚಂದ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರಾದ ಆರ್.ಅಶೋಕ, ಮುರುಗೇಶ ನಿರಾಣಿ, ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಪಿ.ರಾಜೀವ ಮತ್ತು ಪ್ರಮುಖರು ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಕುಸ್ತಿ ಫೆಡರೇಷನ್ ಅಧ್ಯಕ್ಷರಿಂದ ಲೈಂಗಿಕ ಶೋಷಣೆ: ಆರೋಪ



ನವದೆಹಲಿ (ಪಿಟಿಐ): ‘ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಬಹಳ ವರ್ಷಗಳಿಂದ ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗುತ್ತಿದ್ದಾರೆ’ ಎಂದು ಒಲಿಂಪಿಯನ್ ಕುಸ್ತಿಪಟು ವಿನೇಶಾ ಫೋಗಟ್ ಆರೋಪಿಸಿದ್ದಾರೆ.

ಭಾರತೀಯ ಜನತಾ ಪಕ್ಷದ ಸಂಸದರೂ ಆಗಿರುವ ಸಿಂಗ್ ಅವರ ವಿರುದ್ಧ ಬುಧವಾರ ಖ್ಯಾತನಾಮ ಕುಸ್ತಿಪಟುಗಳು ಜಂತರ್ ಮಂಥರ್‌ನಲ್ಲಿ ಪ್ರತಿಭಟನೆ ಆರಂಭಿಸಿದ್ದಾರೆ. ಈ ಸಂದರ್ಭದಲ್ಲಿ ವಿನೇಶಾ ಈ ಆರೋಪ ಮಾಡಿದ್ದಾರೆ.


‘ನನ್ನೊಂದಿಗೆ ಅಂತಹ ಯಾವುದೇ ದೌರ್ಜನ್ಯ ಪ್ರಕರಣ ನಡೆದಿಲ್ಲ. ಆದರೆ, ಶೋಷಣೆಗೊಳಗಾದ ಒಬ್ಬ ಮಹಿಳಾ ಕುಸ್ತಿಪಟು ಈ ಧರಣಿಯಲ್ಲಿ ನಮ್ಮೊಂದಿಗಿದ್ದಾರೆ’ ಎಂದೂ ವಿನೇಶಾ ಸ್ಪಷ್ಟಪಡಿಸಿದರು.

‘ಲಖನೌನಲ್ಲಿ ನಡೆದ ರಾಷ್ಟ್ರೀಯ ತರಬೇತಿ ಶಿಬಿರಗಳಲ್ಲಿ ಕೆಲವು ಕೋಚ್‌ಗಳೂ ಮಹಿಳಾ ಪಟುಗಳನ್ನು ಲೈಂಗಿಕವಾಗಿ ಶೋಷಣೆ ಮಾಡಿದ್ದಾರೆ. ಫೆಡರೇಷನ್ ಅಧ್ಯಕ್ಷರ ಆಜ್ಞೆಯನ್ನು ಪಾಲಿಸುವ ಕೆಲವು ಮಹಿಳಾ ಕುಸ್ತಿಪಟುಗಳೂ ಈ ಶಿಬಿರದಲ್ಲಿದ್ದಾರೆ’ ಎಂದು 28 ವರ್ಷದ ವಿನೇಶಾ ಆಪಾದಿಸಿದ್ದಾರೆ.

ಈ ಸಂದರ್ಭದಲ್ಲಿ ಹಾಜರಿದ್ದ ಒಲಿಂಪಿಕ್ ಪದಕವಿಜೇತ ಕುಸ್ತಿಪಟು ಬಜರಂಗ್ ಪೂನಿಯಾ, ‘ಕೇಂದ್ರ ಗೃಹ ಸಚಿವರನ್ನು ಭೇಟಿಯಾಗಿ ಎಲ್ಲ ವಿಷಯಗಳನ್ನೂ ತಿಳಿಸಿದ್ದೇವೆ. ಸಮಸ್ಯೆಯನ್ನು ಪರಿಹರಿಸಿ, ನ್ಯಾಯ ಒದಗಿಸಲಾಗುವುದೆಂದು ಅವರು ಭರವಸೆ ನೀಡಿದ್ದಾರೆ’ ಎಂದರು.

ದ್ವಿಶತಕದ ಸರದಾರ ಶುಭಮನ್ ಗಿಲ್

ಶುಭಮನ್ ಗಿಲ್ ಬುಧವಾರ ಹೈದರಾಬಾದಿನಲ್ಲಿ ನ್ಯೂಜಿಲೆಂಡ್ ವಿರುದ್ಧ ನಡೆದ ಏಕದಿನ ಪಂದ್ಯದಲ್ಲಿ ದ್ವಿಶತಕ ದಾಖಲಿಸಿದರು. ಈ ಸಾಧನೆ ಮಾಡಿದ ಭಾರತದ ಅತಿ ಕಿರಿಯವಯಸ್ಸಿನ ಆಟಗಾರನಾದರು.



208 ರನ್	149 ಎಸೆತ	19 ಬೌಂಡರಿ	9 ಸಿಕ್ಸರ್	139.60 ಸ್ಟ್ರೈಕ್‌ರೇಟ್

ಭಾರತ 8ಕ್ಕೆ 349 (50 ಓವರ್‌ಗಳಲ್ಲಿ)

ನ್ಯೂಜಿಲೆಂಡ್ 337 (49.2 ಓವರ್‌ಗಳಲ್ಲಿ)

ಫಲಿತಾಂಶ
ಭಾರತಕ್ಕೆ 12 ರನ್‌ಗಳ ಜಯ
ಸರಣಿಯಲ್ಲಿ 1-0 ಮುನ್ನಡೆ

ಕಿರಿಯ ವಯಸ್ಸಿನ ದ್ವಿಶತಕ ಸಾಧಕರು

ವಯಸ್ಸು	ಬ್ಯಾಟರ್	ಎದುರಾಳಿ	ಸ್ಥಳ	ವರ್ಷ
23ವರ್ಷ:132ದಿನ	ಶುಭಮನ್ ಗಿಲ್ (ಭಾರತ)	ನ್ಯೂಜಿಲೆಂಡ್	ಹೈದರಾಬಾದ್	2023
24ವರ್ಷ:145ದಿನ	ಇಶಾನ್ ಕಿಶನ್ (ಭಾರತ)	ಬಾಂಗ್ಲಾ	ಚಟ್ಟೋಗ್ರಾಮ್	2022
26ವರ್ಷ:186ದಿನ	ರೋಹಿತ್ ಶರ್ಮಾ (ಭಾರತ)	ಆಸ್ಟ್ರೇಲಿಯಾ	ಬೆಂಗಳೂರು	2013
28ವರ್ಷ:101ದಿನ	ಫಕರ್ ಜಮಾನ್ (ಪಾಕ್)	ಜಿಂಬಾಬ್ವೆ	ಬುಲವಾಯೊ	2018

ಸಹಸ್ರ ರನ್ ದಾಖಲೆ
19 ಏಕದಿನ ಇನಿಂಗ್ಸ್‌ಗಳಲ್ಲಿ 1000 ರನ್‌ಗಡಿ ದಾಟಿದ ಗಿಲ್. ಈ ಸಾಧನೆ ಮಾಡಿದ ವಿಶ್ವದ ಎರಡನೇ ಆಟಗಾರ

ಹಣಕಾಸು ಮಾಹಿತಿ ವಿದೇಶಗಳಿಗೆ ರವಾನೆ– ಬಂಧನ

ನವದೆಹಲಿ (ಪಿಟಿಐ): ಹಣಕಾಸು ಸಚಿವಾಲಯಕ್ಕೆ ಸಂಬಂಧಿಸಿದ ಸೂಕ್ಷ್ಮ ಮಾಹಿತಿಗಳನ್ನು ಹಣಕ್ಕಾಗಿ ವಿದೇಶಗಳಿಗೆ ರವಾನಿಸುತ್ತಿದ್ದ ಆರೋಪದ ಮೇರೆಗೆ ಸಚಿವಾಲಯದ ಗುತ್ತಿಗೆ ಸಿಬ್ಬಂದಿ ಸುಮಿತ್ ಎಂಬಾತನನ್ನು ದೆಹಲಿಯ ಅಪರಾಧ ವಿಭಾಗದ ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಈತ ಹಣಕಾಸು ಸಚಿವಾಲಯದಲ್ಲಿ ‘ಡಾಟಾ ಎಂಟ್ರಿ ಆಪರೇಟರ್’ ಆಗಿ ಕಾರ್ಯ ನಿರ್ವಹಿಸುತ್ತಿದ್ದ. ರಹಸ್ಯ ಮಾಹಿತಿಯನ್ನು ಹಂಚಿಕೊಳ್ಳಲು ಈತ ಬಳಸುತ್ತಿದ್ದ ಮೊಬೈಲ್ ಅನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಧಿಕೃತ ಗೋಪ್ಯತಾ ಕಾಯ್ದೆಯಡಿ ಮಂಗಳವಾರ ಪ್ರಕರಣ ದಾಖಲಾಗಿತ್ತು.



ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್‌ನ (ಸಿಐಟಿಯು) 17ನೇ ಅಖಿಲ ಭಾರತ ಸಮ್ಮೇಳನದಲ್ಲಿ (ಎಡದಿಂದ) ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಕಾರ್ಮಿಕ ಸಂಘಟನೆಗಳ ಜಾಗತಿಕ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಪಂಬೀಸ್ ಕ್ರಿಸ್ಟಿಸಿಸ್, ಸಿಐಟಿಯು ರಾಷ್ಟ್ರೀಯ ಅಧ್ಯಕ್ಷೆ ಕೆ.ಹೇಮಲತಾ, ಸ್ವಾಗತ ಸಮಿತಿಯ ಅಧ್ಯಕ್ಷ ಕೆ. ಸುಬ್ಬರಾವ್, ಸಿಐಟಿಯು ರಾಜ್ಯ ಅಧ್ಯಕ್ಷೆ ಎಸ್‌.ವರಲಕ್ಷ್ಮಿ, ಎಐಟಿಯುಸಿ ರಾಷ್ಟ್ರೀಯ ಅಧ್ಯಕ್ಷೆ ಅಮರ್‌ಜೀತ್ ಕೌರ್, ಎಲ್‌.ಪಿ.ಎಫ್ ಮುಖಂಡ ವೇಲುಸ್ವಾಮಿ, ಸಿಐಟಿಯು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತಪನ್ ಸೇನ್, ಐ.ಎನ್‌.ಟಿ.ಯು.ಸಿ ರಾಷ್ಟ್ರೀಯ ಮುಖಂಡ ಚಂದ್ರಶೇಖರ್, ಎಐಯುಟಿಯುಸಿ ರಾಷ್ಟ್ರೀಯ ಮುಖಂಡ ಸೋಮಶೇಖರ್ ಮತ್ತು ಸೆಲ್ಫ್ ಎಂಪ್ಲಾಯಿಸ್ ಯೂನಿಯನ್ ರಾಷ್ಟ್ರೀಯ ಮುಖಂಡರಾದ ಸೋನಿಯಾ ಜಾರ್ಜ್ ಇದ್ದಾರೆ – ಪ್ರಜಾವಾಣಿ ಚಿತ್ರ

ತೆಲಂಗಾಣದಲ್ಲಿ ಬಹಿರಂಗ ಸಭೆ: ಬಿಜೆಪಿ-ಕಾಂಗ್ರೆಸೇತರ ಮುಖ್ಯಮಂತ್ರಿಗಳ ಸಮಾಗಮ

ಅಧಿಕಾರದಿಂದ ಬಿಜೆಪಿ ಕಿತ್ತೊಗೆಯಲು ಕರೆ

ಖಮ್ಮಂ, ತೆಲಂಗಾಣ (ಪಿಟಿಐ): ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್)ಯಿಂದ ಇದೇ ಮೊದಲ ಬಾರಿಗೆ ಇಲ್ಲಿ ಹಮ್ಮಿಕೊಳ್ಳಲಾಗಿದ್ದ ಬಹಿರಂಗ ಸಭೆಯು ಬಿಜೆಪಿ ಮತ್ತು ಕಾಂಗ್ರೆಸೇತರ ಪಕ್ಷಗಳ ಮುಖ್ಯಮಂತ್ರಿಗಳು ಹಾಗೂ ನಾಯಕರ ಸಮಾಗಮಕ್ಕೆ ಸಾಕ್ಷಿಯಾಯಿತು. ವೇದಿಕೆಯಲ್ಲಿದ್ದ ಗಣ್ಯರೆಲ್ಲರೂ ಆಡಳಿತಾರೂಢ ಬಿಜೆಪಿ ವಿರುದ್ಧ ಹರಿಹಾಯ್ದರು. ಮುಂದಿನ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಮತ ಚಲಾಯಿಸಿ ಮೋದಿ ಸರ್ಕಾರ ಕಿತ್ತೊಗೆಯಿರಿ ಎಂದು ದೇಶದ ನಾಗರಿಕರಿಗೆ ಕರೆ ನೀಡಿದರು.

ಸಭೆಯನ್ನು ಉದ್ದೇಶಿಸಿ ಬುಧವಾರ ಮಾತನಾಡಿದ ತೆಲಂಗಾಣ ಮುಖ್ಯಮಂತ್ರಿ ಹಾಗೂ ಬಿಆರ್‌ಎಸ್ ಪಕ್ಷದ ಮುಖ್ಯಸ್ಥ ಕೆ.ಚಂದ್ರಶೇಖರ್ ರಾವ್ (ಕೆಸಿಆರ್), ‘ಮುಂದಿನ ಬಾರಿ ಕೇಂದ್ರದಲ್ಲಿ ಬಿಆರ್‌ಎಸ್ ಬೆಂಬಲಿತ ಸರ್ಕಾರ ಅಧಿಕಾರಕ್ಕೆ ಬಂದರೆ ದೇಶದ ಎಲ್ಲಾ ರೈತರಿಗೂ ಉಚಿತವಾಗಿ ವಿದ್ಯುತ್ ಸೌಲಭ್ಯ ನೀಡಲಾಗುತ್ತದೆ. ಅಗ್ನಿಪಥ ಯೋಜನೆಯನ್ನೂ ರದ್ದು ಮಾಡಲಾಗುತ್ತದೆ’ ಎಂದು ಘೋಷಿಸಿದ್ದಾರೆ.

‘ಕೇಂದ್ರ ಸರ್ಕಾರದ ಮೇಕ್ ಇನ್ ಇಂಡಿಯಾ ಅಭಿಯಾನ ಕ್ರಮೇಣ ‘ಜೋಕ್ ಇನ್ ಇಂಡಿಯಾ’ ಆಗಿ ಬದಲಾಗಿದೆ. ದೇಶದ ಪ್ರತಿ ಬೀದಿಯಲ್ಲೂ ಚೀನಾ ಬಜಾರ್‌ಗಳಿವೆ’ ಎಂದು ವ್ಯಂಗ್ಯವಾಡಿದ್ದಾರೆ.

ಬಿಆರ್‌ಎಸ್ ಬೆಂಬಲಿತ ಸರ್ಕಾರವು ಅಧಿಕಾರದ ಗದ್ದುಗೆ ಏರಿದರೆ ದೇಶದಾದ್ಯಂತ ‘ರೈತಬಂಧು’ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದಾಗಿ ಹೇಳಿದ ಅವರು ‘ಅಂತರರಾಜ್ಯ ಜಲ ವಿವಾದಕ್ಕೆ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳೇ ನೇರ ಹೊಣೆ’ ಎಂದು ಹರಿಹಾಯ್ದಿದ್ದಾರೆ.

‘ಬಿಜೆಪಿಯು ದೇಶವನ್ನು ಬದಲಿಸುವ ಬದಲು ನಾಶಪಡಿಸಲು ಹೊರಟಿದೆ. ಇದು ಜನರಿಗೂ ಅರ್ಥವಾಗಿದೆ. ಆ ಪಕ್ಷವನ್ನು ಅಧಿಕಾರದಿಂದ ದೂರ ಇಡುವ ಕಾಲ ಸನ್ನಿಹಿತವಾಗಿದೆ. ಈ ನಿಟ್ಟಿನಲ್ಲಿ ಮುಂದಿನ ಲೋಕಸಭೆ ಚುನಾವಣೆ ಪ್ರತಿಯೊಬ್ಬರ ಪಾಲಿಗೂ ಮಹತ್ವದ್ದು’ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.


ಕಾರ್ಯಕ್ರಮದಲ್ಲಿ (ಎಡದಿಂದ) ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್, ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಮತ್ತು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಒಗ್ಗಟ್ಟು ಪ್ರದರ್ಶಿಸಿದರು – ಪಿಟಿಐ ಚಿತ್ರ

ಬಿಜೆಪಿ ತನ್ನ ಕೊನೆಯ ದಿನಗಳನ್ನು ಎಣಿಸುತ್ತಿದೆ. 399 ದಿನಗಳ ನಂತರ ಆ ಪಕ್ಷ ಅಧಿಕಾರ ಕಳೆದುಕೊಳ್ಳಲಿದ್ದು, ನೂತನ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ
ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ನಾಯಕ

ಸಮಾನಮನಸ್ಕ ಪಕ್ಷಗಳೆಲ್ಲಾ ಒಗ್ಗಟ್ಟಾಗಿ ಬಿಜೆಪಿ ವಿರುದ್ಧ ಹೋರಾಡಬೇಕು. ಮುಂದಿನ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲೇಬೇಕು
ಡಿ.ರಾಜಾ, ಸಿಪಿಐ ಪ್ರಧಾನ ಕಾರ್ಯದರ್ಶಿ

ಕೇಂದ್ರವು ಪ್ರಜಾಪ್ರಭುತ್ವ ವ್ಯವಸ್ಥೆ ನಾಶಪಡಿಸಲು ನಿರಂತರ ಯತ್ನಿಸುತ್ತಿದೆ. ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳ ಮೇಲೆ ದಾಳಿ ನಡೆಸಲು ರಾಜ್ಯಪಾಲರನ್ನು ಬಳಸಿಕೊಳ್ಳುತ್ತಿದೆ
ಪಿಣರಾಯಿ ವಿಜಯನ್, ಕೇರಳ ಸಿ.ಎಂ

ಸಿಐಟಿಯು 17ನೇ ಅಖಿಲ ಭಾರತ ಸಮ್ಮೇಳನ

‘ಆರ್‌ಎಸ್‌ಎಸ್, ಬಿಜೆಪಿಯಿಂದ ದೇಶ ಮುಕ್ತಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಪರವಾದ ನೀತಿಗಳು ರಚನೆಯಾಗಲು ದುಡಿಯುವ ವರ್ಗವೆಲ್ಲ ಒಗ್ಗಟ್ಟಾಗಿ ಹೋರಾಡಬೇಕು ಮತ್ತು ದೇಶವನ್ನು ಆರ್‌ಎಸ್‌ಎಸ್ ಮತ್ತು ಬಿಜೆಪಿಯಿಂದ ಮುಕ್ತಗೊಳಿಸಬೇಕು ಎಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್‌ನ (ಸಿಐಟಿಯು) 17ನೇ ಅಖಿಲ ಭಾರತ ಸಮ್ಮೇಳನದಲ್ಲಿ ಮುಖಂಡರು ಕರೆ ನೀಡಿದರು.

ಕೋಲಾರದಿಂದ ಹುತಾತ್ಮರ ಜ್ಯೋತಿ

ಕೋಲಾರ ಚಿನ್ನದ ಗಣಿಯ ಹುತಾತ್ಮಕರ ಸ್ಮರಣಾರ್ಥ ಕೋಲಾರವೆಲ್ಲ ಸುತ್ತಿ ಸಮ್ಮೇಳನಕ್ಕೆ ಬಂದ ‘ಕೆಜಿಎಫ್ ಹುತಾತ್ಮರ ಜ್ಯೋತಿಗೆ’ ಸಿಐಟಿಯು ಮುಖಂಡರಾದ ಕೆ. ಹೇಮಲತಾ ಗೌರವ ಸಲ್ಲಿಸಿದರು. ಸಿಐಟಿಯು ಧ್ವಜಾರೋಹಣ ಮಾಡಿದ ಹೇಮಲತಾ ಅವರಿಗೆ ‘ಕೆಂಪು ಸ್ವಯಂಸೇವಕರು’ ಗೌರವವಂದನೆ ನೀಡಿದರು. 25 ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶದ 1,500 ಪ್ರತಿನಿಧಿಗಳು, ಸಾವಿರಾರು ಕಾರ್ಯಕರ್ತರು ಭಾಗವಹಿಸಿದ್ದರು.

ನಗರದ ಅರಮನೆ ಮೈದಾನದಲ್ಲಿ ಬುಧವಾರ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಮುಖಂಡರು, ‘ವಿಭಜನಕಾರಿ ನೀತಿಗಳಿಂದ ಸಮಾಜದಲ್ಲಿ ಸಾಮರಸ್ಯ ಹಾಳು ಮಾಡುತ್ತಿರುವ ಹಾಗೂ ದೇಶಕ್ಕೆ ಮಾರಕವಾಗಿರುವ ಕೇಂದ್ರ ಸರ್ಕಾರವನ್ನು ರೈತ–ಕಾರ್ಮಿಕ ಚಳವಳಿಗಳಿಂದ ಕಿತ್ತು ಹಾಕಬೇಕು’ ಎಂದರು.

ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷ ಕೆ. ಸುಬ್ಬರಾವ್ ಮಾತನಾಡಿ, ‘ದೇಶ ಇಂದು ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಸಂಘರ್ಷವನ್ನು ಎದುರಿಸುತ್ತಿದೆ. ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳು ಸಮಾಜದಲ್ಲಿ ಅಸಮಾನತೆ ಉಂಟು ಮಾಡುತ್ತಿವೆ. ಮೂಲಭೂತವಾದಿಗಳು ದುಡಿಯುವ ವರ್ಗವನ್ನು ವಿಭಜಿಸುತ್ತಿವೆ’ ಎಂದು ಹೇಳಿದರು.

ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಮಾತನಾಡಿ, ‘ಪ್ರಜಾಸತ್ತಾತ್ಮಕ ಹಕ್ಕು ಮತ್ತು ಸಾಮಾಜಿಕ ಸಾಮರಸ್ಯವನ್ನು ಸಾಧಿಸಲು ಮಾರಕವಾಗಿರುವ ನೀತಿಗಳ ವಿರುದ್ಧ ದೇಶದಾದ್ಯಂತ ಎಲ್ಲರೂ ಒಂದುಗೂಡಿ ಹೋರಾಡಬೇಕಿದೆ’ ಎಂದರು.

ಸಿಐಟಿಯು ಮುಖಂಡರಾದ ಕೆ.ಹೇಮಲತಾ ಮಾತನಾಡಿ, ‘ದೇಶದಲ್ಲಿ ಹೆಚ್ಚುತ್ತಿರುವ ಅಸಮಾನತೆ, ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಹೋರಾಡಲು ಈ ಸಮ್ಮೇಳನದಲ್ಲಿ ಚರ್ಚಿಸಲಾಗುವುದು. ಎಲ್ಲ ಅಂಶಗಳನ್ನು ಒಟ್ಟುಗೂಡಿಸಿ ಮುಂದಿನ ಹೋರಾಟದ ರೂಪುರೇಷೆ ಸಿದ್ಧಮಾಡಲಾಗುತ್ತದೆ’ ಎಂದರು.

‘ದುಡಿಯುವ ವರ್ಗಕ್ಕೆ ಮಾರಕವಾಗಿರುವ ನೀತಿಗಳನ್ನು ಜಾರಿಗೆ ತಂದಿರುವ ಈ ಕೇಂದ್ರ ಸರ್ಕಾರ ತೊಲಗಬೇಕು. ನಮ್ಮ ದೇಶವನ್ನು ರಕ್ಷಿಸಬೇಕಾದರೆ, ದೇಶವನ್ನು ಬಿಜೆಪಿ ಮತ್ತು ಆರ್‌ಎಸ್‌ಎಸ್ ಮುಕ್ತವಾಗಿಸಬೇಕು’ ಎಂದು ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಅಮರ್‌ಜೀತ್ ಕೌರ್ ಹೇಳಿದರು.

ಆ್ಯಸಿಡ್ ಬೆದರಿಕೆ: ಜಾಮೀನು ನಕಾರ

ಬೆಂಗಳೂರು: ಪ್ರೀತಿಸದೇ ಹೋದರೆ ಆ್ಯಸಿಡ್ ಎರಚುವುದಾಗಿ ಬಾಲಕಿಗೆ ಬೆದರಿಕೆ ಹಾಕಿದ ಪ್ರಕರಣವೊಂದರಲ್ಲಿ ಆರೋಪಿ ಯುವಕನಿಗೆ ಹೈಕೋರ್ಟ್ ಜಾಮೀನು ನಿರಾಕರಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ಬಂಧನದಲ್ಲಿರುವ ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಹೊಸಕಲ್ ನಾಯಕನಹಳ್ಳಿ ನಿವಾಸಿ ಪವನ್ (26) ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಎಂ.ಜಿ. ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

ರವಿಸುಬ್ರಮಣ್ಯ, ರಘುಗೆ ಬಿಡಿಎ ಸದಸ್ಯತ್ವ

ಬೆಂಗಳೂರು: ಶಾಸಕರಾದ ರವಿಸುಬ್ರಮಣ್ಯ ಹಾಗೂ ಎಸ್. ರಘು ಅವರನ್ನು ಬಿಡಿಎ ಅಧಿಕಾರೇತರ ಸದಸ್ಯರನ್ನಾಗಿ ಸರ್ಕಾರ ನೇಮಿಸಿದೆ.

ರವಿಸುಬ್ರಮಣ್ಯ ಬಸವನಗುಡಿ, ಎಸ್. ರಘು ಸಿ.ವಿ.ರಾಮನ್ ನಗರ ವಿಧಾನಸಭಾ ಕ್ಷೇತ್ರದ ಶಾಸಕರು. ಬಿಡಿಎ ಕಾಯ್ದೆ ಅನ್ವಯ ಇಬ್ಬರನ್ನೂ ನೇಮಕ ಮಾಡಿ ನಗರಾಭಿವೃದ್ಧಿ ಇಲಾಖೆ ಅಧಿಸೂಚನೆ ಹೊರಡಿಸಿದೆ.

ತೋಂಟದಾರ್ಯ ಸಂಸ್ಥಾನ ಮಠದ ತೋಂಟದ ಸಿದ್ಧರಾಮ ಸ್ವಾಮೀಜಿ ಅಭಿಮತ

‘ಗುರುವಿಗಿಂತ ಶ್ರೇಷ್ಠ ಇನ್ನೊಬ್ಬರಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಿರಾಕಾರ, ನಿರ್ಗುಣ ಸ್ವರೂಪಿಯಾದ ಭಗವಂತನನ್ನು ನೋಡಲು ಯಾರಿಗೂ ಸಾಧ್ಯವಿಲ್ಲ. ಆದ್ದರಿಂದ ಈ ಜಗತ್ತಿನಲ್ಲಿ ಗುರುವಿಗಿಂತ ಶ್ರೇಷ್ಠರು ಇನ್ನೊಬ್ಬರಿಲ್ಲ’ ಎಂದು ಗದಗದ ತೋಂಟದಾರ್ಯ ಸಂಸ್ಥಾನ ಮಠದ ತೋಂಟದ ಸಿದ್ಧರಾಮ ಸ್ವಾಮೀಜಿ ಹೇಳಿದರು.

ವಿ. ಸೋಮಣ್ಣ ಪ್ರತಿಷ್ಠಾನ ನಗರದಲ್ಲಿ ಬುಧವಾರ ಹಮ್ಮಿಕೊಂಡ ಬಾಲಗಂಗಾಧರನಾಥ ಸ್ವಾಮೀಜಿ ಅವರ 78ನೇ ಜಯಂತ್ಯುತ್ಸವದಲ್ಲಿ ಸಾನ್ನಿಧ್ಯ ವಹಿಸಿ, ಮಾತನಾಡಿದರು.

‘ಭಾರತೀಯ ಪರಂಪರೆಯಲ್ಲಿ ಗುರುವಿಗೆ ವಿಶೇಷ ಸ್ಥಾನವಿದೆ. ಭಗವಂತನ ಸಾಕಾರರೂಪ ಗುರುವಾಗಿದ್ದಾನೆ. ಆದಿಚುಂಚನಗಿರಿ ಮಠದ ಬಾಲಗಂಗಾಧರನಾಥ ಸ್ವಾಮೀಜಿ ಹಾಗೂ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ ಇದಕ್ಕೆ ಉತ್ತಮ ಉದಾಹರಣೆ. ಅವರ ಆದರ್ಶ ಬದುಕು ನಮ್ಮ ಕಣ್ಣ ಮುಂದೆ ಸದಾ ಇರಬೇಕು’ ಎಂದು ಹೇಳಿದರು.

‘ಪ್ರೀತಿಗಿಂತ ಮಿಗಿಲಾದದ್ದು ಈ ಜಗತ್ತಿನಲ್ಲಿ ಯಾವುದೂ ಇಲ್ಲ. ಪ್ರೀತಿಯಿಂದ ಎಲ್ಲರ ಹೃದಯವನ್ನು ಗೆಲ್ಲಲು ಸಾಧ್ಯ ಎನ್ನುವುದನ್ನು ಬಾಲಗಂಗಾಧರನಾಥ ಸ್ವಾಮೀಜಿ ತೋರಿಸಿಕೊಟ್ಟು ಹೋಗಿದ್ದಾರೆ’ ಎಂದು ಅವರು ಹೇಳಿದರು.



ಕಾರ್ಯಕ್ರಮದಲ್ಲಿ (ಎಡದಿಂದ) ವಿ. ಸೋಮಣ್ಣ ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಪಾಲನೇತ್ರ, ದೊಡ್ಡರಂಗೇಗೌಡ, ವಿ. ಸೋಮಣ್ಣ, ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ವಿ. ಸೋಮಣ್ಣ, ಎಸ್‌ಜಿ. ಸುಶೀಲಮ್ಮ ಮತ್ತು ತೋಂಟದ ಸಿದ್ಧರಾಮ ಸ್ವಾಮೀಜಿ ಅವರು ಬಾಲಗಂಗಾಧರನಾಥ ಸ್ವಾಮೀಜಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. – ಪ್ರಜಾವಾಣಿ ಚಿತ್ರ

ಐವರಿಗೆ ಗೌರವ ಸಮರ್ಪಣೆ

ವಿ. ಸೋಮಣ್ಣ ಪ್ರತಿಷ್ಠಾನದ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಐದು ಮಂದಿಯನ್ನು ಗೌರವಿಸಲಾಯಿತು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಕರ್ನಾಟಕ ಇತಿಹಾಸ ಅಕಾಡೆಮಿ ಉಪಾಧ್ಯಕ್ಷ ಎಂ.ಜಿ. ನಾಗರಾಜ್, ಚಲನಚಿತ್ರ ಸಾಹಿತಿ ಸಿ.ವಿ. ಶಿವಶಂಕರ್, ಜಾನಪದ ಕಲಾವಿದ ಬಾನಂದೂರು ಕೆಂಪಯ್ಯ ಹಾಗೂ ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಎಸ್.ಜಿ. ಸುಶೀಲಮ್ಮ ಅವರಿಗೆ ಗೌರವ ಸಮರ್ಪಿಸಲಾಯಿತು.

ವಸತಿ ಸಚಿವರೂ ಆಗಿರುವ ಸ್ಥಳೀಯ ಶಾಸಕ ವಿ. ಸೋಮಣ್ಣ, ‘ಬಾಲಗಂಗಾಧರನಾಥ ಸ್ವಾಮೀಜಿ ದೂರದೃಷ್ಟಿ ಹೊಂದಿದ್ದರು. 1996ರಲ್ಲಿಯೇ ವಿಜಯನಗರದಲ್ಲಿ ಶ್ರೀಕಾಲಭೈರವೇಶ್ವರಸ್ವಾಮಿ ಆಯುರ್ವೇದ ಆಸ್ಪತ್ರೆ ಮತ್ತು ವೈದ್ಯಕೀಯ ಮಹಾವಿದ್ಯಾಲಯ ಸ್ಥಾಪಿಸಿದ್ದರು. ದಾಸರಹಳ್ಳಿಯಲ್ಲಿ 300 ಹಾಸಿಗೆಗಳ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ಅವರೇ ಪ್ರೇರಣೆ ಆಗಿದ್ದಾರೆ. ಆದ್ದರಿಂದ ಆ ಆಸ್ಪತ್ರೆಗೆ ಬಾಲಗಂಗಾಧರನಾಥ ಸ್ವಾಮೀಜಿ ಅವರ ಹೆಸರನ್ನು ನಾಮಕರಣ ಮಾಡಲಾಗುವುದು’ ಎಂದರು.

ಸಾಹಿತಿ ದೊಡ್ಡರಂಗೇಗೌಡ, ‘ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಬಾಲಗಂಗಾಧರನಾಥ ಸ್ವಾಮೀಜಿ, ತಮ್ಮ ಅಸಾಮಾನ್ಯ ಕಾಯಕಗಳಿಂದ ಮಹಾಪುರುಷರಾದರು. ಭೈರವನ ಭಕ್ತರಿಗಷ್ಟೇ ಸೀಮಿತವಾಗಿದ್ದ ಆದಿಚುಂಚನಗಿರಿ ಕ್ಷೇತ್ರವನ್ನು, ಕೇವಲ ಮೂರೂವರೆ ದಶಕದಲ್ಲಿ ಮಹಾಕ್ಷೇತ್ರವನ್ನಾಗಿಸಿದ್ದು ವಿಶೇಷ’ ಎಂದರು.

ಆದಿಚುಂಚನಗಿರಿ ಸಂಸ್ಥಾನ ಶಾಖಾಮಠದ ಸೌಮ್ಯನಾಥ ಸ್ವಾಮೀಜಿ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ಚಿತ್ರಕಲಾ ಸ್ಪರ್ಧೆ: ವರ್ಷಿಣಿ ಪ್ರಥಮ

ಬೆಂಗಳೂರು: ‘ಜನದನಿ’ ಚಾರಿಟಬಲ್ ಟ್ರಸ್ಟ್ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ಚಿಕ್ಕಬಳ್ಳಾಪುರದ ಅಂಗರೇಖನಹಳ್ಳಿ ಸರ್ಕಾರಿ ಪ್ರೌಢಶಾಲೆಯ 9ನೇ ತರಗತಿ ವಿದ್ಯಾರ್ಥಿನಿ ಎ.ಎಂ.ವರ್ಷಿಣಿ (₹ 5 ಸಾವಿರ ನಗದು ಬಹುಮಾನ) ಪ್ರಥಮ ಸ್ಥಾನ ಗಳಿಸಿದ್ದಾರೆ.

ಶಿರಸಿಯ ಮಾರಿಕಾಂಬಾ ಸರ್ಕಾರಿ ಪ್ರೌಢಶಾಲೆ 9ನೇ ತರಗತಿಯ ಪೂರ್ವಿ ದಯಾನಂದ ಶೇಟ್ (₹ 3 ಸಾವಿರ), ದಾವಣಗೆರೆ ಯಂತ್ರಪುರದ ಸೇಂಟ್ ಮೇರಿಸ್ ಕಾನ್ವೆಂಟ್‌ನ 8ನೇ ತರಗತಿಯ ಎ.ಎಚ್.ರಕ್ಷಾ ತೃತೀಯ ಸ್ಥಾನ (₹ 2 ಸಾವಿರ) ಪಡೆದಿದ್ದಾರೆ.

ಧಾರವಾಡ ಅಣ್ಣಿಗೇರಿ ಎಸ್.ಎ ಪಿಯು ಕಾಲೇಜಿನ 9ನೇ ತರಗತಿಯ ಸ್ವಾತಿ ಪಾಟೀಲ, ವಿಜಯಪುರ ಟಕ್ಕಳಕಿ ಸರ್ಕಾರಿ ಪ್ರೌಢಶಾಲೆಯ 9ನೇ ತರಗತಿಯ ಕರಣ್ ಸೇವು ರಾಠೋಡ್, ಯಂತ್ರಪುರ ಸೇಂಟ್ ಮೇರಿಸ್ ಕಾನ್ವೆಂಟ್‌ನ 9ನೇ ತರಗತಿ ಎಸ್.ಬಿ.ನಿಸರ್ಗ ಅವರ ಚಿತ್ರಕಲೆಗಳು ಮೆಚ್ಚುಗೆ ಗಳಿಸಿವೆ (ತಲಾ ₹ 1 ಸಾವಿರ) ಎಂದು ಪ್ರಕಟಣೆ ತಿಳಿಸಿದೆ.

‘ಪುಸ್ತಕಗಳಿಗಿಂತ ದೊಡ್ಡ ಶಿಕ್ಷಕರಿಲ್ಲ’



ಬೆಂಗಳೂರು: ‘ನಮ್ಮ ಮೇಲೆ ಪ್ರಭಾವ ಬೀರುವ ಮೇಷ್ಟ್ರುಗಳು ಕೆಲವೇ ವರ್ಷಗಳಲ್ಲಿ ನಮ್ಮಿಂದ ದೂರವಾಗುತ್ತಾರೆ. ಅದೇ ಪುಸ್ತಕವೆಂಬ ಮೇಷ್ಟ್ರು ಸದಾ ನಮ್ಮೊಂದಿಗೆ ಇರುತ್ತವೆ. ಪುಸ್ತಕಕ್ಕಿಂತ ದೊಡ್ಡ ಶಿಕ್ಷಕರು ಬೇರೆಯಿಲ್ಲ’ ಎಂದು ಚಲನಚಿತ್ರ ನಟ ರಮೇಶ್ ಅರವಿಂದ್ ಹೇಳಿದರು.

ಎಚ್‌ಎಸ್‌ಆರ್ ಬಡಾವಣೆಯಲ್ಲಿ ನಿರ್ಮಾಣವಾದ ಸಪ್ನ ಬುಕ್ ಹೌಸ್‌ನ 21ನೇ ಮಳಿಗೆಯನ್ನು ಬುಧವಾರ ಉದ್ಘಾಟಿಸಿದ ಅವರು, ‘ಸರಿಯಾದ ಪುಸ್ತಕವನ್ನು ಆಯ್ಕೆ ಮಾಡಿಕೊಂಡರೆ ನಮ್ಮ ಯೋಚನೆ, ಮನಸ್ಸು ಬದಲಾಗುತ್ತದೆ. ಸೂಕ್ಷ್ಮವಾಗಿ ಯೋಚನೆ ಮಾಡಬಲ್ಲ ಲೇಖಕ ಹಾಗೂ ಅಷ್ಟೇ ಸೂಕ್ಷ್ಮ ಮನಸ್ಸಿನ ಓದುಗನ ಸಂಯೋಜನೆ ಅದ್ಭುತವನ್ನು ಸೃಷ್ಟಿಸುತ್ತದೆ. ಇಂತಹ ಪುಸ್ತಕ ದೇವಾಲಯ ಎಲ್ಲ ಬಡಾವಣೆಗಳಲ್ಲಿ ನಿರ್ಮಾಣವಾಗಬೇಕು’ ಎಂದು ತಿಳಿಸಿದರು.

ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ‘ಒಂದು ಬಡಾವಣೆ, ಪ್ರದೇಶದ ಶ್ರೀಮಂತಿಕೆಯನ್ನು ಅಲ್ಲಿರುವ ಪುಸ್ತಕ ಭಂಡಾರಗಳ ಸಂಖ್ಯೆಯಿಂದ ಅಳೆಯಬೇಕು. ಪ್ರತಿ ಬಡಾವಣೆಗೂ ಪುಸ್ತಕ ಮಳಿಗೆ ಬರಬೇಕು’ ಎಂದು ಹೇಳಿದರು.

ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ‘ಇಡೀ ರಾಜ್ಯದಲ್ಲಿ 23 ಸಾವಿರ ಮದ್ಯದಂಗಡಿಗಳಿವೆ. ಆದರೆ, ಕೇವಲ 61 ಪುಸ್ತಕ ಮಳಿಗೆಗಳಿವೆ. ಬೆಂಗಳೂರಿನಿಂದ 60 ಕಿ.ಮೀ. ದೂರದಲ್ಲಿರುವ ಕೋಲಾರದಲ್ಲಿ ಒಂದೇ ಒಂದು ಪುಸ್ತಕ ಮಳಿಗೆ ಇಲ್ಲ. ಉತ್ತರ ಕನ್ನಡದಲ್ಲಿ ಒಂದೇ ಒಂದು ಪುಸ್ತಕದ ಮಳಿಗೆಯಿದೆ. ಬೆಂಗಳೂರಿನ ರಸ್ತೆ ರಿಪೇರಿಗೆ ವರ್ಷಕ್ಕೆ ₹ 800 ಕೋಟಿ ಖರ್ಚು ಮಾಡುವ ರಾಜ್ಯ ಸರ್ಕಾರ, ಪುಸ್ತಕ ಖರೀದಿಗೆ ₹ 15 ಕೋಟಿ ಅನುದಾನ ನೀಡುತ್ತದೆ’ ಎಂದು ಬೇಸರ ವ್ಯಕ್ತಪಡಿಸಿದರು

90 ನ್ಯಾಯಾಧೀಶರಿಗೆ ಪ್ರಶಸ್ತಿ

ನ್ಯಾಯಾಂಗದಲ್ಲಿ ಕನ್ನಡ – ವಾರ್ಷಿಕ ಪ್ರಶಸ್ತಿ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಅಭಿವೃದ್ಧಿ ಪ್ರಾಧಿಕಾರವು 2019-20, 2020-21ನೇ ಸಾಲಿನ ‘ನ್ಯಾಯಾಂಗದಲ್ಲಿ ಕನ್ನಡ ಪ್ರಶಸ್ತಿ’ ಘೋಷಣೆ ಮಾಡಿದ್ದು, 90 ನ್ಯಾಯಾಧೀಶರು ಸೇರಿ 120 ಮಂದಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಒಳಗೊಂಡಿದೆ. ರಾಜ್ಯದ ಅಧೀನ ನ್ಯಾಯಾಲಯಗಳಲ್ಲಿ ಕನ್ನಡದಲ್ಲೇ ತೀರ್ಪನ್ನು ದಾಖಲಿಸುವ ಕಾರ್ಯ ಈಗಾಗಲೇ ನಡೆದಿದೆ. ಕನ್ನಡದಲ್ಲಿ ತೀರ್ಪು ನೀಡುವ ನ್ಯಾಯಾಧೀಶರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರಶಸ್ತಿ ನೀಡಲಾಗುತ್ತಿದೆ. ಕನ್ನಡ ಭಾಷೆಯಲ್ಲಿ ತೀರ್ಪು ನೀಡಿದ ನ್ಯಾಯಾಧೀಶರನ್ನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ನೇತೃತ್ವದ ಸಮಿತಿ ಗುರುತಿಸಿದೆ ಎಂದು ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಅವರು ತಿಳಿಸಿದ್ದಾರೆ.

ನ್ಯಾಯಾಲಯಗಳಲ್ಲಿ ಕನ್ನಡದಲ್ಲಿ ಅರ್ಜಿ ಸಲ್ಲಿಸುವ, ವಾದ ಮಂಡಿಸುವ ವಕೀಲರನ್ನು ಅಭಿಯೋಜನಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ಮೂಲಕ ಗುರುತಿಸಿ, ಗೌರವಿಸಲಾಗುತ್ತಿದೆ. 2019-20, 2020-21ನೇ ಸಾಲಿನಲ್ಲಿ ಕನ್ನಡದಲ್ಲಿ ವಾದ ಮಂಡಿಸಿದ 12 ಸರ್ಕಾರಿ ಅಭಿಯೋಜಕರು ಹಾಗೂ 18 ವಕೀಲರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಕೋರ್ಟ್‌ಗಳು ಕನ್ನಡದಲ್ಲಿ ತೀರ್ಪು ನೀಡಿದರೆ ಜನರು ನ್ಯಾಯದಾನವನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ತೀರ್ಪಿನ ಸಾಧಕ-ಬಾಧಕಗಳ ಬಗ್ಗೆ ಅರ್ಥಮಾಡಿಕೊಳ್ಳಲು ಸುಲಭವಾಗುತ್ತದೆ. ಆಂಗ್ಲ ಭಾಷೆಯಲ್ಲಿ ತೀರ್ಪು ಹೊರಬಿದ್ದಾಗ ಅದನ್ನು ಅರ್ಥೈಸಿಕೊಳ್ಳುವುದು ಕಷ್ಟ. ಹೈಕೋರ್ಟ್‌ನಲ್ಲಿನ ದೈನಂದಿನ ಆಡಳಿತದ ವ್ಯವಹಾರ ಕನ್ನಡದಲ್ಲಿಯೇ ನಡೆಯಬೇಕು. ಇದನ್ನು ಕಾರ್ಯರೂಪಕ್ಕೆ ತರಲು ಸರ್ಕಾರ ಕಾರ್ಯೋನ್ಮುಕವಾಗಬೇಕು ಎಂದು ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಅವರು ಆಗ್ರಹಿಸಿದ್ದಾರೆ.

ಪ್ರಾಧಿಕಾರವು ಜನವರಿ 22ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಂಡಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಮಾರಂಭ ಉದ್ಘಾಟಿಸಲಿದ್ದು, ಹೈಕೋರ್ಟ್ ನ್ಯಾಯಮೂರ್ತಿ ಜಿ. ನರೇಂದರ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಕದ್ದ ಚಿನ್ನ ಖರೀದಿ ಆರೋಪ: ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕದ್ದ ಚಿನ್ನವನ್ನು ಖರೀದಿ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಅಟ್ಟಿಕಾ ಗೋಲ್ಡ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಇಬ್ಬರು ಉದ್ಯೋಗಿಗಳ ವಿರುದ್ಧ ದಾಖಲಿಸಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ಕಂಪನಿಯ ಉದ್ಯೋಗಿಗಳಾದ ಹೊನ್ನೇಗೌಡ ಮತ್ತು ಎಚ್.ಕೆ. ಪ್ರವೀಣ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ. ಪ್ರಕರಣದಲ್ಲಿ ಕಂಪನಿಯನ್ನು ಆರೋಪಿಯನ್ನಾಗಿ ಹೆಸರಿಸದೆ ಕೇವಲ ಉದ್ಯೋಗಿಗಳ ಮೇಲೆ ಆರೋಪ ಹೊರಿಸಿದ ಪೊಲೀಸರ ಕಾರ್ಯವೈಖರಿಗೆ ನ್ಯಾಯಪೀಠ ಇದೇ ವೇಳೆ ಅಸಮಾಧಾನ ವ್ಯಕ್ತಪಡಿಸಿದೆ.

‘ಚಿನ್ನಾಭರಣ ಕಳ್ಳತನ ಮಾಡಲಾಗಿದೆ ಎಂಬ ತಿಳಿವಳಿಕೆಯನ್ನು ಅರ್ಜಿದಾರರು ಹೊಂದಿದ್ದರು ಎಂಬ ಸಂಗತಿಯನ್ನು ಸಾಬೀತುಪಡಿಸಿ ಸಾಕ್ಷ್ಯಾಧಾರ ಒದಗಿಸುವಲ್ಲಿ ಪೊಲೀಸರು ವಿಫಲವಾಗಿದ್ದಾರೆ’ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಪೀಠ, ವಿಚಾರಣಾ ನ್ಯಾಯಾಲಯದಲ್ಲಿನ ಪ್ರಕರಣವನ್ನು ರದ್ದುಗೊಳಿಸಿದೆ.

ಕೆಲ ದುಷ್ಕರ್ಮಿಗಳು ವಿಜಯನಗದ ನಿವಾಸಿ ದಿನೇಶ್ ಎಂಬುವರ ಮನೆಯಲ್ಲಿ ಚಿನ್ನಾಭರಣ ಕದ್ದು, ಅಟ್ಟಿಕಾ ಗೋಲ್ಡ್ ಪ್ರೈವೈಟ್ ಲಿಮಿಟೆಡ್ ಕಂಪನಿಗೆ ಮಾರಾಟ ಮಾಡಿದ್ದರು. ಈ ಕುರಿತಂತೆ ದಿನೇಶ್ ದೂರು ದಾಖಲಿಸಿದ್ದರು. ವಿಜಯನಗರ ಠಾಣಾ ಪೊಲೀಸರು ಪೊಲೀಸರು ಮ್ಯಾಜಿಸ್ಟ್ರೇಟ್ ನ್ಯಾಯಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. 2017ರ ಸೆಪ್ಟೆಂಬರ್ 16ರಂದು ನ್ಯಾಯಾಲಯವು ಅರ್ಜಿದಾರರ ವಿರುದ್ಧ ಸಂಜ್ಞೇಯ ಅಪರಾಧ ದಾಖಲಿಸಿತ್ತು.

ಬಸ್ ನಿಲುಗಡೆ ವಿಚಾರಕ್ಕೆ ಕೊಲೆ

ಬೆಂಗಳೂರು: ಬಸ್ ನಿಲುಗಡೆ ವಿಚಾರಕ್ಕೆ ಚಾಲಕನ ಕೊಲೆ ಮಾಡಿದ್ದ ಕೂಡಿಗೇಹಳ್ಳಿಯ ಸ್ಕಂದನಗರದ ವೆಂಕಟೇಶ್ (48) ಎಂಬ ಆರೋಪಿಯನ್ನು ಕಾಮಾಕ್ಷಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

ಜ.13ರಂದು ಚರಂಡಿಯಲ್ಲಿ ವೆಂಕಟಸ್ವಾಮಿ ಅವರ ಮೃತದೇಹ ಪತ್ತೆಯಾಗಿತ್ತು. ಬಿಬಿಎಂಪಿ ಕಾರ್ಯನಿರ್ವಾಹಕ ಎಂಜಿನಿಯರ್ ಮಹಮ್ಮದ್ ಅಜ್ಮಲ್ ಆರೀಫ್ ಅವರ ದೂರಿನ ಮೇರೆಗೆ ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ ಕೊಲೆ ಪ್ರಕರಣವೆಂದು ಗೊತ್ತಾಗಿತ್ತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಜಿ.ಟಿ ಇಂಡಸ್ಟ್ರೀಯಲ್ ಕಾಂಪ್ಲೆಕ್ಸ್ ಬಳಿ ಬಸ್ ನಿಲುಗಡೆ ವಿಚಾರದಲ್ಲಿ ವೆಂಕಟಸ್ವಾಮಿ ಹಾಗೂ ವೆಂಕಟೇಶ್ ನಡುವೆ ಗಲಾಟೆ ನಡೆದಿತ್ತು. ಆರೋಪಿಯು ವೆಂಕಟಸ್ವಾಮಿಯನ್ನು ಕಾಲಿನಿಂದ ತುಳಿದು ಕೊಲೆ ಮಾಡಿದ್ದ. ಮೃತದೇಹವನ್ನು ಮಾಗಡಿ ರಸ್ತೆಯ ಸುಂಕದಕಟ್ಟೆ ಸಾಗರ್ ಟಿಂಬರ್ ಪ್ಲೈವುಡ್ ಅಂಗಡಿ ಎದುರಿನ ಚರಂಡಿಗೆ ಎಸೆದಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

‘ಎಂ. ಚಿದಾನಂದಮೂರ್ತಿ ಸಭಾಂಗಣ’ ಉದ್ಘಾಟನೆ: ವಿ. ಸೋಮಣ್ಣ, ಆಯೋಜನೆ: ಬಿಬಿಎಂಪಿ, ಸ್ಥಳ: ಪಾಲಿಕೆ ಸೌಧ, ಎಂ.ಸಿ. ಬಡಾವಣೆ, ಗೋವಿಂದರಾಜನಗರ, ಬೆಳಿಗ್ಗೆ 9

2023ನೇ ಸಾಲಿನ ಪ್ರಾಚಾರ್ಯರ ದಿನಚರಿ ಬಿಡುಗಡೆ ಸಮಾರಂಭ: ಅತಿಥಿಗಳು: ಸುದರ್ಶನ ಚನ್ನಂಗಿಹಳ್ಳಿ, ಅಧ್ಯಕ್ಷತೆ: ಶ್ರೀರಾಮ್ ಜಿ.ಕೆ., ಆಯೋಜನೆ: ಪದವಿಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಉತ್ತರ ಜಿಲ್ಲೆ, ಸ್ಥಳ: ಆರ್.ಆರ್. ಪದವಿಪೂರ್ವ ಕಾಲೇಜು, ಚಿಕ್ಕಬಾಣಾವರ ರೈಲ್ವೆ ನಿಲ್ದಾಣದ ಸಮೀಪ, ಹೆಸರಘಟ್ಟ ಮುಖ್ಯರಸ್ತೆ, ಬೆಳಿಗ್ಗೆ 9.30

‘ಇಮ್‌ಟೆಕ್ಸ್-2023’ ಅಂತರರಾಷ್ಟ್ರೀಯ ಯಂತ್ರೋಪಕರಣ ಮತ್ತು ಉತ್ಪಾದನಾ ತಂತ್ರಜ್ಞಾನದ ಪ್ರದರ್ಶನ: ಉದ್ಘಾಟನೆ: ಜೆಮ್‌ಶೆಡ್ ಎನ್. ಗೋದ್ರೆಜ್, ರವಿ ರಾಘವನ್, ಆಯೋಜಕರು: ಇಂಡಿಯನ್ ಮಷಿನ್ ಟೂಲ್ ಮ್ಯಾನುಫ್ಯಾಕ್ಚರರ್ಸ್ ಅಸೋಸಿಯೇಷನ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ, ಬೆಳಿಗ್ಗೆ 11.30

ಜಾಗೃತಿ ಕಾರ್ಯಕ್ರಮ: ವಿಷಯ: ‘ಯುವಕರು ಮತ್ತು ಹದಿಹರೆಯದವರಲ್ಲಿ ಮಾನಸಿಕ ಆರೋಗ್ಯದ ಅರಿವು’, ಉಪನ್ಯಾಸಕರು: ಡಾ.ಸಿ.ಆರ್. ಚಂದ್ರಶೇಖರ್, ಆಯೋಜನೆ ಮತ್ತು ಸ್ಥಳ: ಜೈನ್ ವಿಶ್ವವಿದ್ಯಾಲಯ, ಜಯನಗರ, ಮಧ್ಯಾಹ್ನ 2

ಭರತನಾಟ್ಯ ಪ್ರದರ್ಶನ: ಆಯೋಜನೆ: ಶ್ರೀಕಲಾಗೌರಿ ನೃತ್ಯಾಲಯ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 4

ಕರ್ನಾಟಕ ರಾಜ್ಯ ಪೊಲೀಸ್ ವಾರ್ಷಿಕ ಕ್ರೀಡಾ ಕೂಟದ ಸಮಾರೋಪ ಸಮಾರಂಭ: ಅತಿಥಿಗಳು: ಆರಗ ಜ್ಞಾನೇಂದ್ರ, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಕೆ.ಎಸ್.ಆರ್.ಪಿ. ಕ್ರೀಡಾಂಗಣ, ಕೋರಮಂಗಲ, ಸಂಜೆ 4

ನಾಗರಿಕ ಸನ್ಮಾನ, ಕ್ಯೂಬಾ ಸೌಹಾರ್ದತೆಯ ಸಮಾರಂಭ: ಸನ್ಮಾನಿತರು: ಅಲಿಡಾ ಗೆವಾರ, ಎಸ್ತಿಫಾನಿಯಾ, ಆಯೋಜನೆ: ವಿವಿಧ ಸಂಘಟನೆಗಳ ಸೌಹಾರ್ದ ಸಮಿತಿ, ಸ್ಥಳ: ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಸಭಾಂಗಣ, ಅರಮನೆ ರಸ್ತೆ, ಸಂಜೆ 4.30

ವೇಮನ ಜಯಂತಿ ಸಮಾರಂಭ: ಸಾನ್ನಿಧ್ಯ: ವೇಮನಾನಂದ ಸ್ವಾಮೀಜಿ, ಉದ್ಘಾಟನೆ: ರಾಮಲಿಂಗಾರೆಡ್ಡಿ, ಅತಿಥಿಗಳು: ಹಾಲಪ್ಪ ಆಚಾರ್, ಎಚ್.ಕೆ. ಪಾಟೀಲ್, ಎನ್.ಎಚ್. ಶಿವಶಂಕರ ರೆಡ್ಡಿ, ಎಸ್.ಆರ್. ವಿಶ್ವನಾಥ್, ಡಿ. ಕುಪೇಂದ್ರ ರೆಡ್ಡಿ, ಅಧ್ಯಕ್ಷತೆ: ಎಸ್. ಜಯರಾಮ ರೆಡ್ಡಿ, ಆಯೋಜನೆ: ಕರ್ನಾಟಕ ರೆಡ್ಡಿ ಜನ ಸಂಘ, ಸ್ಥಳ: ವೇಮನ ತಾಂತ್ರಿಕ ವಿದ್ಯಾಲಯದ ಸಭಾಂಗಣ, ಕೋರಮಂಗಲ, ಸಂಜೆ 4.30

ಮಕ್ಕಳ ಜನಪದ ಗಾಯನ: ಆಯೋಜನೆ: ಗೌರಿಶಂಕರ ಸಾಂಸ್ಕೃತಿಕ ಕ್ರೀಡಾ ದತ್ತಿ, ಸ್ಥಳ: ನ್ಯಾಷನಲ್ ಶಾಲೆ, ಬನಶಂಕರಿ, ಸಂಜೆ 6

‘ಷಟ್ಪದಿ ಕಾವ್ಯದ ಪರಿಚಯ’ ಕುರಿತು ಉಪನ್ಯಾಸ: ಗುರುಪ್ರಸಾದ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ನೃತ್ಯರೂಪಕ: ಲಲಿತಾ ಪದ್ಮನಾಭ ಮತ್ತು ತಂಡ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಮಲ್ಲೇಶ್ವರ, ಸಂಜೆ 6.30

ಭರತನಾಟ್ಯ ಪ್ರದರ್ಶನ: ರುಚಿರಾ ತೊರ್ವಿ, ಸುನಿಧಿ ಅನಂತ್, ಪ್ರವಲಿಕ ಸತ್ಯನಾರಾಯಣ, ರಚನಾ ತೊರ್ವಿ, ನಿರ್ದೇಶನ: ಸತ್ಯನಾರಾಯಣ ರಾಜು, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 7.30





ಧರಣಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಬುಧವಾರದಿಂದ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿದ್ದು, ರಾತ್ರಿ ಸ್ಥಳದಲ್ಲೇ ಮಲಗಿದರು
ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಇನ್ನೊಂದು ಸುದ್ದಿ, ಚಿತ್ರ 05

ವೃದ್ಧನನ್ನು ಎಳೆದೊಯ್ದ ಪ್ರಕರಣ: ಆರೋಪಿ ತಪ್ಪೊಪ್ಪಿಗೆ

‘ಭಯದಿಂದ ಎಳೆದೊಯ್ದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನು ಮಾಡಿದ್ದು ಅಮಾನವೀಯ ಕೃತ್ಯ. ಸ್ಥಳದಲ್ಲಿದ್ದ ಜನರು ನನ್ನ ಮೇಲೆಯೇ ದಾಳಿ ಮಾಡುವ ಭಯದಿಂದ ಪರಾರಿಯಾಗಲು ಯತ್ನಿಸಿದೆ’ ಎಂದು ವಾಹನಕ್ಕೆ ಜೋತುಬಿದ್ದ ವೃದ್ಧ ಮುತ್ತಪ್ಪ ತೋಂಟಾಪುರ (71) ಅವರನ್ನು ರಸ್ತೆಯಲ್ಲೇ ಎಳೆದೊಯ್ದು ಕೊಲೆಗೆ ಯತ್ನಿಸಿದ್ದ ಆರೋಪಿ ಸಾಹಿಲ್ ಪೊಲೀಸರ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾನೆ’ ಎಂದು ಮೂಲಗಳು ಹೇಳಿವೆ.

ವಿಜಯನಗರದ ಹೊಸಹಳ್ಳಿ ಮೆಟ್ರೊ ನಿಲ್ದಾಣ ಬಳಿ ಮಂಗಳವಾರ ಈ ಘಟನೆ ನಡೆದಿತ್ತು.

‘ಮುತ್ತಪ್ಪ ಅವರು ಬೈಕ್ ಬ್ಯಾಕ್ ರೆಸ್ಟ್ (ಹಿಂಬದಿಯ ಹಿಡಿಕೆ) ಹಿಡಿದಿಕೊಂಡಿದ್ದು ಆರಂಭದಲ್ಲಿ ತಿಳಿಯಲಿಲ್ಲ. ಬೊಲೆರೊ ಪಿಕ್‌ಅಪ್ ವಾಹನಕ್ಕೆ ಡಿಕ್ಕಿಯಾದ ಮೇಲೆ ವಯಸ್ಕರಾದ ಮುತ್ತಪ್ಪ ಕಿರುಚಿದರು. ನನ್ನನ್ನು ತಡೆದು ನಿಲ್ಲಿಸಲು ಮುಂದಾದರು. ಈ ಘಟನೆಯಿಂದ ಕೆಲಕ್ಷಣ ವಿಚಲಿತನಾಗಿ ಪರಾರಿಯಾಗಲು ಯತ್ನಿಸಿದೆ’ ಎಂದು ವಿಚಾರಣೆ ವೇಳೆ ಹೇಳಿದ್ದಾನೆ.

‘ಬೈಕ್ ಮುಂದೆ ಕಾರೊಂದು ಚಲಿಸುತ್ತಿದ್ದರಿಂದ ಜೀಪನ್ನು ಗಮನಿಸಲಿಲ್ಲ. ಕಾರು ಚಾಲಕ ದಿಢೀರ್ ಬಲಕ್ಕೆ ತಿರುವು ಪಡೆದು ವೇಗವಾಗಿ ಚಲಾಯಿಸಿದ. ಆಗ ಈ ಘಟನೆ ನಡೆಯಿತು. ಜನರು ದಾಳಿ ಮಾಡಬಹುದೆಂದು ಹೆದರಿ ವೇಗವಾಗಿ ಬೈಕ್ ಅನ್ನು ಚಲಾಯಿಸಿದೆ’ ಎಂದು ತಿಳಿಸಿದ್ದಾನೆ.

‘ಆರೋಪಿಯ ವಿರುದ್ಧ ಈ ಹಿಂದೆ ಯಾವುದೇ ಪ್ರಕರಣಗಳು ಇರಲಿಲ್ಲ. ಈಗ ಕೊಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಆರೋಪಿಯನ್ನು ಬುಧವಾರ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ಜ.31ರ ತನಕ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಹೈಟೆನ್ಷನ್ ವಿದ್ಯುತ್ ತಂತಿ ತಗುಲಿ ಬಾಲಕ ಸಾವು

ಬೆಂಗಳೂರು: ಆರ್.ಟಿ. ನಗರದ ಚಾಮುಂಡಿ ನಗರದ ಫ್ಯಾಕ್ಟರಿ ಬಳಿ ಗಾಳಿಪಟ ಹಾರಿಸಲು ತೆರಳಿದ್ದಾಗ ಹೈಟೆನ್ಷನ್ ವಿದ್ಯುತ್ ತಂತಿ ತಗುಲಿ ಗಂಭೀರವಾಗಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದ ಅಬೂಬಕರ್ (11) ಎಂಬ ಬಾಲಕ ಬುಧವಾರ ಮೃತಪಟ್ಟಿದ್ದಾನೆ.

ಜ.16ರಂದು ಮಧ್ಯಾಹ್ನ ಗಾಳಿಪಟ ಹಾರಿಸುತ್ತಿದ್ದಾಗ ವಿದ್ಯುತ್ ತಂತಿಗೆ ಗಾಳಿಪಟ ಸಿಲುಕಿಕೊಂಡಿತ್ತು. ಪಕ್ಕದ ಕಟ್ಟಡವನ್ನೇರಿ ಗಾಳಿಪಟ ಬಿಡಿಸುವ ವೇಳೆ ಕೆಪಿಟಿಸಿಎಲ್‌ನ 66 ಕೆ.ವಿ ಹೈಟೆನ್ಷನ್ ವಿದ್ಯುತ್ ತಂತಿ ತಗುಲಿತ್ತು. ಆತನನ್ನು ವಿಕ್ಟೋರಿಯಾ ಆಸ್ಪತ್ರೆ ಸುಟ್ಟ ಗಾಯಗಳ ವಿಭಾಗಕ್ಕೆ ದಾಖಲಿಸಲಾಗಿತ್ತು.

ದೂರು ದಾಖಲು: ಬಾಲಕನ ತಾಯಿ ದೂರು ನೀಡಿದ್ದು, ನಿರ್ಲಕ್ಷ್ಯ ಆರೋಪದ ಅಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಬೆಸ್ಕಾಂ ಹಾಗೂ ಕೆಪಿಟಿಸಿಎಲ್ ಅಧಿಕಾರಿಗಳ ವಿರುದ್ಧ ದೂರು ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ‘ಸ್ಥಳಕ್ಕೆ ಕೆಪಿಟಿಸಿಎಲ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದಾರೆ. ಈ ಘಟನೆ ಬೆಸ್ಕಾಂ ನಿರ್ಲಕ್ಷ್ಯದಿಂದ ಸಂಭವಿಸಿಲ್ಲ’ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಬಿಎಂಟಿಸಿ ಬಸ್ ಡಿಕ್ಕಿ: ಬೈಕ್ ಸವಾರ ಸಾವು

ಬೆಂಗಳೂರು: ಸುಮನಹಳ್ಳಿ ಸೇತುವೆ ಬಳಿ ಬಿಎಂಟಿಸಿ ಬಸ್ಸೊಂದು ಬೈಕಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದ ಅಪಘಾತದಲ್ಲಿ ಬೈಕ್ ಸವಾರ ವಿಜಯನಗರದ ಕುಲದೀಪ್ ಬಗರೇಚಾ ಮೃತಪಟ್ಟಿದ್ದಾರೆ.

ಬೈಕ್‌ನಲ್ಲಿ ಕುಲದೀಪ್ ಸೇತುವೆ ಬಳಿ ತೆರಳುತ್ತಿದ್ದರು. ಆಗ ಹಿಂಬದಿಯಿಂದ ವೇಗವಾಗಿ ಬಂದ ಬಸ್ ಬೈಕ್‌ಗೆ ಡಿಕ್ಕಿಯಾಗಿದೆ. ಬಸ್ಸಿನ ಹಿಂಬದಿಯ ಚಕ್ರಕ್ಕೆ ಸವಾರ ಸಿಲುಕಿ ಗಂಭೀರವಾಗಿ ಗಾಯಗೊಂಡಿದ್ದರು. ಸಂಚಾರಿ ಪೊಲೀಸರು ಹಾಗೂ ಸ್ಥಳೀಯರು ಗಾಯಗೊಂಡ ಸವಾರನನ್ನು ಕೆ.ಸಿ. ಜನರಲ್ ಆಸ್ಪತ್ರೆಗೆ ದಾಖಲಿಸಿದ್ದರು. ಆಸ್ಪತ್ರೆಯಲ್ಲಿ ಅವರು ಮೃತಪಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ. ಬಸ್ ಚಾಲಕ ಆನಂದ್‌ರಾವ್ ಎಂಬುವವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಅಪರಾಧ ಸುದ್ದಿಗಳು

ಮಾದಕ ವಸ್ತು ಮಾರಾಟ: ನಾಲ್ವರ ಬಂಧನ


ಶೇಖ್ ಅಲಿ


ಸನ್ಮಾನ್


ಮುಜಾಮಿಲ್


ವಿನೋದ್

ಬೆಂಗಳೂರು: ವಿದ್ಯಾರಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ನಿಷೇಧಿತ ಮಾದಕ ವಸ್ತುಗಳಾದ ಎಂಡಿಎಂಎ ಕ್ರಿಸ್ಟಲ್ ಹಾಗೂ ಗಾಂಜಾ ಮಾರುತ್ತಿದ್ದ ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ವರದರಾಜನಗರದ ಶೇಖ್ ಅಲಿ (47), ಶೇಖ್ ಸನ್ಮಾನ್ (24), ವಿಲ್ಸನ್ ಗಾರ್ಡನ್ ಮುಜಾಮಿಲ್ (34) ಹಾಗೂ ಲಕ್ಷ್ಮಿನಾರಾಯಣ ಪುರದ ವಿ.ಎಚ್. ವಿನೋದ್ ಕುಮಾರ್ (28) ಬಂಧಿತ ಆರೋಪಿಗಳು.

‘ಬಂಧಿತರಿಂದ 2 ಕೆ.ಜಿ ಗಾಂಜಾ, 56 ಗ್ರಾಂ ಎಂಡಿಎಂಎ ಕ್ರಿಸ್ಟಲ್, ₹ 2.39 ಲಕ್ಷ ನಗದು, ಎರಡು ಮೊಬೈಲ್, ಎರಡು ದ್ವಿಚಕ್ರ ವಾಹನ ಸೇರಿದಂತೆ ಒಟ್ಟು ₹ 9 ಲಕ್ಷ ಮೌಲ್ಯ ವಸ್ತು ಜಪ್ತಿ ಮಾಡಲಾಗಿದೆ’ ಎಂದು ಮೂಲಗಳು ಹೇಳಿವೆ.

‘ಹೆಚ್ಚಿನ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಕಾಲೇಜು ವಿದ್ಯಾರ್ಥಿಗಳು ಹಾಗೂ ವ್ಯಸನಿಗಳಿಗೆ ಮಾದಕ ವಸ್ತು ಮಾರಾಟ ಮಾಡುತ್ತಿದ್ದರು. ಒಂದು ಗ್ರಾಂ ಎಂಡಿಎಂಎ ಅನ್ನು ₹ 8 ಸಾವಿರದಿಂದ ₹ 10 ಸಾವಿರಕ್ಕೆ ಹಾಗೂ 10 ಗ್ರಾಂ ಗಾಂಜಾವನ್ನು ₹ 1 ಸಾವಿರದಿಂದ ₹ 2 ಸಾವಿರಕ್ಕೆ ಮಾರಾಟ ಮಾಡುತ್ತಿದ್ದರು’ ಎಂದು ಮೂಲಗಳು ತಿಳಿಸಿವೆ.

ಐಷಾರಾಮಿ ಕಾರು ಕಳವು ಬಂಧನ

ಬೆಂಗಳೂರು: ಬೇರೆ ಬೇರೆ ರಾಜ್ಯಗಳಲ್ಲಿ ಐಷಾರಾಮಿ ಕಾರು ಹಾಗೂ ವಾಹನಗಳನ್ನು ಕಳವು ಮಾಡಿ ನಂಬರ್ ಪ್ಲೇಟ್ ಬದಲಾಯಿಸಿ ಮಾರಾಟ ಮಾಡುತ್ತಿದ್ದ ಕೆ.ಜಿ.ಹಳ್ಳಿಯ ವೆಂಕಟೇಶಪುರದ ಮಹಮ್ಮದ್ ಫೈರೋಜ್ ಪಾಷಾ (36) ಎಂಬ ಆರೋಪಿಯನ್ನು ಪುಲಿಕೇಶಿ ನಗರದ ಪೊಲೀಸರು ಬಂಧಿಸಿದ್ದಾರೆ.

‘ಆರೋಪಿಯಿಂದ ಮಾರುತಿ ಬಲೆನೊ ಕಾರು, ಮಾರುತಿ ಈಕೊ ಕಾರು, ಅಶೋಕ ಲೈಲ್ಯಾಂಡ್ ಕಂಪನಿಯ ಮಿನಿ ಟೆಂಪೊ ಸೇರಿದಂತೆ ₹ 20 ಲಕ್ಷ ಮೌಲ್ಯದ ಮೂರು ವಾಹನ ವಶಕ್ಕೆ ಪಡೆಯಲಾಗಿದೆ. ಈತ ಐಷಾರಾಮಿ ಕಾರುಗಳನ್ನೇ ಗುರುತಿಸಿ ಕಳವು ಮಾಡುತ್ತಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆರೋಪಿ ಕಾರು ಖರೀದಿಸಿ ನಂಬರ್ ಪ್ಲೇಟ್ ಬದಲಾವಣೆ ಮಾಡಿ ಮಾರಾಟ ಮಾಡಿ ಮೋಸ ಎಸಗಿದ್ದಾನೆ ಎಂದು ಕೆ.ಜಿ.ಹಳ್ಳಿಯ ಜಬೀರ್ ಷರೀಫ್ ಎಂಬುವವರು ದೂರು ನೀಡಿದ್ದರು. ಈ ದೂರು ಆಧರಿಸಿ ತನಿಖೆ ನಡೆಸಿದಾಗ ಆರೋಪಿಯ ಕೃತ್ಯ ಗೊತ್ತಾಗಿದೆ.

ಕೊಲೆ: ಬಂಧನ

ಬೆಂಗಳೂರು: ಕೊಡೆಯ ತುದಿಯ ಚೂಪಾದ ರಾಡಿನಿಂದ ತಿವಿದು ಕೊಲೆ ಮಾಡಿದ್ದ ಕೆಂಗೇರಿ ಉಪನಗರ ಬಳಿಯ ವಿನಾಯಕನಗರದ ವೆಂಕಟೇಶ್ (32) ಎಂಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

‘ಕೊಲೆಯಾದ ಸತೀಶ್ ಹಾಗೂ ಆರೋಪಿ ತಂಗಿ ನಡುವೆ ಸ್ನೇಹವಿತ್ತು. ಈ ಸ್ನೇಹ ಮುಂದುವರಿಸುವುದು ಬೇಡವೆಂದು ಎಚ್ಚರಿಕೆ ನೀಡಿದ್ದರೂ ಸತೀಶ್ ಮನೆಯ ಎದುರು ಬಂದು ಗಲಾಟೆ ನಡೆಸುತ್ತಿದ್ದ. ಆರೋಪಿ ತಂಗಿ ಕೆಲಸ ಮಾಡುತ್ತಿದ್ದ ಟೀ ಅಂಗಡಿಯ ಬಳಿಗೂ ಬಂದು ಪೀಡಿಸುತ್ತಿದ್ದ. ಈ ವಿಚಾರಕ್ಕೆ ಸಂತೀಶ್‌ನ್ನು ಆಟೋದಲ್ಲಿ ವಿಶ್ವೇಶ್ವರಯ್ಯ ಲೇಔಟ್‌ನ ಧನನಾಯಕನಹಳ್ಳಿ ನೈಸ್ ಬ್ರಿಡ್ಜ್‌ಗೆ ಕರೆದೊಯ್ದು ಕೊಲೆ ಮಾಡಲಾಗಿತ್ತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

₹ 40 ಲಕ್ಷದ ನಕಲಿ ವಸ್ತುಗಳ ಜಪ್ತಿ

ಬೆಂಗಳೂರು: ವಿ.ವಿ ಪುರಂ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರತಿಷ್ಠಿತ ಕಂಪನಿಗಳ ಉತ್ಪನ್ನಗಳನ್ನು ನಕಲಿಯಾಗಿ ತಯಾರಿಸಿ ಮಾರಾಟ ಮಾಡಿ ವಂಚಿಸುತ್ತಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳಿಂದ ₹ 40 ಲಕ್ಷದ ವಸ್ತು ಜಪ್ತಿ ಮಾಡಲಾಗಿದೆ.

ರಾಜಸ್ಥಾನದ ಜಾಲೀರಿ ಜಿಲ್ಲೆ ನಂದಿನಿನಗರದ ನರೇಶ್ ಕುಮಾರ್ (29), ಬೆಂಗಳೂರಿನ ಗಣೇಶ್‌ನಗರದ ಮಹೇಂದ್ರ ಕುಮಾರ್ ಹಾಗೂ ಗುಜರಾತಿನ ಮನೋಜ್ ಗೋಸಾಲ ಎಂಬುವವರನ್ನು ಬಂಧಿಸಲಾಗಿದೆ.

ನಲಪತ್ ಸಿಂಗ್, ಸುಧೀರ್ ನಾರಾಯಣ ಸಿಂಗ್ ಎಂಬುವವರು ತಲೆಮರೆಸಿಕೊಂಡಿದ್ದು, ಬಂಧನಕ್ಕೆ ತಂಡ ರಚಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಗುಡ್‌ನೈಟ್, ಆಲ್‌ಔಟ್, ಲೈಜಾಲ್, ಹಾರ್ಪಿಕ್‌ಗಳನ್ನು ನಕಲು ತಯಾರಿಸಿ ಮಾರಾಟ ಮಾಡಿ ಹಣ ಗಳಿಸುತ್ತಿದ್ದರು. ಎನ್.ಟಿ. ಪೇಟೆಯ ತಪಾಸಣೆ ವೇಳೆ ಇನೋವಾ ಕಾರಿನಲ್ಲಿ ನಕಲಿ ವಸ್ತುಗಳನ್ನು ಮಾರಾಟಕ್ಕೆ ಒಯ್ಯುತ್ತಿರುವುದು ಪತ್ತೆಯಾಗಿತ್ತು’ ಎಂದು ತಿಳಿಸಿವೆ.

ಗುಡ್‌ನೈಟ್ ಲಿಕ್ವಿಡ್ ಭರ್ತಿಗೆ ಶೇಖರಿಸಿದ್ದ ಖಾಲಿ ಬಾಟಲಿಗಳು ಸೇರಿದಂತೆ ಹಲವು ಕಂಪನಿಗಳ ಹೆಸರಿನಲ್ಲಿ ನಕಲಿ ಉತ್ಪನ್ನಗಳನ್ನು ಜಪ್ತಿ ಮಾಡಲಾಗಿದೆ’ ಎಂದರು.

ಅಪಘಾತದಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿ ಸಾವು

ಬೆಂಗಳೂರು: ನೈಸ್ ರಸ್ತೆಯಲ್ಲಿ ಈಚೆಗೆ ನಡೆದಿದ್ದ ಅಪಘಾತದಲ್ಲಿ ನಗರದ ಎಎಂಸಿ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ಸುಮೀರ್ ಚೌಧರಿ (19) ಎಂಬುವವರು ಮೃತಪಟ್ಟಿದ್ದಾರೆ.

ಸುಮೀರ್ ‘ಆರ್ಟಿಫಿಷಿಯಲ್ ಇಂಟೆಲಿಜೆನ್ಸ್’ ವಿಭಾಗದಲ್ಲಿ ಮೊದಲನೇ ವರ್ಷದ ಬಿ.ಇ ವ್ಯಾಸಂಗ ಮಾಡುತ್ತಿದ್ದರು. ನ್ಯೂಸ್ ಏಜ್ ಹೆರಾಲ್ಡ್ ಪತ್ರಿಕೆಯ ಸಂಪಾದಕ ಎನ್.ಎ.ಚೌಧರಿ ಅವರ ಪುತ್ರ ಸುಮೀರ್.

‘ಕಾಲೇಜು ಮುಗಿಸಿಕೊಂಡು ಬೈಕ್‌ನಲ್ಲಿ ಮನೆಗೆ ತೆರಳುತ್ತಿದ್ದಾಗ ಲಾರಿ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿತ್ತು. ಅಪಘಾತದಲ್ಲಿ ಅವರು ತೀವ್ರ ಗಾಯಗೊಂಡಿದ್ದರು. ಎಲೆಕ್ಟ್ರಾನಿಕ್ ಸಿಟಿಯ ಕಾವೇರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು’ ಎಂದು ಮೂಲಗಳು ತಿಳಿಸಿವೆ.

ಸ್ಪರ್ಧಾ ವಾಣಿ



ಯುಪಿಎಸ್‌ಸಿ, ಕೆಪಿಎಸ್‌ಸಿ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪ್ರಬಂಧ ರಚನೆಯೂ ಒಂದು ವಿಷಯವಾಗಿದೆ. ಪ್ರಬಂಧ ರಚನೆಗೆ ಅಗತ್ಯವಾದ ಮಾಹಿತಿಯೊಂದನ್ನು ಇಲ್ಲಿ ನೀಡಲಾಗಿದೆ.

ಭಾರತದಲ್ಲಿ ಮಹಿಳಾ ಚಳವಳಿ

ಪ್ರಬಂಧ

ಹನುಮನಾಯಕ್ ರಾಥೋಡ್

ದೇಶದಲ್ಲಿ ಮಹಿಳೆಯರ ಅಸ್ಮಿತೆಗಾಗಿ ನಡೆದ ಹೋರಾಟವನ್ನು ಎರಡು ಭಾಗಗಳಲ್ಲಿ ನೋಡಬಹುದು.
1. ಸ್ವಾತಂತ್ರ್ಯ ಪೂರ್ವದ ಮಹಿಳಾ ಚಳವಳಿ
2 ಸ್ವಾತಂತ್ರ್ಯಾ ನಂತರದ ಮಹಿಳಾ ಚಳವಳಿ

ಸ್ವಾತಂತ್ರ್ಯ ಪೂರ್ವದ ಮಹಿಳಾ ಚಳವಳಿ

- ಸ್ವಾತಂತ್ರ್ಯ ಪೂರ್ವದ ಮಹಿಳಾ ಚಳವಳಿಯು ಸಮಾಜ ಸುಧಾರಣೆಯ ಭಾಗವಾಗಿತ್ತು. ಸಾಮಾಜಿಕ ನಿಂದನೆ, ಏಕಾಂಗಿತನ ಅನುಭವಿಸಿದ ವಿಧವೆಯರು, ಸತಿಪದ್ಧತಿಯಿಂದ ಶೋಷಿತರಾದವರು, ಪರದಾ ಪದ್ಧತಿಯಿಂದ ನಲುಗಿದವರು, ವೇಶ್ಯಾವಾಟಿಕೆ ಹಾಗೂ ಬಾಲ್ಯವಿವಾಹಕ್ಕೆ ಒಳಗಾದವರ ಪರವಾಗಿ ಹೋರಾಟ ನಡೆಯಿತು. ಸುದೀರ್ಘ ಹೋರಾಟದಿಂದ ಸತಿಪದ್ಧತಿ ನಿಷೇಧ ಕಾಯ್ದೆ 1829ರಲ್ಲಿ ಜಾರಿಯಾಯಿತು.
- ಸಮಾಜ ಸುಧಾರಣಾ ಸಂಘಟನೆಗಳಾಗಿದ್ದ ಬ್ರಹ್ಮಸಮಾಜ, ಆರ್ಯಸಮಾಜದ ಪ್ರಯತ್ನದಿಂದ ಮಹಿಳಾ ಮಂಡಳಿಗಳು ರೂಪುಗೊಂಡವು. ಇದರಿಂದ ಸ್ತ್ರೀಯರ ಸಾಮಾಜೀಕರಣ ಮತ್ತು ಶಿಕ್ಷಣಕ್ಕೆ ಸೂಕ್ತ ವಾತಾವರಣ ದೊರೆಯಿತು.
- 1900ರ ಅವಧಿಯ ಆರಂಭದಲ್ಲಿ ಮಹಿಳಾ ಸಂಘಟನೆಗಳು ಭಾರತದ ನಗರ ಕೇಂದ್ರಗಳಲ್ಲಿ ಸ್ಥಾಪನೆಗೊಂಡವು.
- ಮದ್ರಾಸ್‌ನಲ್ಲಿ ಸುಬ್ಬಲಕ್ಷ್ಮಿ ಅಮ್ಮಾಳ್‌ರಿಂದ ಬ್ರಾಹ್ಮಣ ಮಹಿಳಾ ನಿಲಯ ಪ್ರಾರಂಭವಾಯಿತು.
- ಮೈಸೂರಿನಲ್ಲಿ ಮಹಿಳಾ ಸೇವಾ ಸಮಾಜ, ಪುಣೆಯಲ್ಲಿ ಭಗಿನೀ ಸಮಾಜ, ಬರೋಡದಲ್ಲಿ ಚಾಮನ್‌ಭಾಯಿ ಪ್ರಸೂತಿ ಮತ್ತು ಶಿಶು ಅಭಿವೃದ್ಧಿ ಕೇಂದ್ರಗಳು ಆರಂಭಗೊಂಡವು.
- 1905ರಲ್ಲಿ ವಿದೇಶಿ ವಸ್ತುಗಳನ್ನು ನಿಷೇಧಿಸುವಂತೆ ಮಹಿಳಾ ನೇತಾರರಿಗೆ ಕರೆ ನೀಡಲಾಗಿತ್ತು.
- 1930ರ ಅವಧಿಯಲ್ಲಿ ಗಾಂಧೀಜಿ ಅವರು ಚಾಲನೆ ನೀಡಿದ ಅಸಹಕಾರ - ಚಳವಳಿ ಮತ್ತು ಕಾನೂನು ಭಂಗ ಚಳವಳಿಯಲ್ಲಿ ಅಪಾರ ಸಂಖ್ಯೆಯ ಮಹಿಳೆಯರು ಭಾಗವಹಿಸಿದ್ದರು. ಆಗಿನ ಕಾಲದಲ್ಲಿ ಪ್ರಚಲಿತದಲ್ಲಿದ್ದ ಸಮಾನತೆ ಮತ್ತು ಸಮಾನ ಅವಕಾಶಗಳಿಗೆ ಅಡ್ಡಿಪಡಿಸುವ ಸಾಮಾಜಿಕ, ಶಾಸನಾತ್ಮಕ ಅಂಶಗಳನ್ನು ತೊಡೆದು ಹಾಕಬೇಕು ಎಂದು ಈ ಎಲ್ಲಾ ಮಹಿಳಾ ಸಂಘಗಳು ಅಗ್ರಹಿಸಿದವು.
- ಅಖಿಲ ಭಾರತ ಮಹಿಳಾ ಸಮ್ಮೇಳನ (The All India Women's Conference)-1924ರಲ್ಲಿ ಸ್ಥಾಪನೆಗೊಂಡಿತು. ಕಾಲಕ್ರಮೇಣ ಈ ಸಂಘಟನೆ ಬೃಹತ್ ಸಮಾವೇಶವಾಗಿ ಬೆಳೆಯಿತು. ಸಮಾನ ಹಕ್ಕುಗಳು, ಸಹ ಶಿಕ್ಷಣ, ವಿವಾಹ ವಿಚ್ಛೇದನ, ಆಸ್ತಿಯ ಉತ್ತರಾಧಿಕಾರದ ಹಕ್ಕುಗಳು, ಆರ್ಥಿಕ ಸಮಾನತೆ, ಗಂಡನ ಆದಾಯದಲ್ಲಿ ಸಮಪಾಲು ಸೇರಿ ಹಲವು ಬೇಡಿಕೆಗಳನ್ನು ಮುಂದಿಡಲಾಯಿತು.

ಸ್ವಾತಂತ್ರ್ಯೋತ್ತರ ಮಹಿಳಾ ಚಳವಳಿ

- ಅನೇಕ ಮಧ್ಯಮ ವರ್ಗದ ಮಹಿಳೆಯರು ಶೈಕ್ಷಣಿಕ ವಲಯ, ಸರ್ಕಾರಿ ಮತ್ತು ವೃತ್ತಿಪರ ಉದ್ಯೋಗಗಳಲ್ಲಿ ತಮ್ಮದೇ ಆದ ಸ್ಥಾನ ಪಡೆದುಕೊಂಡರು.. ಹೀಗೆ ಮುಂದುವರಿದ ಮಹಿಳೆಯರ ಸಂಖ್ಯೆ ಕಡಿಮೆಯಾಗಿದ್ದರೂ ಆ ಬೆಳವಣಿಗೆಯು ಹೊಸ ಭರವಸೆಯನ್ನು ಸೃಷ್ಟಿಸಿತು. 1960 ಮತ್ತು 1970ರಲ್ಲಿ ಹಲವು ಮಹಿಳಾ ಹೋರಾಟಗಳು ನಡೆದವು. ಅಸಂಖ್ಯಾತ ಮಹಿಳೆಯರು ಬೆಲೆ ಏರಿಕೆ, ಭೂ - ಸುಧಾರಣೆ ಮತ್ತು ರೈತರ ಚಳವಳಿಯಲ್ಲಿ ಸಕ್ರಿಯರಾಗಿ ಪಾಲ್ಗೊಂಡಿದ್ದರು.
- ದೇಶದ ವಿವಿಧ ಭಾಗಗಳಲ್ಲಿ ಮಹಿಳೆಯರು ತಮ್ಮದೇ ಸಂಘಟನೆಗಳನ್ನು ರಚಿಸಿಕೊಂಡು ಕ್ರಿಯಾಶೀಲರಾಗಿದ್ದರು. ಜ್ಯೋತಿಬಾ ಪುಲೆ, ಗಾಂಧೀಜಿ, ಜಯಪ್ರಕಾಶ್ ನಾರಾಯಣ್, ಡಾ. ಬಿ.ಆರ್. ಅಂಬೇಡ್ಕರ್ ಮತ್ತು ರಾಮಮನೋಹರ್ ಲೋಹಿಯಾ ಸೇರಿ ಹಲವರ ಸೈದ್ಧಾಂತಿಕ ಚಿಂತನೆಗಳು ಮತ್ತು ಪ್ರೋತ್ಸಾಹಗಳು ಈ ಮಹಿಳೆಯರು ಸಂಘಟಿತರಾಗಲು ನೆರವಾದವು.
- ಕಮ್ಯುನಿಸ್ಟ್ ಪಕ್ಷಗಳು 1975ರಲ್ಲಿ ಮಹಿಳಾ ಸಬಲೀಕರಣಕ್ಕೆ ಹೆಚ್ಚು ಬೆಂಬಲ ನೀಡಿದವು. ಭಾರತೀಯ ಕಮ್ಯುನಿಸ್ಟ್ ಪಕ್ಷವು ತಿರುವನಂತಪುರದಲ್ಲಿ ರಾಷ್ಟ್ರೀಯ ಮಹಿಳಾ ಶಿಬಿರವನ್ನು ಏರ್ಪಡಿಸಿತ್ತು.
- ಮಹಾರಾಷ್ಟ್ರದ ಶಾಹದ್‌ನಲ್ಲಿ ನಡೆದ ಶಿಬಿರದಲ್ಲಿ ಕೌಟುಂಬಿಕ ದೌರ್ಜನ್ಯ ಮತ್ತು ಮದ್ಯಪಾನ ನಿಷೇಧ ಮುಂತಾದ ವಿಷಯಗಳನ್ನು ಚರ್ಚಿಸಲಾಯಿತು. ಹೈದರಾಬಾದ್‌ನ ಪ್ರಗತಿಪರ ಮಹಿಳಾ ಸಂಘಟನೆಗಳು ಲೈಂಗಿಕ ಕಿರುಕುಳ ಮತ್ತು ವರದಕ್ಷಿಣೆ ವಿರುದ್ಧ ಹೋರಾಟವನ್ನು ಆರಂಭಿಸಿದವು. ಮಹಿಳೆಯರ ಮತ್ತು ವಿದ್ಯಾರ್ಥಿಗಳ ಅನೌಪಚಾರಿಕ ಚರ್ಚಾಗೋಷ್ಠಿಗಳು ದೇಶದ ವಿವಿಧ ಭಾಗಗಳಲ್ಲಿ ನಡೆದವು. ದೇವದಾಸಿಯರು ಮತ್ತು ಮುಸ್ಲಿಂ ಸಮುದಾಯದ ಮಹಿಳೆಯರ ಸಭೆ ನಡೆಯಿತು.
- 1980ರ ದಶಕದ ಆರಂಭದಲ್ಲಿ ಸ್ತ್ರೀ ಮುಕ್ತಿ ಸಂಘಟನೆಯು ಮುಂಬೈನಲ್ಲಿ ಭಿತ್ತಿಚಿತ್ರ ಪ್ರದರ್ಶನ ಮತ್ತು ಶಿಬಿರಗಳನ್ನು ಹಮ್ಮಿಕೊಂಡಿತ್ತು.
- ಹೈದರಾಬಾದ್‌ನಲ್ಲಿ ಸ್ತ್ರೀ ಶಕ್ತಿ ಸಂಘಟನಾ (Progressive Meeting Organization) ಮತ್ತು ಪುಣೆಯಲ್ಲಿ ಪುರಗಾಮಿ ಸಂಘಟನೆಗಳು (Purogami Sanghatana) ಸ್ಥಾಪನೆಗೊಂಡವು. ಸ್ತ್ರೀ ಸಂಘರ್ಷ, ದೆಹಲಿಯಲ್ಲಿ ಮಹಿಳಾ ದಕ್ಷತಾ, ಚೆನ್ನೈನಲ್ಲಿ ಪೆಣ್ಣ್ ಉರಿಮೈ ಇಯಾಕಾಮ್ (Pennurimai Iyyakam)ಬೆಂಗಳೂರಿನಲ್ಲಿ ವಿಮೋಚನಾ ಸಂಘಟನೆಗಳು ನಂತರದಲ್ಲಿ ಹುಟ್ಟಿಕೊಂಡವು.
- 1986ರ ವರದಕ್ಷಿಣೆ ನಿಷೇಧ ಕಾಯ್ದೆಯಡಿಯಲ್ಲಿ. ಸಂತ್ರಸ್ತರು ದೂರು ನೀಡಬಹುದಾದರೂ, ಆ ಕಾಯ್ದೆಯ ಉದ್ದೇಶವು ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ.
- 1988-89ರಿಂದ ಸರ್ಕಾರ ಜಾರಿಗೊಳಿಸಿರುವ ಸಮಗ್ರ ಸಾಕ್ಷರ ಕಾರ್ಯಕ್ರಮದ (Total Literacy Programs) ಮೂಲಕ ಹೆಚ್ಚಿನ ಮಹಿಳೆಯರು ಅಕ್ಷರಲೋಕಕ್ಕೆ ಪರಿಚಯಿಸಲ್ಪಟ್ಟರು. ವಯಸ್ಕರ ಶಿಕ್ಷಣ ಪ್ರಭಾವದಿಂದ ಗ್ರಾಮೀಣ ಭಾಗದಲ್ಲಿ ಪಾನ ನಿಷೇಧ ಚಳವಳಿ ನಡೆಯಿತು. ಇದು ದೀಬುಗುಂಟ ಎಂಬ ಗ್ರಾಮದಿಂದ ಆರಂಭಗೊಂಡಿತ್ತು.

ಹೊಸ ಸವಾಲುಗಳು

- ಮಹಿಳಾ ಚಳವಳಿಗೆ ಸುದೀರ್ಘವಾದ ಚರಿತ್ರೆ ಇದ್ದರೂ, ಭಾರತದ ಸ್ತ್ರೀಯರು ಈಗಲೂ ಅಷ್ಟಾಗಿ ಸಕ್ರಿಯರಾಗಿಲ್ಲ.
- ಅನಕ್ಷರತೆ ಮತ್ತು ತಾಯ್ತನದ ಮರಣ ಪ್ರಮಾಣ ಮತ್ತು ಸ್ತ್ರೀ - ಪುರುಷರ ಲಿಂಗಾನುಪಾತದ ಅಸಮಾನತೆ ಇನ್ನು ಹಾಗೇ ಉಳಿದುಕೊಂಡಿದೆ.
- ಸಾರ್ವಜನಿಕ ಜೀವನದಲ್ಲಿ ಸ್ತ್ರೀಯರನ್ನು ಕಡೆಗಣಿಸಲಾಗಿದ್ದು, ರಾಜಕೀಯ ಮತ್ತು ವಿಧಾನಸಭೆಗಳಲ್ಲಿ ಪ್ರಾತಿನಿಧ್ಯ ಕಡಿಮೆಯಾಗಿದೆ.
- ತಂತ್ರಜ್ಞಾನ ಮತ್ತು ಮಾರುಕಟ್ಟೆ ವ್ಯವಸ್ಥೆಯಲ್ಲಿ ಸಾಂಪ್ರದಾಯಿಕ ಆರ್ಥಿಕ ವಲಯಗಳಲ್ಲಿ ಮಹಿಳೆಯರ ನಿಪುಣತೆಯನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಾಗುತ್ತಿಲ್ಲ.



ಮಾದರಿ ಪ್ರಶ್ನೋತ್ತರ

ಸಾಮಾನ್ಯ ಜ್ಞಾನ

ಕೆಎಸ್‌ಪಿ, ಕೆಪಿಎಸ್‌ಸಿ ಗ್ರೂಪ್ 'ಸಿ' ಸೇರಿದಂತೆ ವಿವಿಧ ಇಲಾಖೆಗಳ ಹುದ್ದೆಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿದ್ದು, ಈ ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

1) SUVAS ಎಂಬ ತಂತ್ರಾಂಶ ಯಾವುದಕ್ಕೆ ಸಂಬಂಧಿಸಿದೆ?
ಎ) ಕೇಂದ್ರ ಸಹಕಾರ ಸಚಿವಾಲಯ
ಬಿ) ಸುಪ್ರೀಂ ಕೋರ್ಟ್ ತೀರ್ಪುಗಳ ಭಾಷಾಂತರ
ಸಿ) ಕೇಂದ್ರ ಗೃಹ ಸಚಿವಾಲಯ
ಡಿ) ಕೇಂದ್ರ ಕ್ರೀಡಾ ಸಚಿವಾಲಯ
ಉತ್ತರ: ಬಿ

2) ವಿಶ್ವಸಂಸ್ಥೆ ಸಾಮಾಜಿಕ ಮತ್ತು ಆರ್ಥಿಕ ಮಂಡಳಿಯಿಂದ ಯಾವ ದೇಶವನ್ನು ವಿಶ್ವಸಂಸ್ಥೆ ಬಿಟ್ಟು ಬಿಟ್ಟಿದೆ?
ಎ) ಆಸ್ಟ್ರೇಲಿಯಾ ಬಿ) ಪಾಕಿಸ್ತಾನ
ಸಿ) ಇರಾನ್ ಡಿ) ಮ್ಯಾನ್ಮಾರ್
ಉತ್ತರ: ಸಿ

3) ಕೆಳಗಿನ ಹೇಳಿಕೆಗಳನ್ನು ಗಮನಿಸಿ
ಎ) ಆದಿ ಶಂಕರಾಚಾರ್ಯರು ಸನಾತನ ಧರ್ಮ ಪ್ರಚಾರಕ್ಕಾಗಿ ದೇಶದ ನಾಲ್ಕು ದಿಕ್ಕುಗಳಲ್ಲಿ ಪೀಠಗಳನ್ನು ಸ್ಥಾಪಿಸಿದ್ದರು. ಉತ್ತರದ ಪೀಠವು ಅಥರ್ವ ವೇದಕ್ಕೆ ಸಂಬಂಧಿಸಿದ್ದಾಗಿದೆ. ಇದು ಉತ್ತರಾಖಂಡ ರಾಜ್ಯದ ಜೋಶಿಮಠದಲ್ಲಿದೆ.
ಬಿ) ದೇವಾಲಯಗಳ ನಾಡು ಉತ್ತರಾಖಂಡದ ಜೋಶಿಮಠದಲ್ಲಿ ರಸ್ತೆಗಳು 8–10 ಅಡಿಯಷ್ಟು ಅಗಲ ಬಿರುಕು ಬಿಟ್ಟಿವೆ. ನೂರಾರು ಮನೆಯ ಗೋಡೆಗಳು ಬಿರುಕು ಕಂಡಿವೆ. ಹೋಟೆಲ್‌ಗಳ ಗೋಡೆಗಳಲ್ಲೂ ಬಿರುಕನ್ನು ಕಂಡಿವೆ. ದುರ್ಲಬವಾದ ಪರ್ವತದ ಕೆಳಗೆ ನ್ಯಾಷನಲ್ ಥರ್ಮಲ್ ಪವರ್ ಕಾರ್ಪೋರೇಷನ್ ತಪೋವನ ವಿಷ್ಣುಗಢ ಜಲವಿದ್ಯುತ್ ಯೋಜನೆಗಾಗಿ ಸುರಂಗ ನಿರ್ಮಾಣ ಮತ್ತು ಕಟ್ಟಡ ನಿರ್ಮಾಣ ಮೊದಲಾದ ಕಾಮಗಾರಿ ಮಾಡುತ್ತಿರುವ ಕಾರಣ ಜೋಶಿಮಠ ಮತ್ತು ಅದರ ಸುತ್ತಮುತ್ತ ಬಿರುಕು ಕಾಣಲು ಕಾರಣವಾಗಿದೆ ಎಂದು ಊಹಿಸಲಾಗಿದೆ.
ಸಿ) ಜೋಶಿಮಠದಲ್ಲಿ 1970ರ ದಶಕದಲ್ಲಿಯೂ ಪ್ರಾಕೃತಿಕ ಅನಾಹುತಗಳು ಕಂಡಿದ್ದವು. ಗಢವಾಲ್ ಕಮಿಷನರ್ ಮಹೇಶ್ ಚಂದರ್ ಮಿಶ್ರಾ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯು ತನ್ನ ವರದಿಯನ್ನು 1978ರಲ್ಲಿ ಸರ್ಕಾರಕ್ಕೆ ಸಲ್ಲಿಸಿತ್ತು.
ಉತ್ತರ ಸಂಕೇತಗಳು:
ಎ) ಎಲ್ಲಾ ಹೇಳಿಕೆಗಳು ಸರಿಯಾಗಿವೆ
ಬಿ) ಎ ಮತ್ತು ಬಿ ಹೇಳಿಕೆ ಸರಿಯಾಗಿವೆ.
ಸಿ) ಎ ಮತ್ತು ಸಿ ಹೇಳಿಕೆಗಳು ತಪ್ಪಾಗಿವೆ
ಡಿ) ಎ ಮತ್ತು ಸಿ ಹೇಳಿಕೆ ಮಾತ್ರ ಸರಿಯಾಗಿದೆ.
ಉತ್ತರ: ಎ

4) ಕೆಳಗಿನ ಹೇಳಿಕೆಗಳನ್ನು ಗಮನಿಸಿ
1) ದೇಶದ ಇತಿಹಾಸದಲ್ಲಿಯೇ ಇದೇ ಮೊದಲ ಬಾರಿಗೆ ಸಾವರಿನ್ ಗ್ರೀನ್ ಬಾಂಡ್ ಅನ್ನು ಆರ್‌ಬಿಐ ಬಿಡುಗಡೆ ಮಾಡಲಿದೆ. ಪರಿಸರ ಸ್ನೇಹಿ ಯೋಜನೆಗಳಿಗೆ ಅಗತ್ಯವಾದ ಹಣಕಾಸಿನ ನೆರವು ನೀಡುವ ಉದ್ದೇಶದಿಂದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಗ್ರೀನ್ ಬಾಂಡ್‌ಗಳನ್ನು ಬಿಡುಗಡೆ ಮಾಡಲಿದೆ.
2) ಗ್ರೀನ್ ಬಾಂಡ್‌ಗಳ ಬಿಡುಗಡೆಯಿಂದ ಬರುವ ಹಣವನ್ನು ಆರ್ಥಿಕತೆ ಮೇಲೆ ಇಂಗಾಲದ ಪರಿಣಾಮಗಳನ್ನು ಕಡಿಮೆ ಮಾಡುವ ಯೋಜನೆಗಳಿಗೆ ಬಳಸಿಕೊಳ್ಳಲಾಗುತ್ತದೆ.
3) ಮಾಲಿನ್ಯ ನಿಯಂತ್ರಣಕ್ಕೆ ಉತ್ತೇಜನ ನೀಡುವ ಸಾರ್ವಜನಿಕ ವಲಯದ ಯೋಜನೆಗಳಿಗೆ ನಿಧಿಯನ್ನು ಒದಗಿಸಲಿರುವ ಸಾವರಿನ್ ಗ್ರೀನ್ ಬಾಂಡ್‌ಗಳು 5 ವರ್ಷ, 10 ವರ್ಷದ ಅವಧಿಯನ್ನು ಹೊಂದಿವೆ.
ಉತ್ತರ ಸಂಕೇತಗಳು:
ಎ) 1 ಮತ್ತು 3 ಮಾತ್ರ ಸರಿಯಾಗಿವೆ
ಬಿ) 2 ಮತ್ತು 3 ಮಾತ್ರ ಸರಿಯಾಗಿವೆ
ಸಿ) 1 ರಿಂದ 3 ರವರೆಗಿನ ಎಲ್ಲವೂ ಸರಿಯಾಗಿವೆ
ಡಿ) ಯಾವ ಹೇಳಿಕೆಯೂ ಸರಿಯಾಗಿಲ್ಲ
ಉತ್ತರ: ಸಿ

5) ಫೋನ್ ಪೇ ಕಂಪನಿಯ ಪ್ರಧಾನ ಕಚೇರಿಯನ್ನು ಸಿಂಗಾಪುರದಿಂದ ಎಲ್ಲಿಗೆ ಸ್ಥಳಾಂತರಿಸಲು ವಾಲ್ ಮಾರ್ಟ್ ಕಂಪನಿಯು ನಿಶ್ಚಯಿಸಿದೆ?
ಎ) ಬೆಂಗಳೂರು ಬಿ) ನವದೆಹಲಿ
ಸಿ) ಶಾಂಘೈ ಡಿ) ಮುಂಬೈ
ಉತ್ತರ: ಎ

6) ಕೆಳಗಿನ ಹೇಳಿಕೆಗಳನ್ನು ಗಮನಿಸಿ
1) ಬೆಂಗಳೂರಿನಲ್ಲಿ ತ್ಯಾಜ್ಯದಿಂದ ಜೈವಿಕ ಅನಿಲ ಉತ್ಪಾದನಾ ಘಟಕ ಸ್ಥಾಪನೆಗೆ ಗೇಲ್- ಗ್ಯಾಸ್ ಲಿಮಿಟೆಡ್ ಕಂಪನಿ(GAIL) ಮುಂದಾಗಿದ್ದು, ಅದಕ್ಕೆ ರಾಜ್ಯ ಸರ್ಕಾರ ಅನುಮತಿ ನೀಡಿದೆ.
2) ಗೇಲ್ ಕಂಪನಿಗೆ ಪ್ರತಿದಿನ 300 ಟನ್ ಹಸಿ ತ್ಯಾಜ್ಯವನ್ನು ಪೂರೈಸುವ ಜವಾಬ್ದಾರಿಯನ್ನು ಬಿಬಿಎಂಪಿ ವಹಿಸಿಕೊಂಡಿದೆ.
3) ಬಿಬಿಎಂಪಿ ವ್ಯಾಪ್ತಿಯಲ್ಲಿ ನಗರದಲ್ಲಿ ನಿತ್ಯ 4500 ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಇದರಲ್ಲಿ ಶೇ 50ಕ್ಕಿಂತ ಕಡಿಮೆ ತ್ಯಾಜ್ಯ ಸಂಸ್ಕರಿಸಲಾಗುತ್ತದೆ.
ಉತ್ತರ ಸಂಕೇತಗಳು:
ಎ) 1 ಮತ್ತು 3 ಮಾತ್ರ ಸರಿಯಾಗಿವೆ
ಬಿ) 1 ಮತ್ತು 2 ಮಾತ್ರ ಸರಿಯಾಗಿವೆ
ಸಿ) 1 ರಿಂದ 3ರವರೆಗಿನ ಎಲ್ಲವೂ ಸರಿಯಾಗಿವೆ
ಡಿ) 3 ಮಾತ್ರ ಸರಿಯಾಗಿದೆ.
ಉತ್ತರ: ಸಿ

7) ಕೆಳಗಿನ ಹೇಳಿಕೆಗಳನ್ನು ಗಮನಿಸಿ
1) ಭಾರತದಲ್ಲಿ ಕ್ಯಾಂಪಸ್ ಸ್ಥಾಪಿಸಲು ವಿದೇಶಿ ವಿಶ್ವವಿದ್ಯಾಲಯಗಳು ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್(ಯುಜಿಸಿ) ಒಪ್ಪಿಗೆ ಪಡೆಯಬೇಕಾಗುತ್ತದೆ. ಆರಂಭಿಕ ಒಪ್ಪಿಗೆಯು ಕೇವಲ 10 ವರ್ಷಕ್ಕೆ ಮಾತ್ರ ಸೀಮಿತವಾಗಲಿದೆ.
2) ಭಾರತದಲ್ಲಿ ಕ್ಯಾಂಪಸ್ ಸ್ಥಾಪಿಸುವ ವಿದೇಶಿ ವಿಶ್ವವಿದ್ಯಾಲಯಗಳು ಪೂರ್ಣಕಾಲಿಕ ಪ್ರೋಗ್ರಾಂ ಅಥವಾ ಕೋರ್ಸ್‌ಗಳನ್ನು ಭೌತಿಕವಾಗಿ ನೀಡಬಹುದೇ ಹೊರತು ಆನ್‌ಲೈನ್ ಅಥವಾ ದೂರ ಶಿಕ್ಷಣ ವಿಧಾನದಲ್ಲಿ ಕೋರ್ಸ್‌ಗಳನ್ನು ಒದಗಿಸುವಂತೆ ಇಲ್ಲ
ಉತ್ತರ ಸಂಕೇತಗಳು
ಎ) 1 ನೇ ಹೇಳಿಕೆ ಮಾತ್ರ ಸರಿಯಾಗಿದೆ.
ಬಿ) ಹೇಳಿಕೆ 2 ಮಾತ್ರ ಸರಿಯಾಗಿದೆ
ಸಿ) 1 ಮತ್ತು 2 ಎರಡೂ ಹೇಳಿಕೆಗಳು ಸರಿಯಾಗಿವೆ.
ಡಿ) ಯಾವ ಹೇಳಿಕೆಯೂ ಸರಿಯಾಗಿಲ್ಲ.
ಉತ್ತರ:ಸಿ

8) ಕೆಳಗಿನ ಹೇಳಿಕೆಗಳನ್ನು ಗಮನಿಸಿ
1) ಗಣಿತ ಕ್ಷೇತ್ರದ ಮಹಾಪ್ರತಿಭೆ ಶ್ರೀನಿವಾಸ ರಾಮಾನುಜನ್ ಅವರ ಜನ್ಮದಿನವಾದ ಡಿಸೆಂಬರ್ 22 ಅನ್ನು ಪ್ರತಿ ವರ್ಷ ರಾಷ್ಟ್ರೀಯ ಗಣಿತ ದಿನವನ್ನಾಗಿ ಆಚರಿಸಲಾಗುತ್ತಿದೆ. ರಾಮಾನುಜನ್ ಅವರು ಡಿ.22, 1887ರಲ್ಲಿ ಜನಿಸಿದ್ದರು. 2012ರಲ್ಲಿ ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ರಾಮಾನುಜನ್ ಜನ್ಮ ದಿನವನ್ನೇ ರಾಷ್ಟ್ರೀಯ ಗಣಿತದ ದಿನವಾಗಿ ಆಚರಿಸಲು ಕರೆ ನೀಡಿದ್ದರು.
2) ಟ್ರಿನಿಟಿ ಕಾಲೇಜಿನಲ್ಲಿ ಫೆಲೊ ಆಗಿ ಆಯ್ಕೆಯಾದ ಮೊದಲ ಭಾರತೀಯ ಪ್ರತಿಭೆ ಶ್ರೀನಿವಾಸ್ ರಾಮಾನುಜನ್. ರಾಯಲ್ ಸೊಸೈಟಿಯ ಕಿರಿಯ ಫೆಲೊ ಕೂಡಾ ಆಗಿದ್ದರು.
ಉತ್ತರ ಸಂಕೇತಗಳು
ಎ) 2 ನೇ ಹೇಳಿಕೆ ಸರಿಯಾಗಿದೆ
ಬಿ) 1 ಮತ್ತು 2 ಎರಡೂ ಹೇಳಿಕೆಗಳೂ ಸರಿಯಾಗಿವೆ.
ಸಿ) ಹೇಳಿಕೆ 1 ಮಾತ್ರ ಸರಿಯಾಗಿದೆ.
ಡಿ) ಯಾವ ಹೇಳಿಕೆಯೂ ಸರಿಯಾಗಿಲ್ಲ.
ಉತ್ತರ: ಬಿ

9) ನ.8, 2016ರಲ್ಲಿ ₹500, ₹1,000 ನೋಟುಗಳನ್ನು ಅಮಾನ್ಯ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಕೆಳಗಿನ ಹೇಳಿಕೆಗಳನ್ನು ಗಮನಿಸಿ
1) ಈ ಪ್ರಕರಣಗಳಿಗೆ ಸಂಬಂಧಿಸಿದಂತೆ 50ಕ್ಕೂ ಹೆಚ್ಚು ಅರ್ಜಿಗಳ ವಿಚಾರಣೆ ನಡೆಸಲಾಗಿತ್ತು. 5 ಜನ ನ್ಯಾಯಾಧೀಶರನ್ನು ಒಳಗೊಂಡ ಸಂವಿಧಾನ ಪೀಠವು 4:1 ಬಹುಮತದ ತೀರ್ಪಿನಲ್ಲಿ ಕೇಂದ್ರ ಸರ್ಕಾರದ ನಿಲುವನ್ನು ಎತ್ತಿ ಹಿಡಿದಿದೆ. ಅಂದರೆ ಕೇಂದ್ರ ಸರ್ಕಾರವು ನೋಟು ಅಮಾನ್ಯಗೊಳಿಸಿದ್ದನ್ನು ಎತ್ತಿ ಹಿಡಿದಿವೆ.
2) 1978ರ ಕಾಯ್ದೆಯ ಪ್ರಕಾರ ಈ ಹಿಂದೆ ನೋಟು ಅಮಾನ್ಯೀಕರಣ ಮಾಡಿದಾಗ ಕೇವಲ 6 ದಿನಗಳ ಅವಧಿಯನ್ನು ನೀಡಲಾಗಿತ್ತು. ಆದರೆ ಈ ಸಲ ನೋಟು ಬದಲಾವಣೆಗೆ 62 ದಿನ ನೀಡಲಾಗಿತ್ತು.
ಉತ್ತರ ಸಂಕೇತಗಳು
ಎ) ಹೇಳಿಕೆ 1 ಮಾತ್ರ ತಪ್ಪಾಗಿದೆ
ಬಿ) ಹೇಳಿಕೆ 2 ಮಾತ್ರ ತಪ್ಪಾಗಿದೆ
ಸಿ) ಎರಡೂ ಹೇಳಿಕೆಗಳು ಮಾತ್ರ ತಪ್ಪಾಗಿವೆ
ಡಿ) ಯಾವ ಹೇಳಿಕೆಯೂ ತಪ್ಪಾಗಿಲ್ಲ
ಉತ್ತರ: ಬಿ

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

ಎಸ್ಸೆಸ್ಸೆಲ್ಸಿ- ಪರೀಕ್ಷೆ ದಿಕ್ಸೂಚಿ


ಗಣಿತ

ಮಾದರಿ ಪ್ರಶ್ನೋತ್ತರ–

11) $5x^2 = 2(2x+3)$ ವರ್ಗ ಸಮೀಕರಣವನ್ನು ಆದರ್ಶರೂಪದಲ್ಲಿ ಬರೆದಾಗ ದೊರಕುವ ಸ್ಥಿರಾಂಕ.........

ಉತ್ತರ:– $5x^2 = 2(2x+3)$
$5x^2 == 4x + 6$
$5x^2 = - 4x - 6$
ಆದ್ದರಿಂದ ಸ್ಥಿರಾಂಕ = –6

12) ಕೆಳಗಿನ ಚತುರ್ಭುಜಗಳು ಸಮರೂಪವೇ? ಇಲ್ಲವೆ ತಿಳಿಸಿ.



ಉತ್ತರ:– ಸಮರೂಪದ ಚತುರ್ಭುಜಗಳಲ್ಲ


13) 3, 8, 13, 18 ... ಈ ಸಮಾಂತರ ಶ್ರೇಢಿಯ ಎಷ್ಟನೇ ಪದ 78?

ಪರಿಹಾರ:– ನೀಡಿರುವ ಸಮಾಂತರ ಶ್ರೇಢಿ 3, 8, 13, 18......
ಇಲ್ಲಿ a=3 d=8-3=5 nth ಪದ =78

$$a_n = a + (n-1)d$$
$$78 = 3 + (n-1)(5)$$
$$5(n-1) = 78 - 3$$
$$5(n-1) = 75$$
$$n - 1 = \frac{75}{5}$$
$$n - 1 = 15$$
$$n = 15 + 1$$
$$n = 16$$

ಹೀಗಾಗಿ 78 ಸಮಾಂತರ ಶ್ರೇಢಿಯ 16ನೇ ಪದವಾಗಿದೆ


14) ಚಿತ್ರದಲ್ಲಿ $\Delta OBA \sim \Delta ODC$, $\angle BOC = 125°$ ಮತ್ತು $\angle CDO = 70°$. ಆದರೆ $\angle DOC$, $\angle DCO$ ಮತ್ತು $\angle OAB$ ಗಳನ್ನು ಕಂಡುಹಿಡಿಯಿರಿ



ಪರಿಹಾರ: ಚಿತ್ರವನ್ನು ಗಮನಿಸಿದಾಗ ಗೊತ್ತಾಗುವುದೇನೆಂದರೆ DOB ಯು ಒಂದು ಸರಳ ರೇಖೆಯಾಗಿದೆ
ಆದ್ದರಿಂದ
, $\angle DOC + \angle COB = 180°$
$\Rightarrow \angle DOC = 180° - 125°$ (Given, $\angle BOC = 125°$)
$= 55°$
ΔDOC ದಲ್ಲಿ ಎಲ್ಲಾ ಮೂರು ಕೋನಗಳ ಮೊತ್ತವು 180°ಆಗಿದೆ
ಆದ್ದರಿಂದ
, $\angle DCO + \angle CDO + \angle DOC = 180°$
$\Rightarrow \angle DCO + 70° + 55° = 180°$ (ದತ್ತ, $\angle CDO = 70°$)
$\Rightarrow \angle DCO = 55°$
$\Delta ODC \sim \Delta OBA$,
ಆದ್ದರಿಂದ , $\Delta ODC \sim \Delta OBA$.
$\angle OAB = \angle OCD$ ದತ್ತ
$\Rightarrow \angle OAB = 55°$
$\angle OAB = \angle OCD$
$\Rightarrow \angle OAB = 55°$

15) ಒಂದು ವಜ್ರಾಕೃತಿಯ ಎಲ್ಲಾ ಬಾಹುಗಳ ವರ್ಗಗಳ ಮೊತ್ತವು ಅದರ ಕರ್ಣಗಳ ವರ್ಗಗಳ ಮೊತ್ತಕ್ಕೆ ಸಮ ಎಂದು ಸಾಧಿಸಿ

ಪರಿಹಾರ:– ABCD ಒಂದು ವಜ್ರಾಕೃತಿಯಾಗಿದೆ. AC , BD ಇದರ ಕರ್ಣಗಳು ಆಗಿವೆ. ಈ ಕರ್ಣಗಳು Oನಲ್ಲಿ ಸಂಧಿಸಿವೆ



$AB^2 + BC^2 + CD^2 + AD^2 = AC^2 + BD^2$ ಎಂದು ಸಾಧಿಸಬೇಕಾಗಿದೆ
ವಜ್ರಾಕೃತಿಯ ಕರ್ಣಗಳು ಸಂಧಿಸಿದಾಗ ಪ್ರತಿಯೊಂದು ಕಡೆಗೂ ಲಂಬ ಕೋನವನ್ನು ರಚಿಸುತ್ತವೆ. ಆದ್ದರಿಂದ
AO = CO ಮತ್ತು BO = DO
ΔAOB ದಲ್ಲಿ
$\angle AOB = 90°$
$AB^2 = AO^2 + BO^2$ .... (i) [ಪೈಥಾಗೋರಸ್ ಪ್ರಮೇಯದಂತೆ]
ಹೀಗೆಯೇ
$AD^2 = AO^2 + DO^2$ .... (ii)
$DC^2 = DO^2 + CO^2$ .... (iii)
$BC^2 = CO^2 + BO^2$ .... (iv)
ಸಮೀಕರಣ (i) + (ii) + (iii) + (iv), ಕೂಡುವುದರಿಂದ
$AB^2 + AD^2 + DC^2 + BC^2 = 2(AO^2 + BO^2 + DO^2 + CO^2)$
$= 4AO^2 + 4BO^2$ [Since, AO = CO and BO =DO]
$= (2AO)^2 + (2BO)^2 = AC^2 + BD^2$
$AB^2 + AD^2 + DC^2 + BC^2 = AC^2 + BD^2$ ಸಾಧಿಸಿದೆ

16) ಅಪವರ್ತನ ವಿಧಾನದಿಂದ ವರ್ಗಸಮೀಕರಣ $2x^2 - x + 1/8 = 0$ ಮೂಲಗಳನ್ನು ಕಂಡುಹಿಡಿಯಿರಿ.

ಪರಿಹಾರ: $2x^2 - x + 1/8 = 0$

$$2x^2 - x + \frac{1}{8} = 0$$
$$2x^2 - \frac{1}{2}x - \frac{1}{2}x + \frac{1}{8} = 0$$
$$x(2x - \frac{1}{2}) - \frac{1}{4}(2x - \frac{1}{2}) = 0$$
$$(2x - \frac{1}{2})(x - \frac{1}{4}) = 0$$
$$2x - \frac{1}{2} = 0 \text{ or } x - \frac{1}{4} = 0$$
$$x = 1/4 \text{ or } x = \frac{1}{4}$$
$$x = \frac{1}{4}, \frac{1}{4}$$

$2x^2 - x + 1/8 = 0$ ವರ್ಗ ಸಮೀಕರಣದ ಮೂಲ $\frac{1}{4}$ ಮತ್ತು $\frac{1}{4}$

ಉದ್ಯೋಗ ವಾರ್ತೆ

ಎಲ್‌ಐಸಿಯಲ್ಲಿ ಎಒಒ ಹುದ್ದೆಗಳು

ಭಾರತೀಯ ಜೀವನ ಬೀಮಾ ನಿಗಮ
LIFE INSURANCE CORPORATION OF INDIA

ಮಂಜುನಾಥ್ ಭದ್ರಶೆಟ್ಟಿ

ಭಾರತೀಯ ಜೀವ ವಿಮಾ ನಿಗಮ ಸಂಸ್ಥೆಯಲ್ಲಿ (ಎಲ್‌ಐಸಿ) ಅಧಿಕಾರಿಯಾಗಿ ಸೇವೆ ಸಲ್ಲಿಸುವ ಅವಕಾಶ ಉದ್ಯೋಗಾಂಕ್ಷಿಗಳಿಗೆ ಇದೀಗ ಒದಗಿ ಬಂದಿದೆ

ಎಲ್‌ಐಸಿಯಲ್ಲಿ ಸಹಾಯಕ ಆಡಳಿತಾಧಿಕಾರಿ ಹುದ್ದೆಗಳ ಭರ್ತಿಗೆ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ.

ಬ್ಯಾಕ್‌ಲಾಗ್ ಹುದ್ದೆಗಳು ಸೇರಿದಂತೆ ದೇಶದಾದ್ಯಂತ ಒಟ್ಟು 300 'ಎಲ್‌ಐಸಿ ಸಹಾಯಕ ಆಡಳಿತಾಧಿಕಾರಿ (Genarlist) 31ನೇ ಬ್ಯಾಚ್' ಹುದ್ದೆಗಳಿಗೆ ಅರ್ಜಿ ಕರೆಯಲಾಗಿದೆ. ಜನವರಿ 15 ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪ್ರಾರಂಭವಾಗಿದ್ದು ಜನವರಿ 31, ಅರ್ಜಿ ಸಲ್ಲಿಕೆಗೆ ಕೊನೆ ದಿನವಾಗಿದೆ.

ಶೈಕ್ಷಣಿಕ ಅರ್ಹತೆ: ಅಂಗೀಕೃತ ಯಾವುದೇ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ ಪಡೆದವರು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದು. ಎಸ್.ಸಿ, ಎಸ್.ಟಿ ಅಭ್ಯರ್ಥಿಗಳಿಗೆ ₹85 ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ₹700 ಅರ್ಜಿ ಶುಲ್ಕವಿದೆ.

ವಯೋಮಿತಿ: ಕನಿಷ್ಠ 21 ವರ್ಷ, ಗರಿಷ್ಠ 30 ವರ್ಷಗಳು. ನಿಯಮಾನುಸಾರ ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ ಸಡಿಲಿಕೆ ಇದೆ.

ನೇಮಕಾತಿ ಪ್ರಕ್ರಿಯೆ ಹೇಗಿದೆ?

ಮೂರು ಹಂತಗಳಲ್ಲಿ ಈ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಯಲಿದೆ. ಮೊದಲು ಕಂಪ್ಯೂಟರ್ ಆಧರಿತ ಪರೀಕ್ಷೆ ಇರುತ್ತದೆ. ಇದರಲ್ಲಿ ಎರಡು ಭಾಗಗಳಿರುತ್ತವೆ ಮೊದಲ ಭಾಗ ಪೂರ್ವಭಾವಿ ಪರೀಕ್ಷೆ ಎರಡನೇ ಭಾಗ ಮುಖ್ಯ ಪರೀಕ್ಷೆ.

ಪೂರ್ವಭಾವಿ ಮುಖ್ಯಪರೀಕ್ಷೆ ಪಾಸಾದ ಅಭ್ಯರ್ಥಿಗಳನ್ನು 1:5 ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುತ್ತದೆ. ಸಂದರ್ಶನ ಪಾಸಾದ ಅಭ್ಯರ್ಥಿಗಳು ವೈದ್ಯಕೀಯ ಪರೀಕ್ಷೆಯನ್ನೂ ಎದುರಿಸಬೇಕು.

ಆನ್‌ಲೈನ್ ಅರ್ಜಿ ಸಲ್ಲಿಕೆ ಮತ್ತು ಹೆಚ್ಚಿನ ಮಾಹಿತಿಗಾಗಿ www.licindia.in ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

(ಮುಂದಿನ ವಾರ: ಪರೀಕ್ಷೆ ಸಿದ್ಧತೆ ಹೇಗೆ?)

ಪಿಯುಸಿ ಪರೀಕ್ಷೆ ದಿಕ್ಸೂಚಿ

ರಸಾಯನ ವಿಜ್ಞಾನ

64) ಯಾವುದನ್ನು ಅಮೈಡ್ ಹಾಗೂ ಅಸೈಲ್ ಹ್ಯಾಲೈಡುಗಳೆಂದು ಕರೆಯುವರು.

ಉತ್ತರ:- ಒಂದೆಡೆ ಕಾರ್ಬನ್ ಅಥವಾ ಹೈಡ್ರೋಜನ್‌ಗೆ ಬಂಧಿಸಿದ್ದು, ಇನ್ನೊಂದೆಡೆ $-NH_2$ ಗುಂಪಿನ ನೈಟ್ರೋಜನ್‌ಗೆ ಅಥವಾ ಹ್ಯಾಲೋಜನ್‌ಗೆ ಬಂಧಿಸಿದ್ದಲ್ಲಿ ಅವುಗಳನ್ನು ಅನುಕ್ರಮವಾಗಿ ಅಮೈಡ್ ಹಾಗೂ ಅಸೈಲ್ ಹ್ಯಾಲೈಡುಗಳೆಂದು ಕರೆಯುವರು.

65) ಕಾರ್ಬೋನಿಲ್ ಗುಂಪಿನ ನಾಮಕರಣ ಕುರಿತು ಬರೆಯಿರಿ

ಉತ್ತರ:- ಆಲ್ಡಿಹೈಡ್ ಮತ್ತು ಕೀಟೋನ್‌ಗಳು ಸರಳ ಮತ್ತು ಅತ್ಯಂತ ಪ್ರಮುಖ ಕಾರ್ಬೋನಿಲ್ ಸಂಯುಕ್ತಗಳಾಗಿವೆ. ಅವುಗಳಿಗೆ ಎರಡು ರೀತಿಯ ನಾಮಕರಣ ಪದ್ಧತಿಗಳಿವೆ.

(a) ಸಾಮಾನ್ಯ ಹೆಸರುಗಳು: ಆಲ್ಡಿಹೈಡ್ ಮತ್ತು ಕೀಟೋನ್‌ಗಳನ್ನು IUPAC ಹೆಸರುಗಳ ಬದಲಿಗೆ ಆಗಾಗ್ಗೆ ಅವುಗಳ ಸಾಮಾನ್ಯ ಹೆಸರುಗಳಿಂದ ಕರೆಯಲಾಗುತ್ತದೆ. ಬಹುತೇಕ ಆಲ್ಡಿಹೈಡ್‌ಗಳ ಸಾಮಾನ್ಯ ಹೆಸರುಗಳನ್ನು ಅವುಗಳ ಅನುರೂಪ ಕಾರ್ಬಾಕ್ಸಿಲಿಕ್ ಆಮ್ಲಗಳ ಸಾಮಾನ್ಯ ಹೆಸರುಗಳಲ್ಲಿನ ಅಂತ್ಯಭಾಗ - ಇಕ್‌ಆಮ್ಲವನ್ನು ಆಲ್ಡಿಹೈಡ್ ಪದದಿಂದ ಬದಲಾಯಿಸುವ ಮೂಲಕ ಪಡೆಯಲಾಗಿದೆ. ಹಾಗೆಯೆ, ಅಮ್ಲ ಅಥವಾ ಆಲ್ಡಿಹೈಡ್‌ಗಳ ಹೆಸರುಗಳು ಅವುಗಳ ಮೂಲ ಆಕರದ ಲ್ಯಾಟಿನ್ ಅಥವಾ ಗ್ರೀಕ್ ಪದಗಳನ್ನು ಪ್ರತಿಫಲಿಸುತ್ತವೆ. ಕಾರ್ಬನ್ ಸರಪಳಿಯಲ್ಲಿ ಆದೇಶಿತದ ಸ್ಥಾನವನ್ನು ಗ್ರೀಕ್ ಅಕ್ಷರಗಳಾದ α, β, γ, δ ಮುಂತಾದುವುಗಳಿಂದ ಸೂಚಿಸಲಾಗುವುದು. ಕಾರ್ಬೋನಿಲ್ ಗುಂಪಿಗೆ ಬಂಧಿತವಾಗಿರುವ ಎರಡು ಆಲ್ಕೈಲ್ ಅಥವಾ ಅರೈಲ್ ಗುಂಪುಗಳನ್ನು ಹೆಸರಿಸುವ ಮೂಲಕ ಕೀಟೋನ್‌ಗಳ ಸಾಮಾನ್ಯ ಹೆಸರುಗಳನ್ನು ಪಡೆಯಲಾಗಿದೆ. ಕಾರ್ಬೋನಿಲ್ ಗುಂಪಿನ ನಂತರದ ಕಾರ್ಬನ್ ಪರಮಾಣುಗಳನ್ನು α α', ಎಂಬುದಾಗಿ ಸೂಚಿಸುವುದರೊಂದಿಗೆ ಪ್ರಾರಂಭಿಸಿ, ಆದೇಶಿತ ಸ್ಥಾನಗಳನ್ನು α α', β β' ಮುಂತಾದ ಗ್ರೀಕ್ ಪದಗಳಿಂದ ಸೂಚಿಸಲಾಗುತ್ತದೆ. ಕೆಲವು ಕೀಟೋನ್‌ಗಳು ಐತಿಹಾಸಿಕ ಸಾಮಾನ್ಯ ಹೆಸರುಗಳನ್ನು ಹೊಂದಿದ್ದು ಅತ್ಯಂತ ಸರಳವಾಗಿ ಡೈಮೀಥೈಲ್ ಕೀಟೋನನ್ನು ಅಸಿಟೋನ್ ಎಂದು ಕರೆಯುತ್ತಾರೆ. ಆಲ್ಕೈಲ್ ಫೀನೈಲ್ ಕೀಟೋನ್‌ಗಳನ್ನು ಸಾಮಾನ್ಯವಾಗಿ ಫೀನೋನ್‌ಗೆ ಅಸೈಲ್ ಗುಂಪಿನ ಹೆಸರನ್ನು ಪೂರ್ವಪ್ರತ್ಯಯವಾಗಿ ಸೇರಿಸುವ ಮೂಲಕ ಹೆಸರಿಸಲಾಗಿದೆ. ಉದಾಹರಣೆಗೆ ಅಸಿಟೊಫೀನೋನ್ ಪ್ರೊಪಿಯೊಫೀನೋನ್ ಬೆಂಜೊಫೀನೋನ್

(b) IUPAC ಹೆಸರುಗಳು: ತೆರೆದ ಸರಪಳಿಯ ಆಲಿಫ್ಯಾಟಿಕ್ ಆಲ್ಡಿಹೈಡ್‌ಗಳ ಮತ್ತು ಕೀಟೋನ್‌ಗಳ IUPAC ಹೆಸರುಗಳನ್ನು, ಅನುಗುಣವಾಗಿ ಅವುಗಳ ಆಲ್ಕೇನ್‌ಗಳ ಆಂಗ್ಲ ಹೆಸರಿನ ಕೊನೆಯಕ್ಷರ –e ಯನ್ನು ಅನುಕ್ರಮವಾಗಿ - ಆಲ್ ಮತ್ತು -ಓನ್ ಗಳಿಂದ ಬದಲಿಸುವುದರೊಂದಿಗೆ ಪಡೆಯಲಾಗಿವೆ. ಆಲ್ಡಿಹೈಡ್‌ಗಳಲಿ ಅತೀ ಉದ್ದನೆಯ ಕಾರ್ಬನ್ ಸರಪಳಿಗೆ ಸಂಖ್ಯೆ ನೀಡುವಾಗ ಆಲ್ಡಿಹೈಡ್ ಗುಂಪಿನ ಕಾರ್ಬನ್‌ನಿಂದ ಪ್ರಾರಂಭಿಸಬೇಕು. ಹಾಗೆಯೇ ಕೀಟೊನ್‌ಗಳ ಸಂದರ್ಭದಲ್ಲಿ ಕಾರ್ಬೋನಿಲ್ ಗುಂಪು ಹತ್ತಿರವಿರುವ ತುದಿಯಿಂದ ಸಂಖ್ಯೆ ನೀಡುವಿಕೆಯನ್ನು ಪ್ರಾರಂಭಿಸಬೇಕು. ಆದೇಶಿತಗಳನ್ನು ಕಾರ್ಬನ್ ಸರಪಳಿಯಲ್ಲಿನ ಅವುಗಳ ಸ್ಥಾನವನ್ನು ಸೂಚಿಸುವ ಸಂಖ್ಯೆಗಳೊಂದಿಗೆ ಆಂಗ್ಲ ವರ್ಣಮಾಲೆಯ ಕ್ರಮನುಸಾರ ಪೂರ್ವಪ್ರತ್ಯಯವಾಗಿಸಬೇಕು ರಿಂಗ್ ಕೀಟೋನ್‌ಗಳಿಗಳಲ್ಲಿ ಇದನ್ನೇ ಅನ್ವಯಿಸಿ, ಕಾರ್ಬೋನಿಲ್ ಕಾರ್ಬನ್‌ಗೆ ಸಂಖ್ಯೆ ಒಂದನ್ನು ನೀಡಲಾಗುತ್ತದೆ. ಆಲ್ಡಿಹೈಡ್ ಗುಂಪು ರಿಂಗಿಗೆ ಅಂಟಿಕೊಂಡಿದ್ದಾಗ, ರಿಂಗ್ ಆಲ್ಕೇನ್‌ನ ಪೂರ್ಣ ಹೆಸರಿನ ಕೊನೆಯಲ್ಲಿ ಕಾರ್ಬಾಲ್ಡಿಹೈಡ್‌ಎಂಬ ಅಂತ್ಯಪ್ರತ್ಯಯವನ್ನು ಸೇರಿಸಬೇಕು.

ಉಂಗುರದಲ್ಲಿನ ಕಾರ್ಬನ್ ಪರಮಾಣುಗಳಿಗೆ ಸಂಖ್ಯೆ ನೀಡುವಿಕೆಯು ಆಲ್ಡಿಹೈಡ್ ಗುಂಪು ಅಂಟಿಕೊಂಡಿರುವ ಕಾರ್ಬನ್ ಪರಮಾಣುವಿನಿಂದ ಪ್ರಾರಂಭವಾಗುತ್ತದೆ. ಬೆಂಜಿನ್ ಉಂಗುರದ ಮೇಲೆ ಆಲ್ಡಿಹೈಡ್ ಗುಂಪನ್ನು ಹೊಂದಿರುವ ಅತ್ಯಂತ ಸರಳ ಆರೊಮ್ಯಾಟಿಕ್ ಆಲ್ಡಿಹೈಡ್‌ನ ಹೆಸರು ಬೆಂಜಿನ್‌ಕಾರ್ಬಾಲ್ಡಿಹೈಡ್ ಆಗಿದೆ. ಆದಾಗ್ಯೂ, ಸಾಮಾನ್ಯ ಹೆಸರಾದ ಬೆಂeಲ್ಡಿಹೈಡ್ ಸಹ IUPACಯಿಂದ ಅಂಗೀಕರಿಸಲ್ಪಟ್ಟಿದೆ. ಆದುದರಿಂದ ಇತರೆ ಆರೊಮ್ಯಾಟಿಕ್ ಆಲ್ಡಿಹೈಡ್‌ಗಳನ್ನು ಆದೇಶಿತ ಬೆಂಲ್ಡಿಹೈಡ್‌ಗಳಾಗಿ ಹೆಸರಿಸಲಾಗುವುದು.

₹ 25 ಸಾವಿರ ಕೋಟಿ ಬಿಲ್ ಬಾಕಿ: ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಹೇಳಿಕೆ

ಬಾಕಿ ಪಾವತಿಗೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುತ್ತಿಗೆದಾರರ ಬಾಕಿ ಮೊತ್ತ ಬಿಡುಗಡೆ ಹಾಗೂ ಪ್ಯಾಕೇಜ್ ಪದ್ಧತಿ ರದ್ದು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ರಾಜ್ಯ ಗುತ್ತಿಗೆದಾರ ಸಂಘದ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಗುತ್ತಿಗೆದಾರರು, ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

‘ಜಿಎಸ್‌ಟಿ ಗೊಂದಲ ಪರಿಹರಿಸಲು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದರೂ ಬೇಡಿಕೆ ಈಡೇರಿಸಿಲ್ಲ. ಕೆಲವು ಕಾಮಗಾರಿಗಳ ಮೇಲೆ ಪ್ರಸ್ತುತ ಚಾಲ್ತಿಯಲ್ಲಿದ್ದ ಶೇಕಡ 12 ಜಿಎಸ್‌ಟಿ ದರವನ್ನು ಶೇ 18ಕ್ಕೆ ಹೆಚ್ಚಿಸಲಾಗಿದೆ. ಹಳೆಯ ಕಾಮಗಾರಿಗೆ ಶೇ 12ರಷ್ಟು ಮಾತ್ರ ಜಿಎಸ್‌ಟಿ ಕಡಿತ ಮಾಡಿಕೊಳ್ಳಬೇಕು’ ಎಂದು ಒತ್ತಾಯಿಸಿದರು.

‘ಗುತ್ತಿಗೆದಾರರಿಗೆ ವಿವಿಧ ಇಲಾಖೆಗಳಿಂದ ಸುಮಾರು ₹ 25 ಸಾವಿರ ಕೋಟಿಗೂ ಹೆಚ್ಚು ಮೊತ್ತ ಬಿಡುಗಡೆಯಾಗಬೇಕಾಗಿದ್ದು, ತಕ್ಷಣವೇ ಬಿಡುಗಡೆ ಮಾಡಬೇಕು’ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಆಗ್ರಹಿಸಿದರು.

‘ಲೋಕೋಪಯೋಗಿ, ಜಲ ಸಂಪನ್ಮೂಲ ಇಲಾಖೆ ಮತ್ತು ಬಿಬಿಎಂಪಿಯಲ್ಲಿ ಅತಿ ಹೆಚ್ಚು ಕಾಮಗಾರಿಗಳು ನಡೆದಿವೆ. ಲೋಕೋಪಯೋಗಿ ಇಲಾಖೆಯಲ್ಲಿ ₹ 4 ಸಾವಿರ ಕೋಟಿ, ಜಲ ಸಂಪನ್ಮೂಲ ಮತ್ತು ಸಣ್ಣ ನೀರಾವರಿ ಇಲಾಖೆಯಲ್ಲಿ ₹ 8 ಸಾವಿರ ಕೋಟಿ ಮತ್ತು ಬಿಬಿಎಂಪಿ ₹ 3 ಸಾವಿರ ಕೋಟಿ ಬಾಕಿ ಉಳಿಸಿಕೊಂಡಿವೆ. ಮೂರು ವರ್ಷದಿಂದ ಯಾವುದೇ ಇಲಾಖೆಯಿಂದಲೂ ಹಣ ಬಿಡುಗಡೆಯಾಗಿಲ್ಲ. ಗುತ್ತಿಗೆದಾರರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ’ ಎಂದು ಅವರು ದೂರಿದರು.

‘ಪ್ಯಾಕೇಜ್ ಪದ್ಧತಿ ಕೈಬಿಡಿ’: ‘ಪ್ಯಾಕೇಜ್ ಪದ್ಧತಿಯಿಂದ ಸ್ಥಳೀಯ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಸಾಧ್ಯ ಆಗದಂತಹ ಸ್ಥಿತಿ ನಿರ್ಮಾಣವಾಗಿದೆ. ಈ ಪದ್ಧತಿಯಿಂದ ನೆರೆ ರಾಜ್ಯದ ಗುತ್ತಿಗೆದಾರರಿಗೆ ಹೆಚ್ಚು ಪ್ರಯೋಜನ ಆಗುತ್ತಿದೆ. ಪ್ರತಿ ಕಾಮಗಾರಿಗೂ ಪ್ರತ್ಯೇಕ ಟೆಂಡರ್ ಕರೆದರೆ ರಾಜ್ಯದ ಗುತ್ತಿಗೆದಾರರಿಗೆ ನೆರವಾಗಲಿದೆ’ ಎಂದು ಹೇಳಿದರು.

‘ಸಂಘವು ಯಾವುದೇ ಪಕ್ಷ ಅಥವಾ ಸರ್ಕಾರ ವಿರುದ್ಧ ಆಪಾದನೆ ಮಾಡುತ್ತಿಲ್ಲ. ವ್ಯವಸ್ಥೆ ಸರಿಯಾಗಬೇಕೆಂದು ಪ್ರಶ್ನಿಸುತ್ತಿದ್ದೇವೆ. ಪ್ರತಿ ಬಾರಿ ಸರ್ಕಾರದ ನೇತೃತ್ವ ಬದಲಾದಾಗಲೂ ಭಷ್ಟಾಚಾರ ಹೆಚ್ಚುತ್ತಿದೆ ಎನ್ನುವುದು ಆತಂಕಕ್ಕೆ ಕಾರಣವಾಗಿದೆ’ ಎಂದು ಅವರು ಹೇಳಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಎಂ. ರವೀಂದ್ರ, ಕಾರ್ಯಾಧ್ಯಕ್ಷ ಮಂಜುನಾಥ್ ಸೇರಿದಂತೆ ಹಲವರು ಇದ್ದರು.



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯ ಗುತ್ತಿಗೆದಾರರ ಸಂಘದ ನೇತೃತ್ವದಲ್ಲಿ ಬುಧವಾರ ಗುತ್ತಿಗೆದಾರರು ಬಾಕಿ ಹಣ ಬಿಡುಗಡೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು

– ಪ್ರಜಾವಾಣಿ ಚಿತ್ರ

ದಾಖಲೆ ಸಲ್ಲಿಕೆ

ನ್ಯಾಯಾಲಯಕ್ಕೆ ದಾಖಲೆ ಸಲ್ಲಿಕೆ’ ‘ಶೇಕಡ 40ರಷ್ಟು ಕಮಿಷನ್ ಆರೋಪಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ವಕೀಲರ ಮೂಲಕ ದಾಖಲೆ ಸಲ್ಲಿಸಿದ್ದೇವೆ’ ಎಂದು ಅಧ್ಯಕ್ಷ ಡಿ.ಕೆಂಪಣ್ಣ ಹೇಳಿದರು.

‘ನಮ್ಮ ಬಳಿ ಎಲ್ಲ ದಾಖಲೆಗಳಿವೆ. ಕಾನೂನು ಹೋರಾಟ ಮುಂದುವರಿಯಲಿದೆ. ಕಮಿಷನ್ ವಿಚಾರಕ್ಕೆ ಸಂಬಂಧಿಸಿದಂತೆ ಸರ್ಕಾರ ಸಮಿತಿ ರಚಿಸಲಿ. ಇಲ್ಲವೇ ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಯಲಿ’ ಎಂದು ಹೇಳಿದರು.

‘ಶೇ 10ರಷ್ಟಿದ್ದ ಕಮಿಷನ್ ಈಗ ಶೇ 40ಕ್ಕೆ ಏರಿಕೆಯಾಗಿದೆ. ಕಾಮಗಾರಿಯ ಒಟ್ಟು ಮೊತ್ತದ ಶೇ 30ರಿಂದ 40ರಷ್ಟು ಹಣ ವಿವಿಧ ರೂಪಗಳಲ್ಲಿ ಸೋರಿಕೆಯಾಗುತ್ತಿದೆ. ಗುತ್ತಿಗೆ ಪಡೆಯುವುದರಿಂದ ಬಿಲ್ ಮಂಜೂರಾತಿ ತನಕ ಹಣ ಸೋರಿಕೆ ಸಾಮಾನ್ಯವಾಗಿದೆ. ಉಳಿದ ಹಣದಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕಿದೆ. ಈ ರೀತಿಯ ವ್ಯವಸ್ಥೆಯಿಂದ ಗುಣಮಟ್ಟದ ಕಾಮಗಾರಿ ನಡೆಸುವುದಾದರೂ ಹೇಗೆ’ ಎಂದು ಕೆಂಪಣ್ಣ ಅವರು ಪ್ರಶ್ನಿಸಿದರು.

‘ಪಿಎಫ್‌ಐ ಮುಖಂಡರ ಸುಳಿವು ನೀಡಿದರೆ ₹ 5 ಲಕ್ಷ ಬಹುಮಾನ’

ಪ್ರಜಾವಾಣಿ ವಾರ್ತೆ

ಮಂಗಳೂರು: ಬಿಜೆಪಿ ಯುವಮೋರ್ಚಾದ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಪ್ರವೀಣ್ ನೆಟ್ಟಾರು ಹತ್ಯೆಯಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಮತ್ತಿಬ್ಬರು ಆರೋಪಿಗಳ ಸುಳಿವು ನೀಡಿದವರಿಗೆ ತಲಾ ₹ 5 ಲಕ್ಷ ಬಹುಮಾನ ನೀಡುವುದಾಗಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಘೋಷಿಸಿದೆ.


‘ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಕೊಡಾಜೆ ಮಹಮ್ಮದ್ ಶರೀಫ್ (53) ಮತ್ತು ನೆಕ್ಕಿಲಾಡಿಯ ಮಸೂದ್ ಕೆ.ಎ. ಇವರು 2022ರ ಜುಲೈ 26ರಂದು ನಡೆದ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದ ಆರೋಪಿಗಳು. ಇವರಿಬ್ಬರ ಸುಳಿವು ನೀಡಿದರೆ ಬಹುಮಾನ ನೀಡುತ್ತೇವೆ. ಮಾಹಿತಿ ನೀಡಿದವರ ವಿವರ ಬಹಿರಂಗಪಡಿಸುವುದಿಲ್ಲ’ ಎಂದು ಎನ್‌ಐಎ ಹೇಳಿದೆ.

ಈ ಹತ್ಯೆ ಪ್ರಕರಣ ಸಂಬಂಧ ಎನ್‌ಐಎ ನಾಲ್ವರು ಆರೋಪಿಗಳ ಬಗ್ಗೆ ಸುಳಿವು ನೀಡಿದವರಿಗೆ ಎರಡೂವರೆ ತಿಂಗಳ ಹಿಂದೆಯೇ ಬಹುಮಾನ ಘೋಷಣೆ ಮಾಡಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕು ಬೆಳ್ಳಾರೆ ಗ್ರಾಮದ ಮೊಹಮ್ಮದ್ ಮುಸ್ತಾಫ ಎಸ್. ಅಲಿಯಾಸ್ ಮುಸ್ತಾಫ ಪೈಚಾರು ಹಾಗೂ ಕೊಡಗು ಜಿಲ್ಲೆಯ ಮಡಿಕೇರಿಯ ತುಫೈಲ್ ಎಂ.ಎಚ್ ಅವರ ಪತ್ತೆಗೆ ನೆರವಾದವರಿಗೆ ತಲಾ ₹ 5 ಲಕ್ಷ ಹಾಗೂ ಸುಳ್ಯದ ಕಲ್ಲುಮುಟ್ಲು ಮನೆ ನಿವಾಸಿ ಉಮ್ಮರ್ ಫಾರೂಕ್ ಎಂ.ಆರ್. ಅಲಿಯಾಸ್ ಉಮ್ಮರ್ ಹಾಗೂ ಬೆಳ್ಳಾರೆ ಗ್ರಾಮದ ಅಬೂಬಕ್ಕರ್ ಸಿದ್ಧಿಕ್ ಅಲಿಯಾಸ್ ಪೇಂಟರ್ ಸಿದ್ಧಿಕ್ ಪತ್ತೆಗೆ ನೆರವಾದವರಿಗೆ ತಲಾ ₹ 2 ಲಕ್ಷ ಬಹುಮಾನ ನೀಡುವುದಾಗಿ ತಿಳಿಸಿತ್ತು.

ಮಾಹಿತಿ ನೀಡಬೇಕಾದ ವಿಳಾಸ: ಪೊಲೀಸ್ ವರಿಷ್ಠಾಧಿಕಾರಿ, ರಾಷ್ಟ್ರೀಯ ತನಿಖಾ ದಳ, 8ನೇ ಮಹಡಿ, ಸರ್. ಎಂ.ವಿಶ್ವೇಶ್ವರಯ್ಯ ಕೇಂದ್ರೀಯ ಸದನ, ದೊಮ್ಮಲೂರು, ಬೆಂಗಳೂರು -560071

ಸಂಪರ್ಕ: 080 29510900 ಅಥವಾ 8904241100, ಇ-ಮೇಲ್:info.blr.nia@gov.in

ಹುಬ್ಬಳ್ಳಿಯ ಆದಿತ್ಯ ಶಿವಳ್ಳಿಗೆ ಶೌರ್ಯ ಪ್ರಶಸ್ತಿ



ಹುಬ್ಬಳ್ಳಿ: ಜಲಪಾತದಲ್ಲಿ ಮುಳುಗುತ್ತಿದ್ದ ಮೂವರನ್ನು ರಕ್ಷಿಸಿ ಸಾಹಸ ಮೆರೆದಿದ್ದ ಹುಬ್ಬಳ್ಳಿಯ ನವನಗರದ ಕಾನೂನು ವಿಶ್ವವಿದ್ಯಾಲಯದ ವಿದ್ಯಾರ್ಥಿ ಆದಿತ್ಯ ಎಂ. ಶಿವಳ್ಳಿ ಅವರು, ಭಾರತೀಯ ಮಕ್ಕಳ ಕಲ್ಯಾಣ ಪರಿಷತ್ತು (ಐಸಿಸಿಡಬ್ಲ್ಯು) ಗಣರಾಜ್ಯೋತ್ಸವದ ಅಂಗವಾಗಿ ನೀಡುವ 2022-23ನೇ ಸಾಲಿನ ರಾಷ್ಟ್ರೀಯ ಶೌರ್ಯ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ರಾಜ್ಯಮಟ್ಟದ ಈಜುಪಟು ಕೂಡ ಆಗಿರುವ ನಗರದ ಕುಸುಗಲ್ ರಸ್ತೆಯ ಸನ್ ಸಿಟಿ ಹೆರಿಟೇಜ್ ನಿವಾಸಿ ಆದಿತ್ಯ, ಸದ್ಯ ಬಿಬಿಎ-ಎಲ್‌ಎಲ್‌ಬಿ 5ನೇ ಸೆಮಿಸ್ಟರ್ ಓದುತ್ತಿದ್ದಾರೆ. ಆದಿತ್ಯ ಅವರು, ಸಂಕ್ರಾಂತಿ ಅಂಗವಾಗಿ 2020ರ ಜನವರಿ 14ರಂದು ಕುಟುಂಬದೊಂದಿಗೆ ಶಿರಸಿ ಬಳಿಯ ಮೋರೆಗಾರ ಜಲಪಾತಕ್ಕೆ ಪ್ರವಾಸ ಹೋಗಿದ್ದಾಗ, ಮೂವರನ್ನು ರಕ್ಷಿಸಿದ್ದರು.

ಆದಿತ್ಯ ಅವರು ಜ. 26ರಂದು ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಲಿದ್ದಾರೆ.

ಶಿಕ್ಷಕರ ಸ್ಥಾನಕ್ಕೆ ಅಂಗನವಾಡಿ ಕಾರ್ಯಕರ್ತೆಯರ ಪಟ್ಟು

ಅನಿರ್ದಿಷ್ಟಾವಧಿ ಧರಣಿ: ಆರೋಗ್ಯ ವಿಮೆ ಜಾರಿಗೊಳಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೇವೆ ಕಾಯಂ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ, ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದ ನೇತೃತ್ವದಲ್ಲಿ ಬುಧವಾರದಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದರು.

ಕಾರ್ಯಕರ್ತೆಯರಿಗೆ ಶಿಕ್ಷಕರ ಸ್ಥಾನಮಾನ ನೀಡಬೇಕು. ಪ್ರತಿ ತಿಂಗಳು ₹ 31 ಸಾವಿರ ವೇತನ ನೀಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘ರಾಜ್ಯದಲ್ಲಿ ಮಿನಿ ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಬೇಕು. ಆರೋಗ್ಯ ವಿಮೆ ಜಾರಿಗೆ ತರಬೇಕು. ತೀವ್ರತರಹದ ಕಾಯಿಲೆಗಳಿಂದ ಬಳಲುತ್ತಿರುವ ಕಾರ್ಯಕರ್ತೆಯರಿಗೆ ಸಂಬಳ ಸಹಿತ ರಜೆ ಮಂಜೂರು ಮಾಡಬೇಕು’ ಎಂದು ಆಗ್ರಹಿಸಿದರು.

‘ರಾಜ್ಯದಲ್ಲಿರುವ 1.32 ಲಕ್ಷ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಸಾಮಾಜಿಕ ಭದ್ರತೆ ಇಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಹಿಳಾ ಸಬಲೀಕರಣದ ಭರವಸೆಗಳು, ಯೋಜನೆಯ ರೂಪದಲ್ಲಿ ಜಾರಿಗೊಳ್ಳುತ್ತಿಲ್ಲ’ ಎಂದು ದೂರಿದರು.

‘ಮಕ್ಕಳಿಗೆ ಶಾಲಾ ಪೂರ್ವ ಶಿಕ್ಷಣ, ಆರೋಗ್ಯ ತಪಾಸಣೆ, ವಿಶೇಷ ಮಕ್ಕಳಿಗೆ ಪೌಷ್ಟಿಕ ಆಹಾರ ಸೌಲಭ್ಯ, ‘ಸ್ನೇಹಾ ಆ್ಯಪ್’ ಮೂಲಕ ಮಕ್ಕಳ ತೂಕ ಮಾಡಿ, ಪ್ರತಿ ತಿಂಗಳು ಆ್ಯಪ್‌ನಲ್ಲಿ ಮಾಹಿತಿ ಭರ್ತಿಗೊಳಿಸುವುದು ಸೇರಿದಂತೆ ದಿನದಿಂದ ದಿನಕ್ಕೆ ಕೆಲಸದ ಒತ್ತಡಗಳು ಹೆಚ್ಚುತ್ತಿವೆ’ ಎಂದು ಪ್ರತಿಭಟನಕಾರರು ಅಳಲು ತೋಡಿಕೊಂಡರು.

ಸಂಘದ ರಾಜ್ಯ ಘಟಕದ ಅಧ್ಯಕ್ಷೆ ಬಿ. ಪ್ರೇಮಾ, ಗೌರವಾಧ್ಯಕ್ಷೆ ಬಿ.ಆರ್.ಜಯಲಕ್ಷ್ಮಿ, ಕಾರ್ಯದರ್ಶಿ ಉಮಾಮಣಿ, ವಿಶಾಲಕ್ಷಿ, ಬಿ.ಎಸ್.ನಿರ್ಮಲಾ, ಶಾಂತಾ, ಎನ್.ಪಿ.ಭಾರತಿ ಇದ್ದರು.



ಬೆಂಗಳೂರಿನಲ್ಲಿ ಬುಧವಾರ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಸಿದರು.

–ಪ್ರಜಾವಾಣಿ ಚಿತ್ರ

20ರಿಂದ ಮಹಿಳಾ ಮೋರ್ಚಾ ಕಾರ್ಯಕಾರಿಣಿ

ಬೆಂಗಳೂರು: ತುಮಕೂರಿನಲ್ಲಿ ಇದೇ 20 ಮತ್ತು 21 ರಂದು ಬಿಜೆಪಿ ರಾಷ್ಟ್ರೀಯ ಮಹಿಳಾ ಮೋರ್ಚಾ ಕಾರ್ಯಕಾರಿಣಿ ನಡೆಯಲಿದೆ.

ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಆಶಯದಂತೆ ತುಮಕೂರಿನಲ್ಲಿ ಆಯೋಜಿಸಲಾಗಿದೆ. ಅಲ್ಲಿನ ಶೆಟ್ಟಿಹಳ್ಳಿ ಹೊರವಲಯ ರಸ್ತೆಯ ಆರ್‌ಟಿಪಿ ಕನ್ವೆಕ್ಷನ್ ಸೆಂಟರ್‌ನಲ್ಲಿ ನಡೆಯುವ 2 ದಿನಗಳ ಕಾರ್ಯಕಾರಣಿಯಲ್ಲಿ ಹಲವು ವಿಷಯಗಳ ಚಿಂತನ ಮಂಥನ ನಡೆಯಲಿದೆ. 37 ರಾಜ್ಯಗಳ ಮಹಿಳಾ ಘಟಕದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು ಭಾಗವಹಿಸುವರು ಎಂದು ವಿಧಾನ ಪರಿಷತ್ ಸದಸ್ಯ ಕೆ.ಎಸ್.ನವೀನ್ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಮಹಿಳಾ ಮೋರ್ಚಾ ರಾಜ್ಯ ಅಧ್ಯಕ್ಷೆ ಗೀತಾ ವಿವೇಕಾನಂದ, ಜ.28 ಅಥವಾ 29ರಂದು ರಾಜ್ಯ ಮಹಿಳಾ ಸಮಾವೇಶ ನಡೆಯಲಿದೆ ಎಂದು ಹೇಳಿದರು.

ಸಾವಿರ ಶಿವಲಿಂಗ ಪ್ರತಿಷ್ಠಾಪನೆ: ಎಚ್‌ಡಿಕೆ

ಹೊರ್ತಿ: 'ಜ.27 ರಂದು ಜರುಗುವ ತ್ರಿಕೋಟಿ ಶಿವಲಿಂಗ ಪ್ರತಿಷ್ಠಾಪನೆಯಲ್ಲಿ ನನ್ನ ಖರ್ಚಿನಲ್ಲಿ ಒಂದು ಸಾವಿರ ಶಿವಲಿಂಗ ಪ್ರತಿಷ್ಠಾಪಿಸುತ್ತೇನೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಘೋಷಣೆ ಮಾಡಿದರು.

ಹೊರ್ತಿ ಗ್ರಾಮದ ರೇವಣಸಿದ್ಧೇಶ್ವರ ದೇವಸ್ಥಾನದಲ್ಲಿ ತ್ರಿಕೋಟಿ ಶಿವಲಿಂಗ ಪ್ರತಿಷ್ಠಾಪನೆ ಪ್ರಯುಕ್ತ ಬುಧವಾರ ರೇವಣಸಿದ್ಧೇಶ್ವರ ಹಳೇ ದೇವಸ್ಥಾನಕ್ಕೆ ಭೇಟಿ ನೀಡಿ, ಮಾತನಾಡಿದರು.

'ಉತ್ತರ ಕರ್ನಾಟಕದ ಪ್ರಸಿದ್ಧ ಸುಕ್ಷೇತ್ರ ರೇವಣಸಿದ್ಧೇಶ್ವರ ದೇವಾಲಯ ಆವರಣದಲ್ಲಿ ತ್ರಿಕೋಟಿ ಶಿವಲಿಂಗ ಪ್ರತಿಷ್ಠಾಪನೆ ಮಾಡುತ್ತಿರುವುದು ಉತ್ತರ ಕರ್ನಾಟಕಕ್ಕೆ ಹೆಮ್ಮೆ. ಶಿವನ ಆಶೀರ್ವಾದದಿಂದ ನಾನು ಮುಖ್ಯಮಂತ್ರಿಯಾದರೆ ಹೊರ್ತಿಯ ಗ್ರಾಮವನ್ನು ಉತ್ತಮ ಪ್ರವಾಸಿ ತಾಣ ಮಾಡಲು ಶ್ರಮಿಸುತ್ತೇನೆ' ಎಂದು ಹೇಳಿದರು.

ಪ್ರಜಾಧ್ವನಿ ಬಸ್ ಯಾತ್ರೆ: ರಾಜ್ಯ ಸರ್ಕಾರದ ವಿರುದ್ಧ ಸಿದ್ದರಾಮಯ್ಯ ವಾಗ್ದಾಳಿ

'ಭ್ರಷ್ಟಾಚಾರ ತನಿಖೆಗೆ ಆಯೋಗ'

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾದ ತಕ್ಷಣ ಬಿಜೆಪಿ ಸರ್ಕಾರದಲ್ಲಿನ ಭ್ರಷ್ಟಾಚಾರ ಹಗರಣಗಳ ತನಿಖೆಗೆ ಆಯೋಗ ರಚಿಸಲಾಗುವುದು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಪ್ರಜಾಧ್ವನಿ ಬಸ್ ಯಾತ್ರೆ ಅಂಗವಾಗಿ ಬುಧವಾರ ಹಮ್ಮಿಕೊಂಡಿದ್ದ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, ಕಾಮಗಾರಿಗೆ ಶೇ 40ರಷ್ಟು ಕಮಿಷನ್ ಪಡೆದಿರುವುದು, ಪಿಎಸ್‌ಐ, ಪಿಡಬ್ಲ್ಯುಡಿ ಸಹಾಯಕ ಎಂಜಿನಿಯರ್ ನೇಮಕಾತಿ ಸೇರಿದಂತೆ ಹಲವು ಹಗರಣಗಳ ತನಿಖೆ ನಡೆಸಿ, ಕಠಿಣ ಕ್ರಮಕೈಗೊಳ್ಳಲಾಗುವುದು ಎಂದರು.

ಸ್ಯಾಂಟ್ರೊ ರವಿ ಪ್ರಕರಣ ಮುಚ್ಚಿ ಹಾಕುವ ಯತ್ನ: ಕಾರ್ಯಕ್ರಮಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದರಾಮಯ್ಯ, 'ಸ್ಯಾಂಟ್ರೊ ರವಿ ನಟೋರಿಯಸ್ ಕ್ರಿಮಿನಲ್ ಆಗಿದ್ದು, ಬಿಜೆಪಿ ಸಚಿವರ ಹುಳುಕು ಬಯಲಾಗಬಾರದು ಎಂದು ಪ್ರಕರಣ ಮುಚ್ಚಿ ಹಾಕಲಾಗುತ್ತಿದೆ' ಎಂದು ಆರೋಪಿಸಿದರು.

'ಪೊಲೀಸರು ರವಿಯನ್ನು ತಮ್ಮ ವಶಕ್ಕೆ ಕೇಳದಿರುವುದು ಪ್ರಕರಣ ಮುಚ್ಚಲು ಯತ್ನಿಸುತ್ತಿರುವಂತಿದೆ' ಎಂದು ಟೀಕಿಸಿದರು.

ಒಂದೇ ಕ್ಷೇತ್ರದಿಂದ ಸ್ಪರ್ಧೆ: 'ಒಂದೇ ಕ್ಷೇತ್ರದಿಂದ ಸ್ಪರ್ಧಿಸುತ್ತೇನೆ. ಎಂಟು ಬಾರಿ ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸಿದ್ದೇನೆ. ಕ್ಷೇತ್ರ ವಿಂಗಡಣೆಯಲ್ಲಿ ಸ್ವಂತ ಊರು ವರುಣಾಕ್ಕೆ ಸೇರಿದ್ದರಿಂದ ಅಲ್ಲಿ ಎರಡು ಬಾರಿ ಸ್ಪರ್ಧಿಸಿದೆ. ಕಳೆದ ಬಾರಿ ಬಾದಾಮಿಯಿಂದ ಕಣಕ್ಕಿಳಿದೆ. ಒಂದೇ ಕ್ಷೇತ್ರದಿಂದ ಸ್ಪರ್ಧಿಸಿದರೆ ಮಾತ್ರ ನಾಯಕರಾ' ಎಂದು ಪ್ರಶ್ನಿಸಿದರು.

ಈ ಕುರಿತ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಡಿ.ಕೆ. ಶಿವಕುಮಾರ್, 'ಒಂದು ಕ್ಷೇತ್ರದಿಂದ ಸ್ಪರ್ಧಿಸುತ್ತೇನೆ ಎಂದು ಸಿದ್ದರಾಮಯ್ಯ ಅವರೇ ಹೇಳಿದ್ದಾರೆ' ಎಂದು ಹೇಳಿದರು.

ಉಚಿತ ವಿದ್ಯುತ್: ಚರ್ಚೆಗೆ ಬರಲು ಡಿಕೆಶಿ ಸವಾಲು

ಬಾಗಲಕೋಟೆ: 200 ಯುನಿಟ್ ವರೆಗೆ ಉಚಿತ ವಿದ್ಯುತ್ ನೀಡುವ ಘೋಷಣೆಗೆ ಈಗಲೂ ಬದ್ಧರಾಗಿದ್ದೇವೆ. ಬಿಜೆಪಿಯವರಿಗೆ ಈ ಬಗ್ಗೆ ಅನುಮಾನ ಬೇಡ. ಅನುಮಾನವಿದ್ದರೆ ಬಹಿರಂಗ ಚರ್ಚೆಗೆ ಬರಲಿ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸವಾಲು ಹಾಕಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿದ್ಯುತ್ ಉತ್ಪಾದನೆ ದುಪ್ಪಟ್ಟಾಗಿದೆ. ವಿದ್ಯುತ್ ಮಾರಾಟ ಮಾಡುತ್ತಿದ್ದೇವೆ. ಸೋರಿಕೆ ತಡೆಗಟ್ಟಿ ಹೇಗೆ ಉಚಿತವಾಗಿ ನೀಡಬಹುದು ಎಂದು ತಿಳಿಸುತ್ತೇನೆ ಎಂದರು.

ಬಹಿರಂಗ ಸಭೆಯಲ್ಲಿ ಪಿಡಬ್ಲ್ಯುಡಿ ಸಹಾಯಕ ಎಂಜಿನಿಯರ್ ನೇಮಕ್ಕೆ ₹40 ಲಕ್ಷ ಲಂಚ ಪಡೆಯುತ್ತಿದ್ದಾರೆ ಎಂದು ನಾಡಿನ ಪ್ರಮುಖ ಪತ್ರಿಕೆ ವರದಿ ಮಾಡಿದೆ ಎಂದು 'ಪ್ರಜಾವಾಣಿ' ಪ್ರದರ್ಶಿಸಿದರು.



ಪಿಡಬ್ಲ್ಯುಡಿ ಸಹಾಯಕ ಎಂಜಿನಿಯರ್ ನೇಮಕಾತಿ ಪಾರದರ್ಶಕವಾಗಿಲ್ಲ ಎಂಬ ವರದಿ ಪ್ರಜಾವಾಣಿಯಲ್ಲಿ ಪ್ರಕಟವಾಗಿದ್ದನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರದರ್ಶಿಸಿದರು

ಲೈಂಗಿಕ ಕಾರ್ಯಕರ್ತೆಯರ ಬಗ್ಗೆ ಗೌರವವಿದೆ: ಹರಿಪ್ರಸಾದ್

ಬಾಗಲಕೋಟೆ: ಲೈಂಗಿಕ ಕಾರ್ಯಕರ್ತೆಯರು, ಅವರ ವೃತ್ತಿ ಬಗ್ಗೆ ಗೌರವವಿದೆ. ಹೇಳಿಕೆಯನ್ನು ತಿರುಚಲಾಗಿದೆ. ಅವರಿಗೆ ನೋವಾಗಿದ್ದರೆ ಕ್ಷಮೆ ಕೇಳುವೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಹೇಳಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮಂತ್ರಿಗಿರಿಗಾಗಿ ತಮ್ಮನ್ನು ತಾವು ಮಾರಿಕೊಂಡವರು ಗರತಿಯರಂತೆ ಸಿನಿಮಾ ಡೈಲಾಗ್‌ಗಳನ್ನು ಹೊಡೆಯುತ್ತಿದ್ದಾರೆ. ಕಾಂಗ್ರೆಸ್‌ನಲ್ಲಿದ್ದಾಗ ಸಚಿವರಾಗಲು ಏನೆಲ್ಲ ಮಾಡಿದರು ಎಂದು ಹೇಳಿದರೆ ಬಾಯಿ ಹೊಲಸಾಗುತ್ತದೆ' ಎಂದರು.

ಸ್ಯಾಂಟ್ರೊ ರವಿ, ಪಿಂಪ್ ರವಿ, ಸಿ.ಟಿ. ರವಿಯಂತವರೇ ಬಿಜೆಪಿಯಲ್ಲಿ ತುಂಬಿದ್ದಾರೆ. ಬಿಜೆಪಿಯವರು ಅವರ ಪಕ್ಷದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಪ್ರಶ್ನೆಗಳಿಗೆ ಉತ್ತರಿಸುವ ಧೈರ್ಯ ತೋರಿಸಲಿ ಎಂದು ಆಗ್ರಹಿಸಿದರು.

ಪ್ರಧಾನಿ ಮೋದಿ ಸೂಚನೆ ಪಾಲನೆ: ಬಿಎಸ್‌ವೈ

ಮುಸ್ಲಿಮರೊಂದಿಗೆ ವಿಶ್ವಾಸದ ಹೆಜ್ಜೆ

ಪ್ರಜಾ ಮತ ಜನತಂತ್ರದ ಹಬ್ಬ | ಕರ್ನಾಟಕ ವಿಧಾನಸಭಾ ಚುನಾವಣೆ - 2023

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಅಲ್ಪಸಂಖ್ಯಾತ ಮುಸ್ಲಿಮರನ್ನು ವಿಶ್ವಾಸದಿಂದ ಜೊತೆಗೆ ಕರೆದೊಯ್ಯಲು ಪ್ರಾಮಾಣಿಕ ಪ್ರಯತ್ನ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಸಲಹೆ ನೀಡಿದ್ದು, ಅದನ್ನು ಪಾಲಿಸಲಾಗುವುದು' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ನವದೆಹಲಿ ಭೇಟಿ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ನಮ್ಮೊಂದಿಗೆ ಅಲ್ಪಸಂಖ್ಯಾತರು ಚೆನ್ನಾಗಿದ್ದಾರೆ. ಪ್ರಧಾನಿ ಸಲಹೆಯಂತೆ ಮುಂಬರುವ ದಿನಗಳಲ್ಲಿ ಅವರೊಂದಿಗೆ ಹೆಚ್ಚಿನ ವಿಶ್ವಾಸದಿಂದ ಹೆಜ್ಜೆ ಇಡುವ ಪ್ರಯತ್ನ ಮಾಡುತ್ತೇವೆ' ಎಂದರು.

'ಚುನಾವಣೆ ಗೆಲ್ಲಲು ಏನೇನು ತಂತ್ರ ಮಾಡಬೇಕು ಎಂಬುದರ ಬಗ್ಗೆ ಒಂದೂವರೆ ಗಂಟೆ ಪ್ರಧಾನ ಮಂತ್ರಿ ಮಾರ್ಗದರ್ಶನ ಮಾಡಿದ್ದಾರೆ. ಮನೆ–ಮನೆಗೆ ಹೋಗಿ ಮತದಾರರ ಭೇಟಿಗೆ ಸೂಚಿಸಿದ್ದಾರೆ ಎಂದರು.

ಬಜೆಟ್ ಬಳಿಕ ರಾಜೀನಾಮೆ: ಶ್ರೀನಿವಾಸ್

ಗುಬ್ಬಿ (ತುಮಕೂರು): ರಾಜ್ಯ ಬಜೆಟ್ ಅಧಿವೇಶನದ ನಂತರ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವುದಾಗಿ ಗುಬ್ಬಿ ಶಾಸಕ ಎಸ್.ಆರ್. ಶ್ರೀನಿವಾಸ್ ಪ್ರಕಟಿಸಿದ್ದಾರೆ.

'ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡದೆ ಬೇರೆ ಪಕ್ಷ ಸೇರಲು ಸಾಧ್ಯವಿಲ್ಲ. ಬಜೆಟ್ ನಂತರ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ, ಕ್ಷೇತ್ರದ ಕಾರ್ಯಕರ್ತರು ಹಾಗೂ ಹಿತೈಷಿಗಳ ಸಲಹೆಯಂತೆ ಮುಂದಿನ ತೀರ್ಮಾನ ತೆಗೆದುಕೊಳ್ಳುತ್ತೇನೆ' ಎಂದು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

ಯತ್ನಾಳ ಉತ್ಸಾಹಿ ಮಿತ್ರ: ಸಿಎಂ

ಬೀರೂರು (ಚಿಕ್ಕಮಗಳೂರು): 'ಶಾಸಕ ಬಸನಗೌಡ ಪಾಟೀಲ ಯತ್ನಾಳರು ಅತಿ ಉತ್ಸಾಹಿ ಮಿತ್ರ. ಉತ್ಸಾಹದಲ್ಲಿ ಕೆಲ ಹೇಳಿಕೆ ನೀಡುತ್ತಾರೆ. ಅವರ ವಿಚಾರವನ್ನು ಹೈಕಮಾಂಡ್ ಗಮನಕ್ಕೆ ತಂದಿದ್ದು, ಅವರನ್ನು ಕರೆಸಿ ಮಾತನಾಡಿ ಸರಿಪಡಿಸುತ್ತಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮೀಸಲಾತಿ ವಿಚಾರದಲ್ಲಿ ಗೊಂದಲ ಇಲ್ಲ. ಮಧ್ಯಂತರ ವರದಿಯನ್ನು ಸಚಿವ ಸಂಪುಟದ ಮುಂದೆ ಇಟ್ಟಿದ್ದೇವೆ. ಅಂತಿಮ ವರದಿ ನಂತರ ಸ್ಪಷ್ಟ ಚಿತ್ರಣ ಲಭಿಸುತ್ತದೆ' ಎಂದರು.

ನಾನು 1 ಪರ್ಸೆಂಟ್ ಪ್ರಾಮಾಣಿಕ: ಆನಂದ್ ಸಿಂಗ್

ಹೊಸಪೇಟೆ (ವಿಜಯನಗರ): 'ನಾನು ನನ್ನ ಜೀವನದಲ್ಲಿ 99 ಪರ್ಸೆಂಟ್ ಅಲ್ಲ, ಒಂದು ಪರ್ಸೆಂಟ್ ಪ್ರಾಮಾಣಿಕನಾಗಿದ್ದೇನೆ' ಎಂದು ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಹೇಳಿದರು.

ಶ್ರೀ ಆದಿನಾಥ ಜೈನ ಶ್ವೇತಾಂಬರ ಸಂಘದಿಂದ ಬುಧವಾರ ನಗರದಲ್ಲಿ ಏರ್ಪಡಿಸಿದ್ದ ದೀಕ್ಷಾ ಸಮಾರಂಭದಲ್ಲಿ ಮಾತನಾಡಿದ ಅವರು, 'ಸದ್ಯ ನಾನು ಒಂದು ಪರ್ಸೆಂಟ್ ಪ್ರಾಮಾಣಿಕನಾಗಿದ್ದೇನೆ. ಮಿಕ್ಕುಳಿದದ್ದು ಪ್ರಯತ್ನಿಸುವೆ. ಇನ್ನೊಂದು ಪರ್ಸೆಂಟ್ ಹೆಚ್ಚಿಸುವೆ. ಆದರೆ, ನೂರು ಪರ್ಸೆಂಟ್ ಅಲ್ಲ' ಎಂದರು. 'ನಾನು ಎಲ್ಲ ಸಮಾಜದ ಗುರುಗಳ ಸಂದೇಶ ಕೇಳುತ್ತೇನೆ. ಧರ್ಮ ಮಾರ್ಗದಲ್ಲಿ ನಡೆಯಲು ಪ್ರಯತ್ನಿಸುತ್ತೇನೆ. ಕೆಲವೊಮ್ಮೆ ತಪ್ಪುಗಳು ಆಗುತ್ತವೆ. ಮತ್ತೆ ದೇವರಲ್ಲಿ ಕ್ಷಮೆ ಕೇಳುತ್ತೇನೆ. ಪುನಃ ಒಂದು ಪರ್ಸೆಂಟ್ ಕೆಲಸ ಮಾಡುತ್ತೇನೆ ಎಂದರು.

ಮತದಾರರಿಗೆ ಹಂಚಲು ತಂದ ಕುಕ್ಕರ್, ಡಿನ್ನರ್ ಸೆಟ್

ಕುಣಿಗಲ್ (ತುಮಕೂರು): ಚುನಾವಣೆಗೂ ಮುನ್ನವೇ ಮತದಾರರಿಗೆ ಹಂಚಲು ಕಾಂಗ್ರೆಸ್ ಮುಖಂಡರು ಗೋದಾಮಿನಲ್ಲಿ ದಾಸ್ತಾನು ಮಾಡಿದ್ದ ಕುಕ್ಕರ್, ಡಿನ್ನರ್ ಸೆಟ್, ಇತರೆ ಸಾಮಗ್ರಿಗಳನ್ನು ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳ ತಂಡ ಬುಧವಾರ ಪರಿಶೀಲಿಸಿತು.

ಕಾಂಗ್ರೆಸ್ ಮುಖಂಡರು ಹರಿಯಾಣದಿಂದ ಎರಡು ಕಂಟೈನರ್‌ಗಳಲ್ಲಿ ಗೃಹೋಪಯೋಗಿ ಸಾಮಗ್ರಿಗಳನ್ನು ತಂದು ತಾಲ್ಲೂಕಿನ ಅಮೃತೂರು ಗ್ರಾಮದ ಸಮೀಪ ಚಿಕ್ಕಕೆರೆ ಬಳಿಯ ಗೋದಾಮಿನಲ್ಲಿ ದಾಸ್ತಾನು ಮಾಡಿದ್ದಾರೆ ಎಂದು ಜೆಡಿಎಸ್ ಮುಖಂಡರು ದೂರು ನೀಡಿದ್ದರು. ದೂರಿನ ಮೇರೆಗೆ ವಾಣಿಜ್ಯ ತೆರಿಗೆ ಇಲಾಖೆ ಸಹಾಯಕ ಆಯುಕ್ತ ನಾಗರಾಜು ನೇತೃತ್ವದ ಅಧಿಕಾರಿಗಳ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಇಬ್ಬರು ಕಾಂಗ್ರೆಸ್ ಮುಖಂಡರ ಹೆಸರಿನಲ್ಲಿ ಈ ಸಾಮಗ್ರಿಗಳನ್ನು ಖರೀದಿಸಿರುವ ಬಿಲ್ ಪತ್ತೆಯಾಗಿವೆ. ಇದರ ಜತೆಗೆ ಇವುಗಳನ್ನು ಹೊತ್ತು ತಂದಿದ್ದ ವಾಹನಗಳ ದಾಖಲೆಗಳೂ ಸಮರ್ಪಕವಾಗಿರುವುದು ಕಂಡು ಬಂದಿದೆ. ಹಾಗಾಗಿ ವಾಹನಗಳನ್ನು ಅಧಿಕಾರಿಗಳು ಬಿಟ್ಟು ಕಳುಹಿಸಿದ್ದಾರೆ ಎನ್ನಲಾಗಿದೆ.

ಸಿದ್ದರಾಮಯ್ಯ ವಿರುದ್ಧ ಸ್ಪರ್ಧೆ ತಡೆಯಲು ಯಾರಿಂದಲೂ ಸಾಧ್ಯವಿಲ್ಲ: ವರ್ತೂರು ಪ್ರಕಾಶ್

ಪ್ರಜಾವಾಣಿ ವಾರ್ತೆ

ಕೋಲಾರ: 'ಸಿದ್ದರಾಮಯ್ಯ ವಿರುದ್ಧ ಕೋಲಾರ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಬೇಡವೆಂದು ನನಗೆ ಹೇಳಲು ಕುರುಬ ಸಮುದಾಯದ ಸ್ವಾಮೀಜಿ ಸೇರಿದಂತೆ ಯಾರಿಗೂ ಸಾಧ್ಯವಿಲ್ಲ' ಎಂದು ಬಿಜೆಪಿ ಟಿಕೆಟ್ ಆಕಾಂಕ್ಷಿ ವರ್ತೂರು ಪ್ರಕಾಶ್ ತಿಳಿಸಿದರು.

'ಸಿದ್ದರಾಮಯ್ಯ ಕಡೆಯವರು ಮತ್ತು ಸ್ವಾಮೀಜಿ ಒತ್ತಡಕ್ಕೆ ಮಣಿದು ರಾಜಿ ಮಾಡಿಕೊಂಡು ಸ್ಪರ್ಧೆಯಿಂದ ಹಿಂದೆ ಸರಿಯುತ್ತೇನೆ, ಸ್ಪರ್ಧಿಸಿದರೂ ತಟಸ್ಥವಾಗುತ್ತೇನೆ ಎಂದೆಲ್ಲಾ ಸಾಮಾಜಿಕ ಜಾಲತಾಣಗಳಲ್ಲಿ ಊಹಾಪೋಹ ಹಬ್ಬಿಸುತ್ತಿದ್ದಾರೆ. ಈ ಮೂಲಕ ನನ್ನನ್ನು ರಾಜಕೀಯವಾಗಿ ತೇಜೋವಧೆ ಮಾಡುವ ಪ್ರಯತ್ನ ನಡೆದಿದೆ' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಇವೆಲ್ಲಾ ವಾಸ್ತವಕ್ಕೆ ದೂರವಿದ್ದು, ನನ್ನ ಮನವೊಲಿಕೆಗೆ ಯಾರೂ ಪ್ರಯತ್ನಿಸಿಲ್ಲ. ನಾನು ಹೈವೋಲ್ಟೇಜ್ ವಿದ್ಯುತ್ ತಂತಿ ಇದ್ದಂತೆ. ನನ್ನನ್ನು ದಾರಿ ತಪ್ಪಿಸಲು ಅಥವಾ ಮನವೊಲಿಕೆಗೆ ಬರುವವರು ಸುಟ್ಟು ಭಸ್ಮವಾಗುತ್ತಾರೆ' ಎಂದು ಅವರು ಎಚ್ಚರಿಕೆ ನೀಡಿದರು.

'ಜ.9ರವರೆಗೆ ಸಿದ್ದರಾಮಯ್ಯ ಮೇಲೆ ಗೌರವವಿತ್ತು. ಆದರೆ, ಅವರದೇ ಸಮುದಾಯಕ್ಕೆ ಸೇರಿದ ನನ್ನ ವಿರುದ್ಧ ಕೋಲಾರದಲ್ಲಿ ಸ್ಪರ್ಧಿಸುವುದಾಗಿ ಅಂದು ಪ್ರಕಟಿಸಿದ ನಂತರ ಅವರ ಮೇಲಿದ್ದ ಗೌರವ ದೂರವಾಯಿತು. ರಮೇಶ್ ಕುಮಾರ್, ಎಂ.ಎಲ್. ಅನಿಲ್ ಕುಮಾರ್ ಮತ್ತಿತರರು ಕರೆತಂದರು ಎನ್ನುವುದಕ್ಕಿಂತ ನನ್ನನ್ನು ಚಿವುಟಿ ಹಾಕಲೆಂದೇ ಅವರು ಸ್ಪರ್ಧೆಗೆ ಮುಂದಾಗಿದ್ದಾರೆ' ಎಂದು ಟೀಕಿಸಿದರು.

ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ತಂಬಹಳ್ಳಿ ಮುನಿಯಪ್ಪ, ಪ್ರಧಾನ ಕಾರ್ಯದರ್ಶಿ ನಡುಪಳ್ಳಿ ಕೃಷ್ಣಮೂರ್ತಿ, ಬೆಗ್ಲಿ ಸೂರ್ಯಪ್ರಕಾಶ್ ಅವರು ಇದ್ದರು.

'ಸುಳ್ಳಿನ ಕಾರ್ಖಾನೆ ಬಿರುಸಾಗುತ್ತಿದೆ'

ಬೆಂಗಳೂರು: ರಾಜ್ಯದಲ್ಲಿ ಚುನಾವಣೆ ಸಮೀಪಿಸುತ್ತಿರುವಂತೆಯೇ ಪ್ರಧಾನಿ ಮೋದಿಯವರಿಗೆ ಕರ್ನಾಟಕ ನೆನಪಾಗಿದೆ. ಪದೇ ಪದೇ ಅವರು ರಾಜ್ಯಕ್ಕೆ ಭೇಟಿ ನೀಡುತ್ತಿರುವುದರ ಜತೆಯಲ್ಲೇ ಬಿಜೆಪಿಯ ಸುಳ್ಳಿನ ಕಾರ್ಖಾನೆಯೂ ಬಿರುಸಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಬುಧವಾರ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ಮೋದಿಯವರು ಅಧಿಕಾರಕ್ಕೆ ಬಂದ ಬಳಿಕ ದೇಶ ಆರ್ಥಿಕವಾಗಿ ಕುಸಿದಿದೆ. ಹಣದುಬ್ಬರ ನಿಯಂತ್ರಣಕ್ಕೆ ಸಿಗದೆ ಮೇಲೇರುತ್ತಿದೆ. ದೇಶವನ್ನು ಆಡಳಿತಾತ್ಮಕವಾಗಿ ಸೋಲಿಸಿದ್ದಾರೆ. ಆದರೆ, ಬಿಜೆಪಿಯ ಸುಳ್ಳಿನ ಕಾರ್ಖಾನೆಗಳು ಪ್ರಧಾನಿ ಭೇಟಿ ವೇಳೆ ಹೊಸ ಸುಳ್ಳು ಸೃಷ್ಟಿಸಲು ಸಿದ್ಧವಾಗಿವೆ' ಎಂದು ವಾಗ್ದಾಳಿ ನಡೆಸಿದ್ದಾರೆ. 2 ಬಾರಿ ಜನರು ಕೊಟ್ಟ ಬಹುಮತಕ್ಕೆ ಮೋದಿ ಅವಮಾನ, ಅನ್ಯಾಯ ಮಾಡಿದ್ದಾರೆ. ಕೆಲವೇ ಮಂದಿ ಕಾರ್ಪೋರೇಟ್ ಧಣಿಗಳಷ್ಟೇ ಸಂಭ್ರಮಿಸುವ ಪರಿಸ್ಥಿತಿ ದೇಶದಲ್ಲಿದೆ. ಆದರೆ, ತೆರಿಗೆ ಹೇರಿಕೆಯನ್ನೂ ಜನರ ಒಳಿತಿಗಾಗಿ ಮಾಡಲಾಗಿದೆ ಎಂದು ನಂಬಿಸಿ ಜನರನ್ನು ಕುರಿ ಮಾಡಲು ಬಿಜೆಪಿಯವರು ಸಜ್ಜಾಗಿದ್ದಾರೆ ಎಂದು ಹೇಳಿದ್ದಾರೆ.

'ಉಸ್ತುವಾರಿ ನೇಮಕಕ್ಕೆ ಇರುವ ಅಧಿಕಾರವೇನು?'

ಬೆಂಗಳೂರು: 'ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ (ಪೊಕ್ಸೊ), ಅತ್ಯಾಚಾರ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣದಲ್ಲಿ ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಮುರುಘಾ ಶರಣರು, ಕರ್ನಾಟಕ ಬಂದಿಗಳ ಕಾಯ್ದೆ-1963ರ ಅನ್ವಯ ಈಗ ವಿಚಾರಣಾಧೀನ ಬಂದಿ. ಇಂತಹವರು ಜೈಲಿಗೆ ಹೋಗುವ ಮುನ್ನ ಮಠಕ್ಕೆ ಉಸ್ತುವಾರಿ ಸ್ವಾಮೀಜಿಯನ್ನು ನೇಮಕ ಮಾಡಲು ಯಾವ ಅಧಿಕಾರ ಹೊಂದಿದ್ದರು ಮತ್ತು ಈ ದಿಸೆಯಲ್ಲಿ ಏನಾದರೂ ಲಿಖಿತ ನಿಯಮಗಳಿವೆಯೇ' ಎಂದು ಮಠದ ಪರ ವಕೀಲರನ್ನು ಹೈಕೋರ್ಟ್ ಪ್ರಶ್ನಿಸಿದೆ.

ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್. ವಸ್ತ್ರದ ಅವರನ್ನು ಶ್ರೀ ಜಗದ್ಗುರು ಮುರುಘರಾಜೇಂದ್ರ (ಎಸ್‌ಜೆಎಂ) ಬೃಹನ್ಮಠಕ್ಕೆ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಎಸ್‌ಜೆಎಂ ವಿದ್ಯಾಪೀಠದ ಅಧ್ಯಕ್ಷ, ಮಠದ ಉಸ್ತುವಾರಿ ಬಸವಪ್ರಭು ಸ್ವಾಮೀಜಿ ಮತ್ತು ಭಕ್ತರು ಸಲ್ಲಿಸಿರುವ ರಿಟ್ ಅರ್ಜಿಯ ಹೆಚ್ಚುವರಿ ವಿಚಾರಣೆಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಮುಂದುವರಿಸಿತು.

ವಿಚಾರಣೆ ವೇಳೆ ಮಠದ ಪರ ಹಿರಿಯ ವಕೀಲ ಜಯಕುಮಾರ್ ಎಸ್. ಪಾಟೀಲ, 'ಉಸ್ತುವಾರಿ ಸ್ವಾಮೀಜಿ ಶಾಖಾ ಮಠದ ಮಠಾಧಿಪತಿಯೇ ಆಗಿದ್ದು, ಶರಣರಿಂದ ಜಿಪಿಎ (ಸಾಮಾನ್ಯ ಅಧಿಕಾರ ಪತ್ರ) ಪಡೆದಿದ್ದಾರೆ. ಇಂತಹ ಪತ್ರವನ್ನು ಜೈಲಿನಲ್ಲಿರುವ ವಿಚಾರಣಾಧೀನ ಬಂದಿಯೂ ಕೊಡುವ ಅಧಿಕಾರ ಇದೆ. ಹಾಗಾಗಿ, ಹೊರಗಿನಿಂದ ಬಂದ ಆಡಳಿತಾಧಿಕಾರಿಯು ಮಠದ ಆಂತರಿಕ ಆಡಳಿತ ನಡೆಸುವುದು ಕಾನೂನಿಗೆ ವಿರುದ್ಧ. ಆದ್ದರಿಂದ, ಆಡಳಿತಾಧಿಕಾರಿ ನೇಮಕ ಮಾಡಿರುವ ಸರ್ಕಾರದ ಆದೇಶವನ್ನು ಅಸಿಂಧು ಎಂದು ಘೋಷಿಸಬೇಕು' ಎಂದು ಮನವಿ ಮಾಡಿದರು.

ವೀರಶೈವ–ಲಿಂಗಾಯತ ಪ್ರಸ್ತಾಪ

ವಿಚಾರಣೆ ವೇಳೆಯಲ್ಲಿ ವೀರಶೈವ ಮತ್ತು ಲಿಂಗಾಯತ ಪದಗಳ ಕುರಿತಂತೆ ಜಿಜ್ಞಾಸೆ ವ್ಯಕ್ತವಾಯಿತು. ಆಡಳಿತಾಧಿಕಾರಿ ಪಿ.ಎಸ್.ವಸ್ತ್ರದ ಪರ ಹಾಜರಾಗಿದ್ದ ಹಿರಿಯ ವಕೀಲ ಗಂಗಾಧರ ಗುರುಮಠ ಅವರು, 'ಎರಡೂ ಪದಗಳು ಒಂದೇ' ಎಂದು ಪ್ರತಿಪಾದಿಸಿದರೆ ಜಯಕುಮಾರ್ ಪಾಟೀಲ, 'ಈ ವಿಷಯದಲ್ಲಿ ತಾತ್ವಿಕ ಭಿನ್ನಾಭಿಪ್ರಾಯಗಳಿವೆ. ಅದನ್ನು ಈ ಪ್ರಕರಣದಲ್ಲಿ ಚರ್ಚಿಸುವುದು ಬೇಡ' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.


ಇದನ್ನು ಒಪ್ಪದ ನ್ಯಾಯಮೂರ್ತಿಗಳು, 'ವಾದ ಮಂಡಿಸಲು ಅಡ್ಡಿಯೇನಿಲ್ಲ. ಅಂತೆಯೇ, ಹೇಳಿದ್ದನ್ನೆಲ್ಲಾ ದಾಖಲೆಯಲ್ಲಿ ತೆಗೆದುಕೊಳ್ಳಬೇಕು ಎಂದೇನೂ ಇಲ್ಲವಲ್ಲ. ನಿಮ್ಮ ವಿವರಣೆ ಕೋರ್ಟ್‌ನ ಜ್ಞಾನ ವೃದ್ಧಿಗೆ ಸಹಾಯಕವಾಗಬಲ್ಲುದು' ಎಂದು ನುಡಿದರು.

ಆಗಾಗ್ಗೆ ಧರ್ಮಗಳ ವಿವರಣೆಯ ಕುರಿತಂತೆ ಜಯಕುಮಾರ್ ಪಾಟೀಲ ಅವರನ್ನು ಪ್ರಶ್ನಿಸಿದ ನ್ಯಾಯಮೂರ್ತಿಗಳು, ಅಮೆರಿಕದ ಪ್ರಖ್ಯಾತ ಇತಿಹಾಸಕಾರ, ದಾರ್ಶನಿಕ, ತತ್ವಶಾಸ್ತ್ರಜ್ಞ ವಿಲ್ ಡ್ಯೂರಂಟ್ ಹಾಗೂ ಇಂಗ್ಲಿಷ್ ಇತಿಹಾಸಕಾರ ಅರ್ನಾಲ್ಡ್ ಟಾಯ್ನಬಿ ಅವರು ಹಿಂದೂ ಧರ್ಮದ ಕುರಿತಂತೆ ಬರೆದಿರುವ ಪುಸ್ತಕಗಳನ್ನೂ ನೆನಪಿಸಿದರು. ಧರ್ಮದ ವ್ಯಾಖ್ಯಾನ, ಅನುಯಾಯಿಗಳು ಎಂದರೆ ಯಾರು ಎಂಬ ಬಗ್ಗೆ ಕ್ಲುಪ್ತ ನಿಷ್ಕರ್ಷೆ ನಡೆಸಿದರು.

ಐದು ದಿನಗಳ ಜೈಪುರ ಸಾಹಿತ್ಯೋತ್ಸವ ಇಂದು ಆರಂಭ

ಸಮಕಾಲೀನ ಸಾಹಿತ್ಯ ಮಂಥನದ ಕಬ್ಬ

● ವಿಶಾಖ ಎನ್.


ಅಬ್ದುಲ್‌ರಜಾಕ್ ಗುರ್ನಾ


ಅನಾಮಿಕಾ


ಜಾವೆದ್ ಅಖ್ತರ್

ಜೈಪುರ: ಭಾರತೀಯ ಭಾಷೆಗಳ 21 ಹಾಗೂ ಅಂತರರಾಷ್ಟ್ರೀಯ ಭಾಷೆಗಳಿಗೆ ಸಂಬಂಧಿಸಿದ 14 ಗೋಷ್ಠಿಗಳು ಜೈಪುರ ಸಾಹಿತ್ಯೋತ್ಸವದ ಈ ಆವೃತ್ತಿಯ ವಿಶೇಷ. ಕೋವಿಡ್ ಕಾರಣದಿಂದಾಗಿ ಕಳೆದ ವರ್ಷ ಆನ್‌ಲೈನ್‌ನಲ್ಲಿ ಸಾಹಿತ್ಯೋತ್ಸವ ನಡೆದಿತ್ತು. ಈ ಸಲ ಸುಮಾರು ನಾಲ್ಕೂವರೆ ಲಕ್ಷ ಜನರು ಭೌತಿಕವಾಗಿ ಸಾಕ್ಷಿಯಾಗುವ ನಿರೀಕ್ಷೆ ಇದೆ.

ಹೋಟೆಲ್ ಕ್ಲಾರ್ಕ್ಸ್ ಆಮೆರ್ ಜನವರಿ 19ರಿಂದ 23ರ ವರೆಗೆ ಐದು ದಿನ ಸಾಹಿತ್ಯ, ಸಂಸ್ಕೃತಿ, ಸಂಗೀತಾಸಕ್ತರಿಗೆ ತುಂಬಿಕೊಳ್ಳುವಂತಹ ಹಲವು ವಿಷಯಗಳು ದಕ್ಕಲಿವೆ.

'ಶೋಕರಿ ಮೈ ದಿಗಂತ್' ಹಿಂದಿ ಕವನ ಸಂಕಲನಕ್ಕಾಗಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನರಾಗಿದ್ದ ಅನಾಮಿಕ ಅವರೊಟ್ಟಿಗೆ ಕಾದಂಬರಿಕಾರ್ತಿ ಅಲ್ಕಾ ಸರಾವಗಿ ಹಾಗೂ ಪತ್ರಕರ್ತೆ ನಿಶಾಂತಾ ಗೌತಮ್ ನಡೆಸಿಕೊಡುವ ಚರ್ಚೆ, ದೆಹಲಿಯ ಸಂಸ್ಕೃತ ವಿದ್ವಾಂಸ ಆಸ್ಕರ್ ಪ್ರಜೋಲ್ ಅವರೊಂದಿಗೆ 'ಗ್ಲೋಬಲ್ ಹಿಂದಿ' ಗೋಷ್ಠಿಯ ಮೂಲಕ ಭಾರತದಲ್ಲಿನ ಫಿನ್ಲೆಂಡ್ ರಾಯಭಾರಿ ಆ್ಯಡಂ ಬುರಾಕೆವ್‌ಸ್ಕಿ ನಡೆಸಿಕೊಡುವ ಸಂವಾದ ಅನೇಕರಿಗೆ ಇಲ್ಲಿ ಆಸಕ್ತಿದಾಯಕ ಗೋಷ್ಠಿಗಳಾಗಿವೆ.

ಜೈಪುರ ಸಾಹಿತ್ಯೋತ್ಸವದ 16ನೇ ಆವೃತ್ತಿಯಲ್ಲಿ ಮಹಿಳಾ ಸಾಹಿತಿಗಳು ಹಾಗೂ ಕಲಾವಿದರ ದನಿಯ ಬಗೆಗಿನ ಗೋಷ್ಠಿಗಳಿವೆ.

ತಂದೆಯಂದಿರ ಕಾವ್ಯ

ಜಾವೆದ್ ಅಖ್ತರ್ ತಂದೆ ನಿಸಾರ್ ಅಖ್ತರ್ ಅವರ ಕೆಲವು 'ನಜ್ಮಾ'ಗಳನ್ನು ಶಬಾನಾ ಆಜ್ಮಿ ಹೆಕ್ಕಿದ್ದಾರೆ. ಶಬಾನಾ ತಂದೆ ಕೈಫಿ ಆಜ್ಮಿ ಅವರು ಬರೆದ ತಮ್ಮಿಷ್ಟದ 'ನಜ್ಮಾ'ಗಳನ್ನು ಜಾವೆದ್ ಆಯ್ಕೆ ಮಾಡಿದ್ದಾರೆ. ಅವುಗಳನ್ನು ಪ್ರಸ್ತುತ ಪಡಿಸಲಿರುವ ಗೋಷ್ಠಿ 'ದಾಯರಾ ಅಂಡ್ ಧನಕ್'. ರಕ್ಷಾಂಧಾ ಜಲೀಲ್ ಜ.20 ರಂದು ನಡೆಸಿಕೊಡುವ ಈ ಗೋಷ್ಠಿಯಲ್ಲಿ ಜಾವೆದ್ ಹಾಗೂ ಶಬಾನಾ ಮುಖಾಮುಖಿಯಾಗಲಿದ್ದಾರೆ.

21ರಂದು ಲತಾ ಮಂಗೇಷ್ಕರ್ ಸಂಗೀತ ಬದುಕಿನ ಪುಟಗಳನ್ನು ತಿರುವಿಹಾಕುವ ಗೋಷ್ಠಿಯಲ್ಲಿ, ಅವರ ಕುರಿತು ಕತೆ ಬರೆದಿರುವ ಯತೀಂದ್ರ ಮಿಶ್ರ ಹಾಗೂ ಚಿತ್ರಸಾಹಿತಿ ಗುಲ್ಜಾರ್ ಪಾಲ್ಗೊಳ್ಳುವರು.

ಜಾಗತಿಕ ಕೃಷಿ ಬಿಕ್ಕಟ್ಟುಗಳು, ಕೃತಕ ಬುದ್ಧಿಮತ್ತೆ, ಹೊಸಕಾಲದ ಪ್ರಮುಖ ವೈಜ್ಞಾನಿಕ ಆವಿಷ್ಕಾರಗಳು, 75ನೇ ವರ್ಷದಲ್ಲಿ ಭಾರತ, ರಷ್ಯಾ-ಉಕ್ರೇನ್ ತಿಕ್ಕಾಟ, ತಂತ್ರಜ್ಞಾನ ನೈತಿಕತೆ... ಈ ವಿಷಯಗಳನ್ನು ಆಧರಿಸಿದ ಗೋಷ್ಠಿಗಳು ನಡೆಯಲಿವೆ. ಅಪರಾಧ ಜಗತ್ತಿನ ಕಾಲ್ಪನಿಕತೆ, ಕಾವ್ಯ, ಅನುವಾದ ಹೀಗೆ ಸಾಹಿತ್ಯಿಕ ಅಂಶಗಳ ಕುರಿತ ಗೋಷ್ಠಿಗಳು ನಡೆಯಲಿವೆ.

ಐದು ವೇದಿಕೆಗಳಲ್ಲಿ ಗೋಷ್ಠಿಗಳು ನಡೆಯಲಿದ್ದು, ಪ್ರತಿದಿನ ಮುಂಜಾನೆ ಹಾಗೂ ಸಂಜೆ ಸಂಗೀತ ಕಾರ್ಯಕ್ರಮಗಳು ಸಹೃದಯರನ್ನು ರಂಜಿಸಲಿವೆ.

ನೊಬೆಲ್ ಪ್ರಶಸ್ತಿ ಪುರಸ್ಕೃತ ಅಬ್ದುಲ್‌ರಜಾಕ್ ಗುರ್ನಾ, ಚಲನಚಿತ್ರ ಬರಹಗಾರ ಹಾಗೂ ಬಾತ್ಮೀದಾರ ಅಲೆಕ್ಸ್ ವೊವ್ ತುನ್ಜೆಲ್‌ಮನ್, ಬುಕರ್ ಪ್ರಶಸ್ತಿ ಪುರಸ್ಕೃತರಾದ ಗೀತಾಂಜಲಿ ಶ್ರೀ, ಜನಪ್ರಿಯ ಸಾಹಿತಿ ದೀಪ್ತಿ ಕಪೂರ್, ಸಂಗೀತಗಾರ ಹರಿಪ್ರಸಾದ್ ಚೌರಾಸಿಯಾ, ನಟಿ ದೀಪ್ತಿ ನವಾಲ್, ಚಿತ್ರಸಾಹಿತಿ ಹಾಗೂ ಕವಿ ಗುಲ್ಜಾರ್, ಕಾದಂಬರಿಗಾರ್ತಿ-ಅನುವಾದಕಿ ಮೀನಾ ಕಂದಸ್ವಾಮಿ, ಇನ್ಫೊಸಿಸ್ ಸಹ ಸ್ಥಾಪಕ ನಂದನ್ ನಿಲೇಕಣಿ, ಸುಧಾ ಮೂರ್ತಿ, ಸಂಸದ ಫಿರೋಜ್ ವರುಣ್ ಗಾಂಧಿ... ಈ ಎಲ್ಲರ ವಿಚಾರಧಾರೆ ನೋಡಲು-ಕೇಳಲು ಸಾಹಿತ್ಯೋತ್ಸವ ಅವಕಾಶ ಮಾಡಿಕೊಟ್ಟಿದೆ.

ಗುರುವಾರ ಸುಷ್ಮಾ ಸೋಮ ಅವರ ಕರ್ನಾಟಕ ಶಾಸ್ತ್ರೀಯ ಸಂಗೀತದೊಂದಿಗೆ ಉತ್ಸವ ಪ್ರಾರಂಭ. ಮೊದಲ ದಿನದ ಚಳಿಗಾಲದ ಮುಂಜಾವನ್ನು ಸಾಹಿತ್ಯೋತ್ಸವದ ಸಹ ಸ್ಥಾಪಕರಾದ ನಮಿತಾ ಗೋಖಲೆ ಹಾಗೂ ವಿಲಿಯಂ ಡಾಲ್‌ರಿಂಪಲ್ ಕಳೆಗಟ್ಟಿಸಲಿದ್ದಾರೆ. ಅದೇ ದಿನ ಅಬ್ದುಲ್‌ರಜಾಕ್ ಗುರ್ನಾ ಪ್ರಸ್ತಾವಿಕ ನುಡಿಗಳನ್ನಾಡುವರು. 350ಕ್ಕೂ ಹೆಚ್ಚು ಪರಿಣತರು ಉತ್ಸವದಲ್ಲಿ ತಮ್ಮ ಮಾತಿನ ಮಂಟಪ ಕಟ್ಟುವರು.

ನಾಲಾ ಆಧುನೀಕರಣ: ಸಿ.ಎಂ–ಎಂ.ಬಿ.ಪಾಟೀಲ ವಾಕ್ಸಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾರಾಯಣಪುರ ಎಡದಂಡೆ ಕಾಲುವೆಯ ಎನ್‌ಎಲ್‌ಬಿಸಿ ಆಧುನೀಕರಣ ಯೋಜನೆ ಯಾರ ಕಾಲದಲ್ಲಿ ಆರಂಭಿಸಿದ್ದು ಎಂಬ ಬಗ್ಗೆ ಬಿಜೆಪಿ ಮತ್ತು ಕಾಂಗ್ರೆಸ್ ಮಧ್ಯೆ ವಾಕ್ಸಮರ ಆರಂಭವಾಗಿದೆ.

ಪ್ರಧಾನಮಂತ್ರಿ ನರೇಂದ್ರಮೋದಿ ಅವರು ಗುರುವಾರ ಈ ಯೋಜನೆಯನ್ನು ಉದ್ಘಾಟಿಸಲಿದ್ದಾರೆ. ಇದರ ಬೆನ್ನಲ್ಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಶಾಸಕ ಎಂ.ಬಿ.ಪಾಟೀಲ ಅವರ ಮಧ್ಯೆ ಟ್ವೀಟ್ ಸಮರವೂ ನಡೆದಿದೆ. ಬೊಮ್ಮಾಯಿ, ತಾವು ನೀರಾವರಿ ಸಚಿವರಾಗಿದ್ದಾಗ ಈ ಯೋಜನೆ ಆಧುನಿಕರಣಗೊಳಿಸುವುದಕ್ಕೆ ಸಂಬಂಧಿಸಿದ ಸಭೆಗಳ ನಡಾವಳಿಗಳ ದಾಖಲೆ ಬಿಡುಗಡೆ ಮಾಡಿದ್ದಾರೆ.

ಬೊಮ್ಮಾಯಿ ಹೇಳಿದ್ದೇನು: '2011-12 ನೇ ಸಾಲಿನಲ್ಲಿ ನ್ಯಾಷನಲ್ ವಾಟರ್ ಮಿಷನ್ ಅಡಿಯಲ್ಲಿ ಅಂದಿನ ಬಿಜೆಪಿ ಸರ್ಕಾರ ಎನ್‌ಎಲ್‌ಬಿಸಿ ಆಧುನಿಕ ಯೋಜನೆಗೆ ಅನುಮೋದನೆ ಪಡೆದಿತ್ತು. ಇದು ಬಿಜೆಪಿ ಸರ್ಕಾರದ ಕನಸಿನ ಯೋಜನೆಯಾಗಿತ್ತು. ಆದರೆ, 2014–15 ರವರೆಗೆ ಸಿದ್ದರಾಮಯ್ಯ ಸರ್ಕಾರ, ಕೇಂದ್ರದ ಯುಪಿಎ ಸರ್ಕಾರದಿಂದ ಯಾವುದೇ ಧನ ಸಹಾಯ ಪಡೆಯುವಲ್ಲಿ ವಿಫಲವಾಗಿತ್ತು' ಎಂದು ಬೊಮ್ಮಾಯಿ ಅವರು ಟ್ವೀಟ್ ಮಾಡಿದ್ದಾರೆ.

ಕೇಂದ್ರದಲ್ಲಿ ಮೋದಿ ಸರ್ಕಾರ ಬಂದ ನಂತರ 2015 ರಲ್ಲಿ ಎನ್‌ಎಲ್‌ಬಿಸಿ-ಇಆರ್‌ಎಂ ಯೋಜನೆಯನ್ನು ಪಿಎಂಕೆಎಸ್‌ವೈ ಯೋಜನೆಯಡಿ ಪರಿಗಣಿಸಿ ಯೋಜನೆಗೆ ₹1,000 ಕೋಟಿ ಸಹಾಯಧನ ನೀಡಿದೆ. ಸ್ಕಾಡಾ 2 ನೇ ಹಂತದ ಬಹುತೇಕ ಕಾಮಗಾರಿ ಬಿಜೆಪಿ ಸರ್ಕಾರದಲ್ಲಿಯೇ ಅನುಷ್ಠಾನಗೊಂಡಿದೆ ಎಂದಿದ್ದಾರೆ.

ಎಂ.ಬಿ.ಪಾಟೀಲ ಹೇಳಿದ್ದೇನು:? ಸ್ಕಾಡಾ 2 ನೇ ಹಂತ ಸಮ್ಮಿಶ್ರ ಸರ್ಕಾರದಲ್ಲಿ ಆರಂಭಿಸಿದ್ದು. ಬಿಜೆಪಿ ಸರ್ಕಾರ ಯಾವುದೇ ನಿರ್ಣಾಯಕ ಅಭಿವೃದ್ಧಿ ಮಾಡದೇ ಇದ್ದರೂ ಹಿಂದಿನ ಸರ್ಕಾರದ ಕೆಲಸಗಳಿಗೆ ಮೈಲೇಜ್ ಪಡೆಯಲು ಹಿಂಜರಿಯುವುದಿಲ್ಲ ಎಂದು ಶಾಸಕ ಎಂ.ಬಿ.ಪಾಟೀಲ ಟ್ವೀಟ್ ಮಾಡಿದ್ದಾರೆ.

'ನಾನು ಜಲಸಂಪನ್ಮೂಲ ಸಚಿವನಾಗಿದ್ದಾಗ 2014 ರಲ್ಲಿ ಆರಂಭಿಸಿ 2017 ರಲ್ಲಿ ಕಾರ್ಯರೂಪಕ್ಕೆ ತಂದ ನನ್ನ ಕನಸಿನ ಸ್ಕಾಡಾ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸುತ್ತಿರುವುದು ಹೆಮ್ಮೆ ತಂದಿದೆ' ಎಂದಿದ್ದಾರೆ.


ರಾಮನಗರ ಜಿಲ್ಲಾ ಕಾರಾಗೃಹದ ಹೊರಗೆ ಮೃತ್ಯುಂಜಯ ಸ್ವಾಮೀಜಿಗೆ ಸೇಬಿನ ಹಾರ ಹಾಕಿ ಬರಮಾಡಿಕೊಂಡ ಭಕ್ತರು

ಕಾರಾಗೃಹದಿಂದ ಹೊರ ಬಂದ ಆರೋಪಿ ಸ್ವಾಮೀಜಿಗೆ ಭರ್ಜರಿ ಸ್ವಾಗತ

ರಾಮನಗರ: ಬಂಡೆಮಠದ ಬಸವಲಿಂಗ ಸ್ವಾಮೀಜಿ ಆತ್ಮಹತ್ಯೆ ಪ್ರಕರಣದ ಮೊದಲ ಆರೋಪಿ ಕಣ್ಣೂರು ಮಠದ ಮೃತ್ಯುಂಜಯ ಸ್ವಾಮೀಜಿ ಬುಧವಾರ ಸಂಜೆ ಜಾಮೀನಿನ ಮೇಲೆ ಜೈಲಿನಿಂದ ಹೊರ ಬಂದಿದ್ದಾರೆ. ಭಕ್ತರು ಅವರಿಗೆ ಹಾರ ಹಾಕಿ ಬರಮಾಡಿಕೊಂಡಿದ್ದಾರೆ.

ರಾಮನಗರ ಜಿಲ್ಲಾ ಕಾರಾಗೃಹದಿಂದ ಅವರು ಹೊರ ಬರುತ್ತಿದ್ದಂತೆಯೇ ಭಕ್ತರು ಸೇಬಿನ ಹಾರ ಹಾಕಿ ಅದ್ದೂರಿ ಸ್ವಾಗತ ನೀಡಿ ಸಂಭ್ರಮದಿಂದ ಕರೆದೊಯ್ದರು.

ಕಳೆದ ಅಕ್ಟೋಬರ್ 24ರಂದು ಬಂಡೆಮಠದ ಶ್ರೀಗಳು ಆತ್ಮಹತ್ಯೆ ಮಾಡಿಕೊಂಡಿದ್ದು, ಅವರ ಸಾವಿಗೆ ಪ್ರಚೋದನೆ ನೀಡಿದ ಆರೋಪದ ಮೇಲೆ ಮೃತ್ಯುಂಜಯ ಸ್ವಾಮೀಜಿ ಬಂಧನಕ್ಕೆ ಒಳಗಾಗಿದ್ದರು.

ಎರಡೂವರೆ ತಿಂಗಳ ಜೈಲುವಾಸದ ಬಳಿಕ ಅವರಿಗೆ ಹೈಕೋರ್ಟ್ ಇದೇ 13ರಂದು ಜಾಮೀನು ಮಂಜೂರು ಮಾಡಿತ್ತು.

27ಕ್ಕೆ ಅಮಿತ್ ಶಾ, 28ಕ್ಕೆ ಗಡ್ಕರಿ ಹುಬ್ಬಳ್ಳಿಗೆ ಭೇಟಿ

ಹುಬ್ಬಳ್ಳಿ: 'ವಿದ್ಯಾನಗರದಲ್ಲಿರುವ ಕೆಎಲ್‌ಇ ಸಂಸ್ಥೆಯ ಬಿ.ಬಿ. ಭೂಮರಡ್ಡಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಕಾಲೇಜಿನ ಅಮೃತ ಮಹೋತ್ಸವ ಹಾಗೂ ಸಂಸ್ಥೆಯ ಕಾರ್ಯಾಧ್ಯಕ್ಷ ಡಾ. ಪ್ರಭಾಕರ ಕೋರೆ ಅವರ 75ನೇ ವರ್ಷದ ಜನ್ಮದಿನದ ಅಂಗವಾಗಿ ಜ. 27ರಿಂದ 29ರವರೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, 27ರಂದು ನಡೆಯುವ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾಗವಹಿಸಲಿದ್ದಾರೆ' ಎಂದು ಎಂದು ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ. ಅಶೋಕ ಶೆಟ್ಟರ್ ತಿಳಿಸಿದರು.

'ಅಮೃತ ಮಹೋತ್ಸವದ ಅಂಗವಾಗಿ ಕಾಲೇಜಿನ ಆವರಣದಲ್ಲಿ ₹25 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಒಳಾಂಗಣ ಕ್ರೀಡಾಂಗಣವನ್ನು ಅಮಿತ್ ಶಾ ಉದ್ಘಾಟಿಸಲಿದ್ದಾರೆ. 28ರಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಸಮಾರಂಭಗಳಲ್ಲಿ ಪಾಲ್ಗೊಳ್ಳಲಿದ್ದಾರೆ' ಎಂದು ಕಾಲೇಜಿನಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಜ. 29ರಂದು ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಮಾಗಮ ಕಾರ್ಯಕ್ರಮವಿದ್ದು, ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾ ಮೂರ್ತಿ ಹಾಗೂ '3 ಈಡಿಯಟ್ಸ್' ಸಿನಿಮಾ ಖ್ಯಾತಿಯ ಎಂಜಿನಿಯರ್ ಸೋನಂ ವಾಂಗ್ಚುಕ್ ಭಾಗವಹಿಸಲಿದ್ದಾರೆ ಎಂದರು.

ಪಿಎಸ್‌ಐ ಹಗರಣ: ಎಸ್‌ಐ ಜಾಮೀನು ಅರ್ಜಿ ವಜಾ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಹಗರಣದಲ್ಲಿ ಇಬ್ಬರು ಅಭ್ಯರ್ಥಿಗಳಿಂದ ತಲಾ ₹ 30 ಲಕ್ಷದಂತೆ ₹ 60 ಲಕ್ಷ ಪಡೆದು ಅಕ್ರಮ ಎಸಗಿದ ಆರೋಪದಲ್ಲಿ ಬಂಧನಕ್ಕೊಳಗಾಗಿರುವ ಬ್ಯಾಡರಹಳ್ಳಿ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಕೆ. ಹರೀಶ್‌ಗೆ ಹೈಕೋರ್ಟ್ ಜಾಮೀನು ನಿರಾಕರಿಸಿದೆ.

ನ್ಯಾಯಾಂಗ ಬಂಧನದಲ್ಲಿರುವ ಪ್ರಕರಣದ ಆರೋಪಿ ಕೆ. ಹರೀಶ್ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಎಂ.ಜಿ. ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಸಿಐಡಿ ಪರ ವಾದ ಮಂಡಿಸಿದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್, 'ಈ ಪ್ರಕರಣವು ಮಧ್ಯಪ್ರದೇಶದ ವ್ಯಾಪಂ ಹಾಗೂ ಬಿಹಾರದ ಎಸ್ಸೆಸ್ಸೆಲ್ಸಿ ಟಾಪರ್‌ಗಳ ಹಗರಣದ ಮಾದರಿಯಲ್ಲಿದೆ. ಇದರಲ್ಲಿ ಪ್ರಭಾವಿ ಸಾರ್ವಜನಿಕ ಸೇವಕರು, ಹಿರಿಯ ಐಪಿಎಸ್ ಅಧಿಕಾರಿಗಳು ಶಾಮೀಲಾಗಿದ್ದಾರೆ. ತನಿಖೆ ಇನ್ನೂ ಮುಂದುವರಿದಿದೆ. ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಗಳು ಕೈಸೇರಬೇಕಿದೆ. ಕಾಲ್ ರೆಕಾರ್ಡ್ಸ್ ವಿವರಗಳನ್ನು ಪರಿಶೀಲಿಸಬೇಕಿದೆ. ಕೆಲವು ಆರೋಪಿಗಳು ತಲೆ ಮರೆಸಿಕೊಂಡಿದ್ದಾರೆ. ಈ ಹಂತದಲ್ಲಿ ಜಾಮೀನು ನೀಡಿದರೆ ಸಾಕ್ಷ್ಯ ನಾಶಪಡಿಸುವ ಸಾಧ್ಯತೆ ಇದೆ. ಆದ್ದರಿಂದ, ಜಾಮೀನು ಅರ್ಜಿ ವಜಾಗೊಳಿಸಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಜಾಮೀನು ನಿರಾಕರಿಸಿತು.

ಪ್ರತ್ಯೇಕ ಪ್ರಕರಣ: ಆರು ಮಂದಿ ಸಾವು

ಪ್ರಜಾವಾಣಿ ವಾರ್ತೆ

ವಿಜಯನಗರ/ಬೀದರ್: ಎರಡು ಜಿಲ್ಲೆಗಳಲ್ಲಿ ಬುಧವಾರ ಸಂಭವಿಸಿದ ಪ್ರತ್ಯೇಕ ಪ್ರಕರಣಗಳಲ್ಲಿ ಆರು ಮಂದಿ ಮೃತಪಟ್ಟಿದ್ದಾರೆ.

ಬೀದರ್ ಜಿಲ್ಲೆಯ ಬಾಲ್ಕಿ ತಾಲ್ಲೂಕಿನ ನೀಲಮನಹಳ್ಳಿ ತಾಂಡಾದಲ್ಲಿ ಮೀರಾಬಾಯಿ ದಯಾನಂದ (25) ತಮ್ಮ ಇಬ್ಬರು ಪುತ್ರಿಯರನ್ನು ಕೊಂದು ತಾವೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'2 ವರ್ಷದ ಪುತ್ರಿ ನಚ್ಚುಗೆ ನೇಣು ಬಿಗಿದು ಮತ್ತು 6 ತಿಂಗಳ ಪುತ್ರಿ ಗೋಲುವಿನ ಕತ್ತು ಹಿಸುಕಿ ಕೊಲೆ ಮಾಡಿದ ಬಳಿಕ ಮೀರಾಬಾಯಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೀರಾಬಾಯಿ ಮಾನಸಿಕ ಅಸ್ವಸ್ಥೆಯಾಗಿದ್ದರು ಎಂದು ಆಕೆಯ ತಂದೆ ಲಕ್ಷ್ಮಣ ಮಾಹಿತಿ ನೀಡಿದ್ದಾರೆ' ಎಂದು ಧನ್ನೂರು ಠಾಣೆ ಪೊಲೀಸರು ತಿಳಿಸಿದ್ದಾರೆ.

ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ನೀಲಗುಂದ ಗ್ರಾಮದಲ್ಲಿ ಇಬ್ಬರು ಹೆಣ್ಣು ಮಕ್ಕಳು ಮತ್ತು ತಾಯಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನೀಲಗುಂದ ಗ್ರಾಮದ ಭವ್ಯ (40) ಅವರ ಮಕ್ಕಳಾದ ಕಾವ್ಯ (17), ಅಮೂಲ್ಯ (15) ಮೃತಪಟ್ಟವರು.

ಒಂದು ಕೋಣೆಯಲ್ಲಿ ಭವ್ಯ ಮತ್ತು ಅಮೂಲ್ಯ, ಇನ್ನೊಂದರಲ್ಲಿ ಕಾವ್ಯ ಮೃತದೇಹ ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಕಾವ್ಯ ಹರಪನಹಳ್ಳಿ ಸರ್ಕಾರಿ ಕಿರಿಯರ ಕಾಲೇಜಿನಲ್ಲಿ ಪ್ರಥಮ ಪಿಯುಸಿ, ಅಮೂಲ್ಯ ನೀಲಗುಂದ ಪ್ರೌಢಶಾಲೆಯಲ್ಲಿ 9ನೇ ತರಗತಿಯ ವಿದ್ಯಾರ್ಥಿನಿಯಾಗಿದ್ದರು.

ನಂದಿಬೇವೂರು ಗ್ರಾಮದ ಭವ್ಯ ಅವರಿಗೆ 19 ವರ್ಷಗಳ ಹಿಂದೆ ನೀಲಗುಂದ ಗ್ರಾಮದ ಹರಿಪುರದ ಈರಣ್ಣ ಅವರಿಗೆ ಕೊಟ್ಟು ವಿವಾಹ ಮಾಡಲಾಗಿತ್ತು.

'ಭವ್ಯ ಕೆಲವು ವರ್ಷಗಳಿಂದ ಖಿನ್ನತೆಯಿಂದ ಬಳಲುತ್ತಿದ್ದರು. ಪತಿ ಈರಣ್ಣ ಮದ್ಯವ್ಯಸನಿಯಾಗಿದ್ದು, ಪದೇ ಪದೇ ಅನಾರೋಗ್ಯಕ್ಕೆ ಒಳಗಾಗುತ್ತಿದ್ದರು. ಇದು ಭವ್ಯ ಅವರನ್ನು ಮತ್ತಷ್ಟು ಖಿನ್ನತೆಗೆ ತಳ್ಳಿತು. ಮನೆಯಲ್ಲಿ ಯಾರೂ ಇಲ್ಲದಾಗ ಮಕ್ಕಳೊಂದಿಗೆ ನೇಣು ಹಾಕಿಕೊಂಡಿದ್ದಾರೆ. ಭವ್ಯ ಅವರ ತಾಯಿ ಪಾರ್ವತಮ್ಮ ಅವರು ಮನೆಗೆ ಬಂದು ನೋಡಿದಾಗ ಘಟನೆ ಬೆಳಕಿಗೆ ಬಂದಿದೆ. ನಮ್ಮ ಸಾವಿಗೆ ನಾವೇ ಕಾರಣ ಎಂದು ಬರೆದಿರುವ ಪುಸ್ತಕ ಸ್ಥಳದಲ್ಲಿ ದೊರೆತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಆಜಾದ್ ಕಾಶ್ಮೀರ' ಕುರಿತ ಪ್ರಶ್ನೆ: ವರದಿ ಕೇಳಿದ ಸಚಿವಾಲಯ

ನವದೆಹಲಿ (ಪಿಟಿಐ): 10ನೇ ತರಗತಿಯ ಮಾದರಿ ಪ್ರಶ್ನೆಪತ್ರಿಕೆಯಲ್ಲಿ ವಿದ್ಯಾರ್ಥಿಗಳಿಗೆ ನಕ್ಷೆಯಲ್ಲಿ 'ಆಜಾದ್ ಕಾಶ್ಮೀರ' ಗುರುತಿಸುವಂತೆ ಕೇಳಿರುವ ಬಗ್ಗೆ ವಸ್ತುಸ್ಥಿತಿ ವರದಿ ನೀಡುವಂತೆ ಕೇಂದ್ರ ಶಿಕ್ಷಣ ಸಚಿವಾಲಯವು ಪಶ್ಚಿಮ ಬಂಗಾಳ ಸರ್ಕಾರಕ್ಕೆ ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ.

'ಪಶ್ಚಿಮ ಬಂಗಾಳ ಪ್ರೌಢ ಶಿಕ್ಷಣ ಮಂಡಳಿಯ 10ನೇ ತರಗತಿಯ ಪ್ರಶ್ನೆ ಪತ್ರಿಕೆಯಲ್ಲಿ ಈ ಬಗ್ಗೆ ಪ್ರಶ್ನೆ ಕೇಳಿರುವುದನ್ನು ಸಚಿವಾಲಯವು ಗಂಭೀರವಾಗಿ ಪರಿಗಣಿಸಿದೆ' ಎಂದು ತಿಳಿಸಿವೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಜೀವನದಲ್ಲಿ ಯಶಸ್ಸು ಗಳಿಸಲು ನಿಮಗೆ ಬೇಕಾಗಿರುವುದು ಶಿಕ್ಷಣವೇ ವಿನಾ ಸಾಕ್ಷರತೆ ಮತ್ತು ಪದವಿಗಳಲ್ಲ.

–ಮುನ್ಷಿ ಪ್ರೇಮ್‌ಚಂದ್

ಜನಪ್ರತಿನಿಧಿಗಳ ಬಾಯಿತುರಿಕೆ ಮಾತು ಇಷ್ಟು ಲಘುವಾದರೆ ಹೇಗೆ?

ರಾಜಕೀಯ ಎದುರಾಳಿಗಳನ್ನು ಹಳಿಯಲು ರಾಜಕಾರಣಿಗಳು ಬಳಸುತ್ತಿರುವ ಭಾಷೆ ಕೀಳು ಮಟ್ಟದ್ದಾಗಿದ್ದು, ರಾಜ್ಯದ ಸಂಸದೀಯ ವ್ಯವಸ್ಥೆಯ ನೈತಿಕ ಪತನದ ಸಂಕೇತದಂತಿದೆ. ಜನಪ್ರತಿನಿಧಿಯ ಮಾತುಗಳು ಸಾರ್ವಜನಿಕ ಸಭ್ಯತೆಯಿಂದ ಕೂಡಿರಬೇಕು ಹಾಗೂ ನಾಗರಿಕರಿಗೆ ಮಾದರಿಯಾಗಿರಬೇಕು. ಆದರೆ, ರಾಜ್ಯದ ರಾಜಕಾರಣಿಗಳು ಬೈದಾಡಿಕೊಳ್ಳಲು ಬಳಸುತ್ತಿರುವ ಭಾಷೆ ಕೊಳಕು ಅಭಿರುಚಿಯದ್ದಾಗಿದೆ ಹಾಗೂ ಅವರು ಪ್ರತಿನಿಧಿಸುವ ಸ್ಥಾನಗಳ ಮರ್ಯಾದೆ ಕಳೆಯುವಂತಿದೆ. ‘ಹೊಟ್ಟೆಪಾಡಿಗೆ ಮೈಮಾರಿಕೊಂಡ ಮಹಿಳೆಗೆ ವೇಶ್ಯೆ ಎಂದು ಕರೆಯುತ್ತೇವೆ. ತಮ್ಮನ್ನು ತಾವು ಮಾರಿಕೊಂಡು ಪಕ್ಷಾಂತರ ಮಾಡಿದ ಶಾಸಕರನ್ನು ಏನೆಂದು ಕರೆಯುತ್ತೀರಿ’ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಅವರು ಸಾರ್ವಜನಿಕ ಸಮಾರಂಭವೊಂದರಲ್ಲಿ ಪ್ರಶ್ನಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಸಚಿವರಾದ ಬಿ.ಸಿ. ಪಾಟೀಲ ಹಾಗೂ ಮುನಿರತ್ನ ಅವರೂ ಹಗುರ ಮಾತುಗಳನ್ನು ಆಡಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ‘ಕ್ರಿಯೆ ಮತ್ತು ಪ್ರತಿಕ್ರಿಯೆ’ಯ ಪರಿಕಲ್ಪನೆಯ ರೂಪದಲ್ಲಿ ನೋಡಬಹುದಾದ ಈ ಬೈಗುಳದ ಪೈಪೋಟಿಯಲ್ಲಿ, ಜವಾಬ್ದಾರಿಯುತ ಸ್ಥಾನದಲ್ಲಿರುವ ಮೂವರೂ ನಾಲಗೆಯನ್ನು ಸಡಿಲಬಿಟ್ಟಿದ್ದಾರೆ. ಸಾರ್ವಜನಿಕವಾಗಿ ತಮ್ಮ ವ್ಯಕ್ತಿತ್ವವನ್ನು ಬೆತ್ತಲು ಮಾಡಿಕೊಳ್ಳುವುದರ ಜೊತೆಗೆ, ವೇಶ್ಯಾವೃತ್ತಿಯಲ್ಲಿ ಇರುವವರಿಗೂ ಅವಮಾನ ಎಸಗಿದ್ದಾರೆ. ಬಾಯಿತುರಿಕೆಯ ಈ ಭಾಷೆ ನಮ್ಮ ರಾಜಕಾರಣಿಗಳ ಲಿಂಗಸಂವೇದನೆ ಜಡ್ಡುಗಟ್ಟಿರುವುದನ್ನು ಸೂಚಿಸುವಂತಿದೆ. ವೇಶ್ಯಾವೃತ್ತಿಯ ಹಿನ್ನೆಲೆಯಲ್ಲಿ ಇರಬಹುದಾದ ಬಡತನ, ಹಸಿವು, ಅಸಹಾಯಕತೆ ಹಾಗೂ ದೇಹಶೋಷಣೆಯ ಸಾಧ್ಯತೆಗಳ ಅರಿವು ಈ ನಾಯಕರಿಗೆ ಇದ್ದಂತಿಲ್ಲ. ಹೆಣ್ಣನ್ನು ಭೋಗದ ಸರಕನ್ನಾಗಿ ನೋಡುವ ಅಧಿಕಾರ ರಾಜಕಾರಣದ ನಿರ್ಲಜ್ಜೆಯನ್ನು ಇಂಥ ಮಾತುಗಳ ಹಿಂದೆ ಗುರುತಿಸಬಹುದು. ಹರಿಪ್ರಸಾದ್ ಅವರು ವಿಧಾನ ಪರಿಷತ್ತಿಗೆ ಆಯ್ಕೆಯಾಗಿರುವುದರ ಬಗ್ಗೆ ಹೀನಾಯವಾಗಿ ಮಾತನಾಡಿರುವ ಬಿ.ಸಿ. ಪಾಟೀಲ, ‘ಹಿಂಬಾಗಿಲಿನಿಂದ ಬಂದ ಇವರನ್ನು ಪಿಂಪ್ ಎನ್ನಬಹುದೇ’ ಎಂದು ಪ್ರಶ್ನಿಸಿದ್ದಾರೆ. ಅವರ ಮಾತು ಅಸೂಕ್ಷ್ಮವಾದುದು ಹಾಗೂ ವಿಧಾನ ಪರಿಷತ್ತಿನ ಘನತೆಯನ್ನು ಅವಮಾನಿಸುವಂತಹದ್ದು. ಸಚಿವರೇ ಹೀಗೆ ಲಘುವಾಗಿ ಮಾತನಾಡುವುದಾದರೆ, ಜನಸಾಮಾನ್ಯರಿಗೆ ಸದನದ ಬಗ್ಗೆ, ಸದನದ ಸದಸ್ಯರ ಬಗ್ಗೆ ಗೌರವ ಉಳಿಯುವುದು ಹೇಗೆ ಸಾಧ್ಯ? ಮತದಾರರು ತಮ್ಮ ಬಗ್ಗೆ ಏನೆಂದುಕೊಳ್ಳಬಹುದು ಎಂಬ ಕನಿಷ್ಠ ಅಳುಕು ಕೂಡ ಜನಪ್ರತಿನಿಧಿಗಳನ್ನು ಕಾಡುವುದಿಲ್ಲವೇ?



ನೈತಿಕ ಶಿಕ್ಷಣದ ತುರ್ತು ಇರುವುದು ಯಾರಿಗೆ ಎನ್ನುವ ಆತ್ಮಾವಲೋಕನ ಈಗ ಎಲ್ಲ ರಾಜಕೀಯ ಪಕ್ಷಗಳಿಗೂ ಅಗತ್ಯ

ಸಚಿವ ಮುರುಗೇಶ ನಿರಾಣಿ ಹಾಗೂ ಆಡಳಿತ ಪಕ್ಷಕ್ಕೇ ಸೇರಿದವರಾದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಜಗಳ ಬೈಗುಳದ ಹಂತ ದಾಟಿ, ತಾಕತ್ತು ಪ್ರದರ್ಶಿಸುವ ಹಾಗೂ ಪರಸ್ಪರ ಬೆದರಿಸುವ ಮಟ್ಟಕ್ಕೆ ಹೋಗಿದೆ. ನಾಲಗೆ ಕತ್ತರಿಸುವುದಾಗಿ ಸಚಿವರೊಬ್ಬರು ಹೇಳುವುದಾದರೆ, ಅವರಿಗೆ ಈ ನೆಲದ ಕಾನೂನಿನ ಬಗ್ಗೆ ಇರುವ ಬದ್ಧತೆ–ಗೌರವವನ್ನು ಸಂದೇಹಿಸಬೇಕಾಗುತ್ತದೆ. ಸಮಾಜಘಾತುಕ ಕೃತ್ಯಗಳಲ್ಲಿ ಭಾಗಿಯಾಗಿರುವ ಆರೋಪಗಳನ್ನು ಎದುರಿಸುತ್ತಿರುವ ವ್ಯಕ್ತಿಯ ಹೆಸರನ್ನು ಬೈಗುಳದ ರೂಪದಲ್ಲಿ ಬಳಸುವುದಕ್ಕೂ ಜನಪ್ರತಿನಿಧಿಗಳು ಹೇಸುತ್ತಿಲ್ಲ. ರಾಜಕಾರಣಿಗಳು ದುಡುಕಿ ಮಾತನಾಡುವುದು ಹೊಸತೇನೂ ಅಲ್ಲ. ಆದರೆ, ಸಾರ್ವಜನಿಕ ಸಭ್ಯತೆಯನ್ನು ಲೆಕ್ಕಿಸದಂತೆ ಮಾತನಾಡುವ ಚಾಳಿ ಹೆಚ್ಚಾಗುತ್ತಿರುವುದು ಕಳವಳದ ಸಂಗತಿ. ‘ಮಹಾತ್ಮ ಗಾಂಧಿ ಅವರ ಪಾದದ ದೂಳಿಗೆ ಜವಾಹರಲಾಲ್ ನೆಹರೂ ಅವರು ಸಮಾನರಾ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇತ್ತೀಚೆಗೆ ಪ್ರಶ್ನಿಸಿದ್ದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಪಾದದ ದೂಳಿಗೂ ಸಿದ್ದರಾಮಯ್ಯ ಸಮಾನರಲ್ಲ ಎಂದು ಹೇಳಿದ್ದ ಬಿ.ಎಸ್. ಯಡಿಯೂರಪ್ಪ, ರಾಹುಲ್ ಗಾಂಧಿ ಅವರನ್ನು ಬಚ್ಚಾ ಎಂದೂ ಕರೆದಿದ್ದರು. ರಾಷ್ಟ್ರನಾಯಕರನ್ನೇ ಪಾದದ ದೂಳು ಹಾಗೂ ಬಚ್ಚಾ ರೂಪದಲ್ಲಿ ನೋಡುವವರ ಕಣ್ಣಿಗೆ ಜನಸಾಮಾನ್ಯರು ಹೇಗೆ ಕಾಣಿಸಬಹುದು? ಕೊರೊನಾ ಬಾಧೆಯ ಸಂದರ್ಭದಲ್ಲಿ, ಪಡಿತರ ಅಕ್ಕಿ ಕಡಿತಗೊಳಿಸಿರುವ ಸರ್ಕಾರದ ನಿರ್ಧಾರದಿಂದ ಆತಂಕಗೊಂಡು ದೂರವಾಣಿ ಕರೆ ಮಾಡಿದ್ದ ರೈತರೊಬ್ಬರು, ‘ನಾವು ಉಪವಾಸ ಇರೋದಾ ಅಥವಾ ಸತ್ತುಹೋಗೋದಾ’ ಎಂದು ಕೇಳಿದಾಗ, ‘ಸತ್ತುಹೋದರೆ ಒಳ್ಳೆಯದು’ ಎಂದು, ಆಹಾರ ಸಚಿವರಾಗಿದ್ದ ಉಮೇಶ ಕತ್ತಿ ಅವರು ಪ್ರತಿಕ್ರಿಯಿಸಿದ್ದು ವರದಿಯಾಗಿತ್ತು. ಇಂಥ ನಡವಳಿಕೆಗಳ ಮೂಲಕ ಜನರೆದುರು ನಗೆಪಾಟಲಿಗೀಡಾಗುತ್ತಿದ್ದೇವೆ ಎನ್ನುವ ಪ್ರಜ್ಞೆ ಯಾರಿಗೂ ಇದ್ದಂತಿಲ್ಲ. ರಾಜಕಾರಣದಲ್ಲಿ ಆರೋಪ, ಪ್ರತ್ಯಾರೋಪ ಅಸಹಜವೇನಲ್ಲ. ಆದರೆ, ಈ ಮಾತುಕತೆ ಮತ್ತು ವಿರೋಧವು ತಾತ್ವಿಕ ನೆಲೆಗಟ್ಟಿನಲ್ಲಿರಬೇಕೇ ವಿನಾ ಗಂಟಲಬಲ ಅಥವಾ ದೇಹಬಲವನ್ನು ಅವಲಂಬಿಸಬಾರದು. ಸಚಿವರು, ಶಾಸಕರೇ ಕೊಳಕು ಮಾತುಗಳನ್ನಾಡಲು ನಿಂತರೆ, ಅವರ ಹಿಂಬಾಲಕರು ಹಾಗೂ ರಾಜಕೀಯ ಪಕ್ಷಗಳ ಕಾರ್ಯಕರ್ತರಿಗೆ ಲಗಾಮು ಇಲ್ಲದಂತಾಗುತ್ತದೆ. ಚುನಾವಣೆ ಸನ್ನಿಹಿತವಾಗುತ್ತಿರುವ ಸಂದರ್ಭದಲ್ಲಿ ರಾಜಕಾರಣಿಗಳ ಮಾತಿನ ವೀರಾವೇಶ ಹಾಗೂ ಕೆಸರೆರಚಾಟ ಏರುಮುಖದಲ್ಲಿದೆ. ನಾಲಗೆ ಹರಿಯಬಿಟ್ಟು ಮಾತನಾಡುವ ಮೂಲಕ ತಮ್ಮ ರಾಜಕೀಯ ಅಸ್ತಿತ್ವ ತೋರಿಸಲು ಯತ್ನಿಸುತ್ತಿರುವ ರಾಜಕಾರಣಿಗಳೂ ಇದ್ದಾರೆ. ನಾಲಗೆಯ ಮೇಲೆ ನಿಯಂತ್ರಣವಿಲ್ಲದ ಹಾಗೂ ಮಾತಿನ ಸೂಕ್ಷ್ಮ ಅರಿಯದ ಈ ಜನ, ಶಾಲಾ ಮಕ್ಕಳಿಗೆ ನೈತಿಕ ಶಿಕ್ಷಣದ ಪಠ್ಯ ಗೊತ್ತುಪಡಿಸಲು ವಿಪರೀತ ಉತ್ಸಾಹ ವ್ಯಕ್ತಪಡಿಸುತ್ತಿರುವುದು ತಮಾಷೆಯಾಗಿದೆ. ನೈತಿಕ ಶಿಕ್ಷಣದ ತುರ್ತು ಇರುವುದು ಯಾರಿಗೆ ಎನ್ನುವ ಆತ್ಮಾವಲೋಕನ ಈಗ ಎಲ್ಲ ರಾಜಕೀಯ ಪಕ್ಷಗಳಿಗೂ ಅಗತ್ಯ.

ದಿನದ ಟ್ವೀಟ್

ಎಲ್ಲರಿಗೂ ಅನ್ವಯವಾಗಲಿ



ಹೊಸ ಆದಾಯ ತೆರಿಗೆ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಂಡ ತೆರಿಗೆದಾರರಿಗೆ ಈ ಬಾರಿಯ ಬಜೆಟ್‌ನಲ್ಲಿ ತೆರಿಗೆ ಪ್ರಮಾಣ ಕಡಿಮೆಯಾಗಲಿದೆ ಎಂದು ಸರ್ಕಾರದ ಮೂಲಗಳು ಹೇಳಿವೆ. ಹೊಸ ವ್ಯವಸ್ಥೆಯಲ್ಲಿ, ಉಳಿತಾಯ ಅಥವಾ ಹೂಡಿಕೆ ಪ್ರೋತ್ಸಾಹಿಸುವ ಅಂಶಗಳಿಲ್ಲ. ಇದು, ಈಗಾಗಲೇ ಸಾಲ ಹಾಗೂ ಕ್ರೆಡಿಟ್ ಕಾರ್ಡ್ ಬಾಕಿ ಹೊಂದಿರುವ ಯುವಪೀಳಿಗೆಯ ಪಾಲಿಗೆ ಕೆಟ್ಟದ್ದು. ಎಲ್ಲ ತೆರಿಗೆದಾರರ ತೆರಿಗೆ ಪ್ರಮಾಣವನ್ನೂ ಕಡಿಮೆ ಮಾಡಿ.

ಚಿರಾಗ್ ಚೌಹಾಣ್, ಚಾರ್ಟರ್ಡ್ ಅಕೌಂಟೆಂಟ್

ಕಿಡಿನುಡಿ



ಹಣದುಬ್ಬರದ ಪ್ರಮಾಣ ಇಳಿಕೆಯಾಗಿದ್ದರೂ, ಬೆಲೆಯು ಹೆಚ್ಚಿನ ಮಟ್ಟದಲ್ಲಿಯೇ ಇದೆ. ಏಕೆಂದರೆ ಬೆಲೆ ಇಳಿಕೆ ಕಾಣುತ್ತಿಲ್ಲ. ಹಣದುಬ್ಬರ ಪ್ರಮಾಣ ಕಡಿಮೆಯಾಗಿದೆ, ಅಷ್ಟೇ. ಬೆಲೆ ಹೆಚ್ಚಾಗಿದೆ. ಇದರ ಪರಿಣಾಮವು ಕುಟುಂಬಗಳ ಮೇಲೆ ಹಾಗೂ ಖರೀದಿ ಶಕ್ತಿಯ ಮೇಲೆ ಎಷ್ಟಿದೆ ಎಂಬುದು ದೇಶದಿಂದ ದೇಶಕ್ಕೆ ವ್ಯತ್ಯಾಸವಾಗುತ್ತದೆ. ಹಣದುಬ್ಬರ ತಗ್ಗಿಸಲು ಜಾರಿಗೆ ತರುವ ಯಾವುದೇ ಅರ್ಥಪೂರ್ಣ ಕ್ರಮದ ಪರಿಣಾಮವಾಗಿ ನಿರುದ್ಯೋಗ ಹೆಚ್ಚುವ ಸಾಧ್ಯತೆ ಇರುತ್ತದೆ.

ಗೀತಾ ಗೋಪಿನಾಥ್, ಉಪ ವ್ಯವಸ್ಥಾಪಕ ನಿರ್ದೇಶಕಿ, ಅಂತರರಾಷ್ಟ್ರೀಯ ಹಣಕಾಸು ನಿಧಿ

25 ವರ್ಷಗಳ ಹಿಂದೆ

ಸೋಮವಾರ, 19-1-1998

ಮುಖ್ಯ ನ್ಯಾಯಮೂರ್ತಿ ಪುನ್ನಿ ಪ್ರಮಾಣವಚನ

ನವದೆಹಲಿ, ಜ. 18– ಸುಪ್ರೀಂ ಕೋರ್ಟಿನ 28ನೇ ಮುಖ್ಯ ನ್ಯಾಯಮೂರ್ತಿಯಾಗಿ, ಮದನ್ ಮೋಹನ್ ಪುನ್ನಿ ಅವರು ಇಂದು ಪ್ರಮಾಣವಚನ ಸ್ವೀಕರಿಸಿದರು.

ರಾಷ್ಟ್ರಪತಿ ಭವನದ ಅಶೋಕಾ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ಕೆ.ಆರ್.ನಾರಾಯಣನ್ ಅವರು ಪುನ್ನಿ ಅವರಿಗೆ ಪ್ರಮಾಣವಚನ ಬೋಧಿಸಿದರು.

ದಳಕ್ಕೆ ಜಾಲಪ್ಪ ರಾಜೀನಾಮೆ

ನವದೆಹಲಿ, ಜ. 18– ಕಳೆದ ಕೆಲವು ವಾರಗಳಿಂದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರೊಂದಿಗೆ ವೈಮನಸ್ಯ ಹೊಂದಿದ್ದ ಕೇಂದ್ರ ಜವಳಿ ಸಚಿವ ಆರ್.ಎಲ್.ಜಾಲಪ್ಪ ಅವರು ಇಂದು ಅಂತಿಮವಾಗಿ ಜನತಾದಳದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು.

ಇಂದು ಬೆಳಿಗ್ಗೆ ಇಲ್ಲಿ ಜನತಾದಳದ ಅಧ್ಯಕ್ಷ ಶರದ್ ಯಾದವ್ ಅವರನ್ನು ಭೇಟಿ ಮಾಡಿ ರಾಜೀನಾಮೆ ಪತ್ರವನ್ನು ಸಲ್ಲಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 19-1-1973

ಭದ್ರಾವತಿ ಕಾರ್ಖಾನೆ ಸ್ವರ್ಣೋತ್ಸವ ಆರಂಭ

ಭದ್ರಾವತಿ, ಜ. 18– ಸ್ಥಳೀಯ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಸುವರ್ಣ ಮಹೋತ್ಸವವು ಇಂದು ಬೆಳಿಗ್ಗೆ ಇಲ್ಲಿ ವಿಧ್ಯುಕ್ತವಾಗಿ ಆರಂಭವಾಯಿತು.

ಕಾರ್ಖಾನೆಯ ಎಲ್ಲ ಅಧಿಕಾರಿಗಳೂ ಮುಖ್ಯದ್ವಾರದ ಬಳಿ ಸೇರಿದ, ಈಗ ದಕ್ಷಿಣ ಭಾರತದಲ್ಲಿಯೇ ಅತಿ ದೊಡ್ಡ ಉಕ್ಕಿನ ಕಾರ್ಯಾಗಾರವಾಗಿರುವ ಈ ಕಾರ್ಖಾನೆ ಈ ಮಟ್ಟ ಮುಟ್ಟಲು ತ್ಯಾಗ ಮಾಡಿದ ಎಲ್ಲರಿಗೂ ನಮನ ಸಲ್ಲಿಸಿದರು.

ರಾಷ್ಟ್ರಪತಿ ಆಳ್ವಿಕೆಯಲ್ಲಿ ಆಂಧ್ರ

ನವದೆಹಲಿ, ಜ. 18– ಆಂಧ್ರ ಪ್ರದೇಶವು ಇಂದಿನಿಂದ ರಾಷ್ಟ್ರಪತಿ ಆಳ್ವಿಕೆಗೆ ಒಳಪಟ್ಟಿತು. ಪ್ರತ್ಯೇಕತಾವಾದಿ ಚಳವಳಿಯಿಂದ ಕುಸಿದಿದ್ದ ಕಾನೂನು, ಶಿಸ್ತು ಮತ್ತು ಶಾಂತಿ ಪರಿಸ್ಥಿತಿಯನ್ನು ಎದುರಿಸುವುದರಲ್ಲಿ ರಾಜ್ಯ ಸರ್ಕಾರ ವಿಫಲಗೊಂಡಿದ್ದರಿಂದ ಈ ಕ್ರಮ ಅನಿವಾರ್ಯವಾಯಿತು.

ನೈತಿಕವಾಗಿ ಸ್ವತಃ ಸುಧಾರಿಸಿಕೊಳ್ಳಬೇಕಾದವರಿಂದ ನೀತಿ ಪಾಠದ ಸಲಹೆ ಕೇಳಿದೊಡೆಂತಯ್ಯಾ?

ನೈತಿಕ ಶಿಕ್ಷಣ, ಹೀಗೊಂದು ಮಹಾಮೌನ



ಅನುರಣನ

ನಾರಾಯಣ ಎ.

ಶಾಲೆಯಲ್ಲಿ ಮಕ್ಕಳು ಬಸವಣ್ಣನವರ ಶ್ರೇಷ್ಠ ಬದುಕಿನ ಬಗ್ಗೆ ತಿಳಿದುಕೊಂಡು, ಅವರ ವಚನದಲ್ಲಿರುವ ‘ಹುಸಿಯ ನುಡಿಯಲು ಬೇಡ, ಅನ್ಯರಿಗೆ ಅಸಹ್ಯಪಡಬೇಡ’ ಎಂಬಿತ್ಯಾದಿ ನುಡಿಗಳನ್ನು ಓದಿ ನೈತಿಕ ಮೌಲ್ಯಗಳನ್ನು ಕಲಿಯುತ್ತಾರೆ. ಆದರೆ ಅದೇ ಪಠ್ಯಪುಸ್ತಕದಲ್ಲಿ, ಸಾರ್ವಜನಿಕ ಭಾಷಣಗಳಲ್ಲಿ ಆಕರ್ಷಕವಾಗಿ ಸುಳ್ಳು ಹೇಳುತ್ತಾ, ‘ಅನ್ಯರ ಕುರಿತು ಅಸಹ್ಯಪಡಬೇಕು’ ಎನ್ನುವ ಸಂದೇಶವನ್ನು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಬಿತ್ತುವ ವ್ಯಕ್ತಿಯೋರ್ವ ಬರೆದ ಬರಹವನ್ನು ಸೇರಿಸಿದರೆ, ಅದನ್ನು ಓದುವ ಮಕ್ಕಳು ಏನು ಕಲಿಯುತ್ತಾರೆ? ಸುಳ್ಳು ಹೇಳಿದರೆ ನಾವು ಕೂಡಾ ಪ್ರಸಿದ್ಧಿಗೆ ಬರಬಹುದು ಎಂದು ತಾನೇ? ಮಕ್ಕಳಿಗೆ ನೈತಿಕ ಶಿಕ್ಷಣ ನೀಡಬೇಕೆಂದು ಉತ್ಸಾಹದಿಂದ ಹೊರಟು ಚಿತ್ರವಿಚಿತ್ರ ಸಲಹೆಗಳನ್ನು ಪಡೆಯುತ್ತಿರುವ ಕರ್ನಾಟಕ ಸರ್ಕಾರಕ್ಕೆ ಈ ಪ್ರಶ್ನೆಯನ್ನು ಯಾರಾದರೂ ಕೇಳಬೇಕಿತ್ತಲ್ಲವೇ?

ಈ ಬೆಳವಣಿಗೆಗಳನ್ನೆಲ್ಲಾ ನೋಡುತ್ತಿರುವಾಗ, 1970-80ರ ದಶಕದಲ್ಲಿ ಶಾಲೆ ಕಲಿಯುತ್ತಿದ್ದಾಗ ಓದಿದ ಪಠ್ಯಗಳಿಂದ ಕಲಿತ ಪಾಠಗಳು ನೆನಪಾಗುತ್ತವೆ:

ಮಾವಿನ ಮರಕ್ಕೆ ಕಲ್ಲೆಸೆಯುತ್ತಿದ್ದ ಶಾಲಾ ಮಕ್ಕಳಿಗೆ ಮರದ ಮಾಲೀಕ ಹೊಡೆಯಲು ಬರುತ್ತಾನೆ. ಉಳಿದ ಮಕ್ಕಳು ಪೆಟ್ಟು ತಿಂದು ಪೆಚ್ಚುಮೋರೆ ಹಾಕಿಕೊಂಡರೆ, ಒಬ್ಬ ಹುಡುಗ ಧೈರ್ಯದಿಂದ ಹೇಳುತ್ತಾನೆ: ‘ನಾನು ಕಲ್ಲೆಸೆದಿಲ್ಲ, ಕಾಯಿ ಕದ್ದಿಲ್ಲ. ಆದುದರಿಂದ ಪೆಟ್ಟು ಕೂಡಾ ತಿನ್ನುವುದಿಲ್ಲ. ಎಂದಿನಂತೆ ದಾರಿಯಲ್ಲಿ ಹೋಗುತ್ತಾ ಅವರ ಜತೆಗಿದ್ದೇನೆ ಅಷ್ಟೇ’. ಒಂದಿಷ್ಟೂ ವಿಚಲಿತನಾಗದೆ ಹೀಗೆ ಹೇಳಿದ ಬಾಲಕನನ್ನು ಕಂಡು ಮಾಲೀಕನೇ ವಿಚಲಿತನಾಗಿ ಆತನನ್ನು ಬಿಟ್ಟುಬಿಡುತ್ತಾನೆ. ಆ ಬಾಲಕ ಲಾಲ್ ಬಹದ್ದೂರ್ ಶಾಸ್ತ್ರಿ. ಮೇಷ್ಟ್ರು ಹೇಳಿದ್ದರು: ‘ನಾವು ತಪ್ಪು ಮಾಡದೇ ಇದ್ದರೆ ನಮಗೆ ಬರುವ ಧೈರ್ಯ ಇದೆಯಲ್ಲ ಅದು ಅತ್ಯಂತ ದೊಡ್ಡ ಧೈರ್ಯ’.

ಕೋರ್ಟಿನಲ್ಲಿ ವಾದ ಮಂಡಿಸುತ್ತಿದ್ದ ವಕೀಲರೊಬ್ಬರ ಬಳಿ ಅವಸರವಸರದಿಂದ ಬಂದ ವ್ಯಕ್ತಿ ಅವರಿಗೊಂದು ಚೀಟಿ ನೀಡುತ್ತಾನೆ. ಚೀಟಿಯನ್ನು ನೋಡಿದ ವಕೀಲರು ಅದನ್ನು ಜೇಬಲ್ಲಿಟ್ಟು ವಾದ ಮುಂದುವರಿಸುತ್ತಾರೆ. ಕಲಾಪ ಮುಗಿದ ನಂತರ, ತಮ್ಮ ಪಾಲಿನ ಕೆಲಸ ಮುಗಿಯಿತು ಎನ್ನುವುದನ್ನು ಖಾತರಿಪಡಿಸಿಕೊಂಡ ಆ ವಕೀಲರು ಚೀಟಿಯಲ್ಲಿ ತಮ್ಮ ಪತ್ನಿ ನಿಧನರಾಗಿರುವ ವಾರ್ತೆ ಇತ್ತೆಂದು ಹೇಳಿ ಅಲ್ಲಿಂದ ಹೊರಡುತ್ತಾರೆ. ಆ ವಕೀಲರೇ ವಲ್ಲಭಭಾಯಿ ಪಟೇಲ್. ‘ಕರ್ತವ್ಯನಿಷ್ಠೆ ಎಂದರೆ ಹೀಗಿರಬೇಕು’ ಅಂತ ಮೇಷ್ಟ್ರು ಹೇಳಿದ್ದ ನೆನಪು.

ಕೆರೆಗೆ ಬಿದ್ದ ಕಬ್ಬಿಣದ ಕೊಡಲಿಯ ಬದಲು ದೇವರು ಚಿನ್ನದ ಕೊಡಲಿ ಕೊಟ್ಟಾಗ ‘ಅದು ನನ್ನದಲ್ಲ’ ಎನ್ನುವ ಮರ ಕಡಿಯುವವನಿಗೆ ದೇವರು ಎಲ್ಲವನ್ನೂ ಕೊಟ್ಟದ್ದು, ಇನ್ನೊಬ್ಬ ಬೇಕೆಂತಲೇ ಕಬ್ಬಿಣದ ಕೊಡಲಿಯನ್ನು ಕೆರೆಗೆ ಹಾಕಿ, ದೇವರು ತಂದುಕೊಟ್ಟ ಚಿನ್ನದ ಕೊಡಲಿಯನ್ನು ತನ್ನದೆಂದು ಸುಳ್ಳು ಹೇಳಿ ಎಲ್ಲವನ್ನೂ ಕಳೆದುಕೊಂಡದ್ದು... ಅದರಿಂದ ಕಲಿತದ್ದು, ದೇವರು ಅಂತ ಒಂದು ಶಕ್ತಿ ಇದ್ದರೆ ಅದು ಸತ್ಯಸಂಧತೆ ಮತ್ತು ಪ್ರಾಮಾಣಿಕತೆ ಮಾತ್ರ ಎಂದು.

ಹಾಗೆಯೇ ಐದನೆಯ ತರಗತಿಯಲ್ಲಿ ಕವಿ ಕಯ್ಯಾರ ಕಿಞ್ಞಣ್ಣ ರೈ ಅವರ ಮೈನವಿರೇಳಿಸುವ ಪದ್ಯವೊಂದಿತ್ತು:

ಇಲ್ಲಿಯೆ ತಾಯ್ನಾಡಿನಲ್ಲಿಯೇ ಹುಟ್ಟುವೆನು, ಕ್ರಿಮಿ ಕೀಟವಾದರೂ ಕೊರಗುದೋರೆ! ಸ್ವಾತಂತ್ರ್ಯಸ್ವರ್ಗ ಸೋಪಾನ ಸಾವಿರವೇರಿ, ಸೌಖ್ಯನಂದನ ವಿಹಾರದೊಳಿಷ್ಟವಿಲ್ಲ; ತಾಯ್ನೆಲದ ಗದ್ದೆಕೆಸರಿನ ತೀರ್ಥದೊಳೆ ಮಿಂದು, ಪುಣ್ಯಪುಳಕಿತನಪ್ಪೆ ನಷ್ಟವಿಲ್ಲ!

ಈ ಪದ್ಯ ವಿವರಿಸಿದ ಮೇಷ್ಟ್ರು ‘ದೊಡ್ಡವರಾದ ಮೇಲೆ ಹಣದಾಸೆಗೆ ಬಿದ್ದು ಅಮೆರಿಕ, ಯುರೋಪ್, ಇಂಗ್ಲೆಂಡ್ ಅಂತ ಹೋಗದೆ, ಈ ದೇಶದಲ್ಲೇ ಸಿಕ್ಕಷ್ಟಕ್ಕೆ ತೃಪ್ತಿಪಟ್ಟು ದೇಶಕಟ್ಟಿ ಎಂದಿದ್ದರು’. ಅದರಲ್ಲಿ ದೇಶಪ್ರೇಮದ ಪಾಠವಿತ್ತು. ಇದ್ದುದರಲ್ಲೇ ಬದುಕು ಎನ್ನುವ ತಾತ್ವಿಕ ಸಂದೇಶವಿತ್ತು. ‘ತೇನ ತ್ಯಕ್ತೇನ ಭುಂಜೀಥಾ’ ಎನ್ನುವ ಉಪನಿಷದ್ ಸಾರವೂ ಅದರಲ್ಲಿತ್ತು ಅಂತ ವರ್ಷಗಳ ನಂತರ ಅನ್ನಿಸಿತ್ತು.

ಹೈಸ್ಕೂಲಿನಲ್ಲಿ ಅಂಬೇಡ್ಕರ್ ಕುರಿತ ಸುದೀರ್ಘ ಪಠ್ಯ ಓದುವಾಗ, ಬದುಕಿನಲ್ಲಿ ಬರುವ ಅವಮಾನಗಳಿಂದ ಜಗ್ಗದೆ ಯಥಾಶಕ್ತಿ ಎದುರಿಸುವ ಹಟ ಬೇಕೆಂಬ ಪಾಠವಾಯಿತು. ಮೇಷ್ಟ್ರು ‘ಗಾಂಧಿ’ ಸಿನಿಮಾ ತೋರಿಸಿದರು. ಅದರಲ್ಲಿ, ಒಂದೇ ಒಂದು ಸೀರೆ ಹೊಂದಿದ್ದ ಹೆಂಗಸೊಬ್ಬರು ಅನುಭವಿಸುವ ಕಷ್ಟ ಕಂಡ ಗಾಂಧೀಜಿ ಮುಂದೆ ಬರೀ ಅರ್ಧ ಪಂಚೆಯನ್ನಷ್ಟೇ ತೊಡಲು ನಿರ್ಧರಿಸಿದ ಕುರಿತು ‘ನಮ್ಮ ಸುತ್ತಲಿರುವವರು ಕಷ್ಟದಲ್ಲಿರುವಾಗ ನಾವು ಆಡಂಬರದಿಂದ ಬದುಕುವುದು ನಮ್ಮಲ್ಲಿ ಕನಿಷ್ಠ ಒಂದು ಪಾಪಪ್ರಜ್ಞೆಯನ್ನಾದರೂ ಹುಟ್ಟಿಸಬೇಕು’ ಎಂದಿದ್ದರು.

ಇವೆಲ್ಲವೂ ನೀತಿ ಪಾಠಗಳು. ಇಂಥವುಗಳು ಎಷ್ಟೋ ಇವೆ. ಇವು ಎಲ್ಲಾ ಕಾಲದ ಪಠ್ಯಪುಸ್ತಕಗಳು ಮತ್ತು ಶಿಕ್ಷಕರು ಬೋಧಿಸುವ ಕಾಲಾತೀತ ಜೀವನಮೌಲ್ಯಗಳು.

ಧರ್ಮಕ್ಕೆ ಸಂಬಂಧಿಸಿದ ನಿರ್ದಿಷ್ಟ ಗ್ರಂಥ, ಗೀತೆ ಬೋಧನೆ ಇತ್ಯಾದಿಗಳು ಪಠ್ಯಪುಸ್ತಕಗಳಾಗಿರಲಿಲ್ಲ. ಹಾಗೆಂದು ಧರ್ಮಗಳನ್ನಾಗಲೀ ಮಹಾಕಾವ್ಯಗಳನ್ನಾಗಲೀ ದೂರವಿಟ್ಟಿರಲಿಲ್ಲ. ಕನ್ನಡ ಪಠ್ಯಪುಸ್ತಕಗಳಲ್ಲಿ ‘ಆರುಣಿ’, ‘ನಚಿಕೇತ’, ‘ಅಷ್ಟಾವಕ್ರ’ ಮುಂತಾದ ಉಪನಿಷದ್ ಕತೆಗಳಿದ್ದವು. ಭೀಮ, ದುರ್ಯೋಧನ, ಏಕಲವ್ಯ, ಕರ್ಣ, ಅಭಿಮನ್ಯು, ಬಲಿ, ಭರತನಂತಹ ಪೌರಾಣಿಕ ಪಾತ್ರಗಳ ಕತೆಗಳೂ ಅಲ್ಲಿದ್ದವು. ಕ್ರೈಸ್ತ, ಪೈಗಂಬರ, ಬುದ್ಧ, ಮಹಾವೀರ, ನಾನಕರ ಬಗೆಗಿನ ಪಾಠಗಳಿದ್ದವು. ಎಲ್ಲವೂ ಏನನ್ನೋ ತಿಳಿಸುತ್ತಿದ್ದವು. ಆದರೆ, ನೈತಿಕತೆ ಮತ್ತು ಮೌಲ್ಯಗಳ ವಿಚಾರದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಕತೆಗಳಿಂದ, ನೈಜ ಸ್ವಾತಂತ್ರ್ಯ ಹೋರಾಟಗಾರರ ಜೀವನಚರಿತ್ರೆಯಿಂದ, ಸಂವಿಧಾನದ ಕುರಿತಾದ ವಿವರಣೆಗಳಿಂದ ಮತ್ತು ವಚನ-ಜನಪದ ಸಾಹಿತ್ಯಗಳಿಂದ ಸಿಗುವಷ್ಟು ಸ್ಪಷ್ಟತೆ ಇನ್ಯಾವುದೇ ಪಠ್ಯಗಳಿಂದ ಸಿಗುತ್ತಿರಲಿಲ್ಲ.


ಭಾರತದ ಸ್ವಾತಂತ್ರ್ಯ ಸಂಗ್ರಾಮ ಬರೀ ಹೋರಾಟವಲ್ಲ. ಅದು ಮೌಲ್ಯಗಳ ಮಹಾಪ್ರವಾಹ. ಸಂವಿಧಾನ ಕೇವಲ ರೀತಿ-ರಿವಾಜುಗಳ, ಕಾನೂನು-ಕಟ್ಟಲೆಗಳ ಕಂತೆಯಲ್ಲ. ಅದು ಉದಾತ್ತ ಮಾನವೀಯ ತತ್ವಗಳ ಮಹಾಪ್ರಸ್ಥಾನ. ಮತ್ತೆ ಕಯ್ಯಾರರ ಕಾವ್ಯದ ಚರಣವೊಂದು ನೆನಪಾಗುತ್ತದೆ:

ವೇದಶಾಸ್ತ್ರಪುರಾಣಕಾವ್ಯೇತಿಹಾಸಗಳ ಜೀರ್ಣಿಸಿದ ಪೂರ್ಣಿಸಿದ ಪಾಂಡಿತ್ಯ ಬೇಡೆ; ಎನ್ನ ತಾಯ್ನಾಡ ನಿರ್ಭಾಗ್ಯ ಸೋದರನೊಡನೆ ನಲ್ವಾತನಾಡುವೆನು ನಿತ್ಯ ನೋಡ...

ಈಗ ಮೌಲ್ಯ, ನೈತಿಕತೆ ಎಂದು ಹುಯಿಲೆಬ್ಬಿಸುವ ಸರ್ಕಾರವೇ ಸ್ವಾತಂತ್ರ್ಯ ಸಂಗ್ರಾಮವನ್ನು ಧಿಕ್ಕರಿಸಿದವರ, ಸಂವಿಧಾನವನ್ನು ಅನುಮಾನಿಸುವವರ, ‘ಹುಸಿಯನುಡಿಯಲು ಬೇಡ’ ಎನ್ನುವ ಮೌಲ್ಯವನ್ನೇ ಅಣಕಿಸುವವರ ಬರಹಗಳನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸಿಕೊಳ್ಳುತ್ತದೆ. ಇದು ವಿಪರ್ಯಾಸ. ಪಠ್ಯಪುಸ್ತಕದ ಶುದ್ಧೀಕರಣಕ್ಕಾಗಿ ಹೋರಾಡಿದವರು ಕೂಡ ಉಳಿದ ಅಪಭ್ರಂಶಗಳನ್ನು ಸರಿಪಡಿಸಿಕೊಳ್ಳುವಲ್ಲಿ ತೋರಿದ ದಿಟ್ಟತನವನ್ನು ಈ ಮಹಾಮಾಲಿನ್ಯದ ವಿಚಾರದಲ್ಲಿ ತೋರದೆ ಮೌನ ವಹಿಸಿದ್ದು ಎಲ್ಲದಕ್ಕಿಂತ ದೊಡ್ಡ ವಿಪರ್ಯಾಸ.

ನೈತಿಕ ಶಿಕ್ಷಣದ ಬಗ್ಗೆ ಸಲಹೆ ಕೇಳಲು ಕರೆದಿದ್ದ ಧಾರ್ಮಿಕ ಮುಖಂಡರ ಸಭೆಗೆ ಸರ್ಕಾರ ಆಹ್ವಾನಿಸಿದವರ ಪೈಕಿ ಎಂತೆಂತಹವರೆಲ್ಲಾ ಇದ್ದರು ಎನ್ನುವುದರ ಕುರಿತು ಕ್ಷಣ ಯೋಚಿಸಬೇಕು. ಅಲ್ಲಿ ಅತ್ಯಾಚಾರದ ಆರೋಪ ಎದುರಿಸಿದವರಿದ್ದರು, ಜೈಲು ಸೇರಿದ ಧಾರ್ಮಿಕ ನಾಯಕರೊಬ್ಬರ ಸಮರ್ಥನೆಗೆ ನಿಂತವರಿದ್ದರು, ಸುಳ್ಳು ಹೇಳುವವರನ್ನು ಅಂಗಣಕ್ಕೆ ಕರೆದು ಉಪನ್ಯಾಸ ಏರ್ಪಡಿಸುವವರು ಇದ್ದರು, ಜಾತಿ ಪಾರಮ್ಯವನ್ನು ಪ್ರತಿಪಾದಿಸುವವರೂ ಇದ್ದರು. ಸ್ವತಃ ನೈತಿಕ ಪಾಠ ಕೇಳಿಸಿಕೊಳ್ಳಬೇಕಾದ ಇಂತಹ ವ್ಯಕ್ತಿಗಳು ತಮ್ಮ ಸ್ವಭಾವಕ್ಕನುಗುಣವಾದ ಸಲಹೆಗಳನ್ನು ನೀಡಿದ್ದಾರೆ. ಆ ಸಲಹೆಗಳ ಬಗೆಗಿನ ಚರ್ಚೆ ಏನೇ ಇರಲಿ, ಇಂತಹವರಿಗೆಲ್ಲಾ ಪ್ರಾಮುಖ್ಯ ನೀಡುವುದರ ಮೂಲಕ ವಿದ್ಯಾರ್ಥಿಗಳಿಗೆ ಸರ್ಕಾರ ರವಾನಿಸಿದ ನೈತಿಕ ಸಂದೇಶವಾದರೂ ಎಂತಹದ್ದು ಎಂದು ಕೇಳುವ ಸಾತ್ವಿಕ ಧೈರ್ಯವನ್ನು ಯಾರೂ ತೋರಿಲ್ಲ. ಇದನ್ನು ನೈತಿಕತೆಯ ಮಹಾಮೌನ ಎನ್ನೋಣವೇ? ಮಹಾಪತನ ಎನ್ನೋಣವೇ? ಮೇಲೆ ಹೇಳಿದ ಪಠ್ಯಪುಸ್ತಕ ಮಾಲಿನ್ಯದ ವಿಚಾರದಲ್ಲಿ ಕಂಡ ಮೌನದ ಮುಂದುವರಿಕೆ ಇದು.

ಧಾರ್ಮಿಕ ಪೋಷಾಕಿನಲ್ಲಿರುವ ಈ ಕೆಲ ವ್ಯಕ್ತಿಗಳ ನೈತಿಕತೆಯ ಮಟ್ಟದ ಬಗ್ಗೆ ಏನೂ ತಿಳಿದಿಲ್ಲ ಎನ್ನುವಂತೆ ಸರ್ಕಾರವೇನೋ ನಟಿಸಬಹುದು. ಆದರೆ ಮಾಹಿತಿಯ ಮಹಾಪೂರದ ನಡುವೆ ಬೆಳೆಯುತ್ತಿರುವ ಇಂದಿನ ಮಕ್ಕಳ ಬಳಿ ಪ್ರತಿಯೊಬ್ಬ ಸಾರ್ವಜನಿಕ ವ್ಯಕ್ತಿಯ ನೈತಿಕ ಜಾತಕವೂ ಇದೆ.



ಚುರುಮುರಿ



ಸೇವಾ ಸೌಭಾಗ್ಯ

• ಮಣ್ಣೆರಾಜು

‘ಇದುವರೆಗೂ ಸಾರ್ವಜನಿಕವಾಗಿ ಚುನಾವಣಾ ಪ್ರಚಾರ, ಮನೆ ಬಾಗಿಲಿಗೆ ಬಂದು ಮತ ಯಾಚನೆ ಮಾಡುತ್ತಿದ್ದ ರಾಜಕೀಯ ಪಕ್ಷಗಳು ಈಗ ಮನೆ ಒಳಗೆ ಬರಲು ಶುರುಮಾಡಿವೆ...’ ಎಂದಳು ಸುಮಿ.

‘ವರವೋ ನೆರವೋ ನೀಡಿ ಮತದಾರರ ಮನವೊಲಿಸಲು ಬರುತ್ತಿವೆ’ ಅಂದ ಶಂಕ್ರಿ.

‘ಕಾಂಗ್ರೆಸ್ಸಿನವರು ಗೃಹಲಕ್ಷ್ಮಿ ಯೋಜನೆಯಡಿ ಕುಟುಂಬದ ಯಜಮಾನಿಗೆ ಮಾಸಿಕ ಎರಡು ಸಾವಿರ ರೂಪಾಯಿ ಕೊಡ್ತಾರಂತೆ. ಯಜಮಾನಿ, ಯಜಮಾನ ಎಂಬ ತಾರತಮ್ಯ ಮಾಡದೆ ಬಿಜೆಪಿಯವರು ಬಿಪಿಎಲ್ ಕಾರ್ಡಿರುವ ಕುಟುಂಬಗಳಿಗೆ ತಿಂಗಳಿಗೆ ಎರಡು ಸಾವಿರ ರೂಪಾಯಿ ವಿತರಿಸುತ್ತಾರಂತೆ’.

‘ಚುನಾವಣೆ ಸಂದರ್ಭದಲ್ಲಿ ಕದ್ದುಮುಚ್ಚಿ ಸೀರೆ, ಕುಕ್ಕರ್, ಬೆಳ್ಳಿ ಬಟ್ಟಲು ಹಂಚುತ್ತಿದ್ದವರು ಈಗ ಎಲೆಕ್ಷನ್ ಬೆನಿಫಿಟ್‌ಗಳನ್ನು ಮುಕ್ತವಾಗಿ ಹಂಚಲು ಹೊರಟಿದ್ದಾರೆ’.

‘ರೇಷನ್ ಕಾರ್ಡಿನಲ್ಲಿ ಅಕ್ಕಿ ಜೊತೆಗೆ ಗ್ಯಾಸ್ ಸಿಲಿಂಡರ್, ಬೇಳೆ, ತರಕಾರಿ, ಸಾಂಬಾರ್ ಪದಾರ್ಥಗಳನ್ನೂ ಉಚಿತವಾಗಿ ಕೊಟ್ಟರೆ ಅನುಕೂಲ ಆಗುತ್ತೇರೀ...’

‘ಚುನಾವಣೆ ಹತ್ತಿರವಾದಂತೆ ಅಂಥ ಘೋಷಣೆಗಳನ್ನೂ ಪಕ್ಷಗಳು ಪ್ರಕಟಿಸಬಹುದು. ಹಬ್ಬಗಳಲ್ಲಿ ಮನೆ ಮಂದಿಗೆಲ್ಲಾ ಹೊಸ ಬಟ್ಟೆ, ಹಬ್ಬದ ಸಾಮಾನುಗಳನ್ನು ಕೊಡುವ ಯೋಜನೆಗಳೂ ಘೋಷಣೆಯಾಗಬಹುದು’.

‘ಆಗಬಹುದು, ಯುಗಾದಿಯಂದು ಮತದಾರರ ಮನೆ ಬಾಗಿಲಿಗೆ ತೋರಣ ಕಟ್ಟಿ, ಹೂರಣ ಕುಟ್ಟಿ, ಒಬ್ಬಟ್ಟು ತಟ್ಟಿ ಬಡಿಸುತ್ತೇವೆ ಅಂತ ಯಾವುದಾದರೂ ಪಕ್ಷದವರು ಹಬ್ಬದ ಆಫರ್ ಅನೌನ್ಸ್ ಮಾಡಬಹುದು’.

‘ನಾವು ಜನನಾಯಕರಲ್ಲ, ಜನಸೇವಕರು ಎಂದು ಹೇಳಿಕೊಳ್ಳುವ ರಾಜಕಾರಣಿಗಳು ಇನ್ನೇನೇನು ಸೇವಾ ಸೌಭಾಗ್ಯಗಳನ್ನು ಮತದಾರರಿಗೆ ಕೊಡುವರೋ ಕಾದು ನೋಡೋಣ, ಕೊಟ್ಟಿದ್ದನ್ನು ಸ್ವೀಕರಿಸೋಣ...’ ಎಂದ ಶಂಕ್ರಿ.

ಸಂಗತ

ತಾಳ್ಮೆ ತೋರಬೇಕು ಶಾಸಕಾಂಗ

ಸರ್ಕಾರ ಮಾಡುವ ಶಾಸನಗಳ ಸಿಂಧುತ್ವವನ್ನು ನ್ಯಾಯಾಂಗ ಪ್ರಶ್ನಿಸಿದರೆ, ಅದನ್ನು ತಾಳಿಕೊಳ್ಳುವಷ್ಟು ತಾಳ್ಮೆ, ವಿವೇಕವು ಸರ್ಕಾರವನ್ನು ನಡೆಸುವವರಲ್ಲಿ ಇರಬೇಕು

• ಡಾ. ಆರ್.ಲಕ್ಷ್ಮೀನಾರಾಯಣ

ನ್ಯಾಯಾಂಗವು ಈಚಿನ ದಿನಗಳಲ್ಲಿ ನಾನಾ ಕಾರಣಗಳಿಗಾಗಿ ಚರ್ಚೆಯ ಕೇಂದ್ರದಲ್ಲಿದೆ. ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗ ನಮ್ಮ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಮೂರು ಮುಖ್ಯ ಸ್ತಂಭಗಳು. ಶಾಸಕಾಂಗ ಮತ್ತು ಕಾರ್ಯಾಂಗ ಹಳಿ ತಪ್ಪಿದಾಗ ಅವನ್ನು ಮತ್ತೆ ಹಳಿಯ ಮೇಲೆ ತರುವುದೇ ನ್ಯಾಯಾಂಗ. ಸರ್ಕಾರದ ವಿಷಯಕ್ಕೆ ಸಂಬಂಧಿಸಿದ ಈ ಮಾತು ನಾಗರಿಕರ ಹಕ್ಕುಗಳು, ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆಯೂ ನಿಜ.

ಶಾಸಕಾಂಗ, ಕಾರ್ಯಾಂಗದಿಂದ ತಮಗೆ ಅನ್ಯಾಯವಾಗುತ್ತಿದೆಯೆಂದು ಅನಿಸಿದ ಸಂದರ್ಭದಲ್ಲಿ ಜನ ಮತ್ತು ಸಂಸ್ಥೆಗಳ ಅಂತಿಮ ಆಸರೆ ನ್ಯಾಯಾಂಗವೊಂದೇ. ನ್ಯಾಯಾಲಯಗಳು ತೀರ್ಪು ನೀಡಲು ಅತಿ ದೀರ್ಘ ಸಮಯ ತೆಗೆದುಕೊಳ್ಳುವುದರಿಂದ, ‘ತಡವಾಗಿ ನೀಡಿದ ನ್ಯಾಯವೆಂದರೆ ನ್ಯಾಯವನ್ನು ನಿರಾಕರಿಸಿದಂತೆಯೇ’ ಎಂಬ ಮಾತು ಹುಟ್ಟಿಕೊಂಡಿರುವುದು ನಿಜವಾದರೂ ಈಗಲೂ ಜನ ಅತಿ ಹೆಚ್ಚಿನ ಭರವಸೆ ಇಟ್ಟಿರುವುದು ನ್ಯಾಯಾಂಗದ ಮೇಲೆಯೇ. ಸರ್ಕಾರಗಳು ಕೂಡ ಬಹಳಷ್ಟು ಬಾರಿ ನ್ಯಾಯಾಂಗದ ತೀರ್ಪಿಗಾಗಿ ಚಾತಕ ಪಕ್ಷಿಗಳಂತೆ ಕಾಯುವ ಸಂದರ್ಭಗಳು ಈಚಿನ ದಿನಗಳಲ್ಲಿ ಹೆಚ್ಚಾಗುತ್ತಿವೆ.

ರಾಜಕೀಯವಾಗಿಯೇ ಇತ್ಯರ್ಥವಾಗಬೇಕಾದ ಅನೇಕ ಸಮಸ್ಯೆಗಳು ಸರ್ಕಾರದ ಮುತ್ಸದ್ದಿತನದ ಕೊರತೆ ಇಲ್ಲವೆ ಅಸಾಮರ್ಥ್ಯದಿಂದ ಇತ್ಯರ್ಥ ಕಾಣದೆ ಹೋದಾಗ, ಅಂತಿಮ ಆಸರೆಯಾಗಿ ನ್ಯಾಯಾಂಗ ಒದಗಿಬಂದು ಜನರ ಪಾಲಿಗಷ್ಟೇ ಅಲ್ಲ, ಸರ್ಕಾರಗಳ ಪಾಲಿಗೂ ರಕ್ಷಕದೇವತೆಯಾಗಿ ಕಂಡುಬಂದಿರುವ ಸಂದರ್ಭಗಳಿಗೇನೂ ಕೊರತೆಯಿಲ್ಲ. ಎರಡು ಕೋಮುಗಳ ನಡುವೆ ಬಗೆಹರಿಯದ ಕಗ್ಗಂಟಾಗಿದ್ದ ಅಯೋಧ್ಯೆಯ ಸಮಸ್ಯೆ ನ್ಯಾಯಾಂಗದ ಮಧ್ಯಪ್ರವೇಶದಿಂದ ಬಗೆಹರಿದು ಸರ್ಕಾರ ನಿಟ್ಟುಸಿರುಬಿಡುವಂತಾದದ್ದು ಕಣ್ಣೆದುರೇ ಇದೆ. ನಮ್ಮ ಜನ ಅವರು ಯಾರೇ ಆಗಿರಲಿ, ಯಾವ ಕೋಮಿಗೆ ಸೇರಿರಲಿ, ಯಾವ ರಾಜಕೀಯ ಪಕ್ಷಕ್ಕೆ ಸೇರಿರಲಿ, ಯಾವ ರಾಜ್ಯದವರೇ ಆಗಿರಲಿ ಅಂತಿಮವಾಗಿ ನ್ಯಾಯಾಂಗಕ್ಕೆ, ಅದರ ತೀರ್ಪಿಗೆ ತಲೆಬಾಗುತ್ತಾರೆ. ಅದು ನಮ್ಮ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಸೌಂದರ್ಯದ ಅಂಶ.

ತಮಗೆ ಸಮಾಧಾನ ಕೊಡುವಂಥ ತೀರ್ಪು ಆಗಿಲ್ಲದಿದ್ದಾಗಲೂ ಒಳಗೊಳಗೇ ಬಯ್ದುಕೊಂಡರೂ ಬಹಿರಂಗವಾಗಿ ತುಟಿಬಿಚ್ಚದೆ ಸುಮ್ಮನಿರುತ್ತಾರೆ. ಅದು ಎರಡು ರಾಜ್ಯಗಳಿಗೆ ಸಂಬಂಧಿಸಿದ ನದಿ ನೀರಿನ ವಿವಾದವಾಗಿರಬಹುದು, ಗಡಿ ಸಮಸ್ಯೆಯಾಗಿರಬಹುದು, ಎರಡು ಕೋಮುಗಳ ನಡುವಿನ ಸಮಸ್ಯೆಯಾಗಿರಬಹುದು, ಶಿಕ್ಷಣ ಮಾಧ್ಯಮದ ಸಮಸ್ಯೆಯಾಗಿರಬಹುದು, ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿದಂಥ ಸರ್ಕಾರದ ಕ್ರಮವಾಗಿರಬಹುದು ಎಲ್ಲಕ್ಕೂ ಈಚೆಗೆ ನ್ಯಾಯಾಲಯ ನೀಡುವ ತೀರ್ಪೇ ಅಂತಿಮ ಎಂಬಂತಾಗಿ, ರಾಜಕೀಯ ಪರಿಹಾರ ಕಂಡುಕೊಳ್ಳುವ ಸರ್ಕಾರಗಳ ಸಾಮರ್ಥ್ಯವೇ ಪ್ರಶ್ನಿಸಲ್ಪಡುವಂತಾಗಿರುವುದು ಸರ್ಕಾರಗಳಿಗೆ ಕೀರ್ತಿ ತರುವಂಥದ್ದೇನಲ್ಲ. ಪಂಚಮಸಾಲಿ ಸಮುದಾಯದ ಮೀಸಲಾತಿಗೆ ಸಂಬಂಧಿಸಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ನ್ಯಾಯಾಲಯ ಈಚೆಗೆ ನೀಡಿದ ತೀರ್ಪಿನಿಂದ ಸರ್ಕಾರ ತಾತ್ಕಾಲಿಕವಾಗಿಯಾದರೂ ನೆಮ್ಮದಿಯ ನಿಟ್ಟುಸಿರುಬಿಡುವಂತಾದದ್ದು ತಿಳಿದೇ ಇದೆ.

ನ್ಯಾಯಾಲಯದ ಮೇಲಿನ ಅವಲಂಬನೆ ಇಷ್ಟರ ಮಟ್ಟಿಗೆ ಇದ್ದರೂ ಸರ್ಕಾರಕ್ಕೂ ನ್ಯಾಯಾಂಗಕ್ಕೂ ಘರ್ಷಣೆ ಕೂಡ ಅಷ್ಟೇ ಜೋರಾಗಿದೆ. ನ್ಯಾಯಾಂಗ ಕೆಲವೊಮ್ಮೆ ಅತಿಯಾದ ಕ್ರಿಯಾಶೀಲತೆಯಿಂದ ಶಾಸಕಾಂಗದ ಅಧಿಕಾರ ವ್ಯಾಪ್ತಿಗೂ ಕೈಚಾಚುತ್ತಿದೆ ಎಂಬ ಟೀಕೆಗಳು ಆಗಿಂದಾಗ್ಗೆ ಕೇಳಿಬರುತ್ತಲೇ ಇವೆ. ನ್ಯಾಯಾಂಗ ನೇಮಕಾತಿ ಆಯೋಗ ರಚಿಸಲು ಸಂಸತ್ತು ರೂಪಿಸಿದ ಕಾಯ್ದೆಯನ್ನು ಸುಪ್ರೀಂ ಕೋರ್ಟ್ ಅಸಿಂಧುಗೊಳಿಸಿದ್ದರ ಬಗ್ಗೆ ಉಪರಾಷ್ಟ್ರಪತಿ ಅಸಮಾಧಾನ ವ್ಯಕ್ತಪಡಿಸಿದ್ದರ ಬೆನ್ನಿಗೇ ಕೇಶವಾನಂದ ಭಾರತಿ ಪ್ರಕರಣದಲ್ಲಿ ಸಂವಿಧಾನದ ಮೂಲ ಸ್ವರೂಪಕ್ಕೆ ಸಂಬಂಧಿಸಿದ ತಾತ್ವಿಕತೆಯನ್ನು ಪ್ರಶ್ನಿಸಿದ್ದು ನಡೆದಿದೆ. ಜೊತೆಗೆ ಕೇಂದ್ರ ಕಾನೂನು ಸಚಿವರು ಮತ್ತು ನ್ಯಾಯಾಲಯದ ನಡುವಿನ ವಾಗ್ಯುದ್ಧಗಳು ದಿನಬೆಳಗಾದರೆ ಪತ್ರಿಕೆಗಳಲ್ಲಿ ಬರುತ್ತಲೇ ಇವೆ.



ಈಚೆಗೆ ಉಪರಾಷ್ಟ್ರಪತಿಯವರು ಸಭಾಪತಿಯಾಗಿ ಮಾಡಿದ ಮೊದಲ ಭಾಷಣದಲ್ಲಿ ನ್ಯಾಯಾಂಗದ ಕುರಿತು ಟೀಕಿಸಿದ್ದರು. ಶಾಸಕಾಂಗದ ಪಾವಿತ್ರ್ಯವನ್ನು ನ್ಯಾಯಾಂಗ ಗೌರವಿಸಬೇಕು ಎಂಬ ಮಾತೂ ಅವರಿಂದ ಕೇಳಿಬಂದಿದೆ. ಆದರೆ ಈಚಿನ ಹಲವು ವರ್ಷಗಳಲ್ಲಿ ಶಾಸಕಾಂಗದ ಅಧಿಕಾರ ವ್ಯಾಪ್ತಿಯೊಳಕ್ಕೆ ನ್ಯಾಯಾಂಗ ಅನಗತ್ಯವಾಗಿ ಪ್ರವೇಶಿಸಿಬಿಟ್ಟಿತೇನೋ ಎಂದು ಅನೇಕರಿಗೆ ಅನಿಸಿದ ಸಂದರ್ಭಗಳಲ್ಲೂ ಅದು ಸುಮ್ಮನೆ ಪ್ರವೇಶಿಸಿದ್ದಲ್ಲ, ಎಲ್ಲೋ ಒಂದು ಕಡೆ ಶಾಸಕಾಂಗ ತನ್ನ ಕರ್ತವ್ಯ ನಿರ್ವಹಿಸುವಲ್ಲಿ ಎಡವಿದಂತಾಗಿದ್ದೇ ಇದಕ್ಕೆ ಕಾರಣ ಎಂಬ ಸಮಾಧಾನವೂ ಸಮತೋಲನದಿಂದ ಚಿಂತಿಸುವವರಿಗೆ ಇದೆ.

ಸರ್ಕಾರ ತನಗೆ ಸಮಸ್ಯೆ ಉಂಟಾದಾಗ ನ್ಯಾಯಾಲಯದ ಕಡೆ ನೋಡುವುದು, ತಾನು ಮಾಡಿದ ಶಾಸನದ ಸಿಂಧುತ್ವವನ್ನು ನ್ಯಾಯಾಲಯ ಪ್ರಶ್ನಿಸಿದಾಗ ಕಣ್ಣು ಕೆಂಪು ಮಾಡಿಕೊಳ್ಳುವುದು, ನ್ಯಾಯಾಂಗದ ನಡೆಯನ್ನೇ ಸಂಶಯಿಸುವುದು ಯಾವ ನ್ಯಾಯ? ಒಂಟೆ ಬೇಕೆಂದಾದರೆ ಅದರ ಡುಬ್ಬವನ್ನು ಸಹಿಸಬೇಕಾಗುವಂತೆ, ನ್ಯಾಯಾಂಗವು ಸರ್ಕಾರಕ್ಕೆ, ದೇಶಕ್ಕೆ ಅಗತ್ಯವಾಗಿರುವಾಗ, ಶಾಸನಗಳ ಸಿಂಧುತ್ವವನ್ನು ನ್ಯಾಯಾಂಗ ಪ್ರಶ್ನಿಸಿದರೆ ಅದನ್ನು ತಾಳಿಕೊಳ್ಳುವಷ್ಟು ತಾಳ್ಮೆ, ವಿವೇಕವು ಸರ್ಕಾರವನ್ನು ನಡೆಸುವವರಲ್ಲಿ ಇರಬೇಕು. ಇಲ್ಲದಿದ್ದರೆ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ ಸಮರ್ಪಕವಾಗಿ ಕೆಲಸ ಮಾಡಲು, ಅದು ಜನಹಿತ ಸಾಧಿಸಲು ಸಾಧ್ಯವಾಗುವುದಿಲ್ಲ ಎಂಬುದನ್ನು ಶಾಸಕಾಂಗ ಅರ್ಥಮಾಡಿಕೊಳ್ಳಬೇಕು.

ವಾಚಕರ ವಾಣಿ

ಹೃದಯಹೀನ ವರ್ತನೆ: ಕಠಿಣ ಶಿಕ್ಷೆ ಆಗಲಿ

ದ್ವಿಚಕ್ರ ವಾಹನಕ್ಕೆ ಜೋತುಬಿದ್ದ ಮುತ್ತಪ್ಪ ಎನ್ನುವ ವೃದ್ಧರನ್ನು ಯುವಕನೊಬ್ಬ ರಸ್ತೆಯಲ್ಲೇ 600 ಮೀಟರ್‌ವರೆಗೆ ಎಳೆದೊಯ್ದ ದೃಶ್ಯವನ್ನು ಮಾಧ್ಯಮಗಳಲ್ಲಿ ನೋಡಿ ಕರುಳು ಹಿಚುಕಿದಷ್ಟು ಸಂಕಟವಾಯಿತು. ಇಂದಿನ ಯುವಜನಾಂಗದ ಮನಃಸ್ಥಿತಿ ಅದೆಷ್ಟು ಕ್ರೂರ ಎನಿಸಿತು. ಅವರೇಕೆ ಹೀಗೆ ಹೃದಯಹೀನರಾಗಿ ವರ್ತಿಸುತ್ತಿದ್ದಾರೆ?

ಇತರರಿಗೆ ಪಾಠ ಎನಿಸುವಂತಹ ಕಠಿಣ ಶಿಕ್ಷೆಯನ್ನು ಇಂತಹವರಿಗೆ ನೀಡಬೇಕು. ಕೆಲವು ಯುವಕರು ಹಣ, ಅಧಿಕಾರದ ಕಾರಣದಿಂದಾಗಿ ದುರಹಂಕಾರ ಬೆಳೆಸಿಕೊಂಡಿರುತ್ತಾರೆ. ಅಂಥವರಿಗೆ ರಾಜಕೀಯ ಕೃಪಾಕಟಾಕ್ಷವೂ ಇದ್ದರಂತೂ ಎಂತಹ ದುಷ್ಕೃತ್ಯ ಎಸಗಿದರೂ ಖುಲಾಸೆಯಾಗಿ ಹೊರಬರುತ್ತೇವೆ ಎಂಬ ಭಂಡ ಧೈರ್ಯ ಬಂದುಬಿಡುತ್ತದೆ. ಹೀಗಾಗಿ ಇಂತಹವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಜರುಗಿಸಬೇಕು ಮತ್ತು ಗೂಂಡಾಪಟ್ಟಿಗೆ ಇವರ ಹೆಸರನ್ನು ಸೇರಿಸಬೇಕು.

ಲಲಿತಾ ರೆಡ್ಡಿ, ಕಲಬುರಗಿ

ಎಲ್ಲ ರಂಗದಲ್ಲೂ ಬೇಕು ಮುಟ್ಟಿನ ರಜೆ

ಕೇರಳದ ಕೊಚ್ಚಿಯ ಮಹಾತ್ಮ ಗಾಂಧಿ ವಿಶ್ವವಿದ್ಯಾಲಯವು ವಿದ್ಯಾರ್ಥಿನಿಯರಿಗೆ ಮುಟ್ಟಿನ ರಜೆ ನೀಡಲು ಮುಂದಾಗಿರುವುದು ಗಮನಾರ್ಹವಾದುದು. ಹೆಣ್ಣು ಮಕ್ಕಳು ಮುಟ್ಟಿನ ಕಾರಣಕ್ಕಾಗಿ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಸಮಸ್ಯೆಯಿಂದ ಬಳಲುತ್ತಾರೆ. ಇನ್ನೊಂದೆಡೆ, ಸಂಪ್ರದಾಯಗಳ ಹೆಸರಿನಲ್ಲಿ ಕಟ್ಟುಪಾಡುಗಳಿಗೆ ಒಳಗಾಗುತ್ತಾರೆ. ಇಂತಹ ಸಂದರ್ಭಗಳಲ್ಲಿ ಮನೆಯ ಕೆಲಸಗಳನ್ನೂ ಮಾಡಿಕೊಂಡು ಶಿಕ್ಷಣವನ್ನು ಅಥವಾ ಉದ್ಯೋಗವನ್ನು ಮುಂದುವರಿಸುವುದು ಕಷ್ಟವಾಗುತ್ತದೆ. ಆಗ ಆರೋಗ್ಯದ ದೃಷ್ಟಿಯಿಂದ ಆಕೆಗೆ ಹೆಚ್ಚಿನ ವಿಶ್ರಾಂತಿ ಬೇಕಾಗುತ್ತದೆ. ಹೀಗಾಗಿ ಸರ್ಕಾರಿ ಮತ್ತು ಖಾಸಗಿ ಎರಡೂ ರಂಗಗಳಲ್ಲಿ ಹೆಣ್ಣು ಮಕ್ಕಳಿಗೆ ಮುಟ್ಟಿನ ಸಂದರ್ಭದಲ್ಲಿ ರಜೆ ಘೋಷಿಸುವ ನೀತಿ ಜಾರಿಯಾಗಬೇಕು.

ಆರೋಗ್ಯ ಮತ್ತು ನೈರ್ಮಲ್ಯದ ದೃಷ್ಟಿಯಿಂದ ಶಾಲಾ ಕಾಲೇಜುಗಳು ಹಾಗೂ ಉದ್ಯೋಗ ಸ್ಥಳಗಳಲ್ಲಿ ಸುರಕ್ಷಿತ, ಸ್ವಚ್ಛ ಶೌಚಾಲಯ ವ್ಯವಸ್ಥೆಗೆ ಕ್ರಮ ಕೈಗೊಳ್ಳಬೇಕು. ಮುಟ್ಟಿಗೆ ಸಂಬಂಧಿಸಿದಂತೆ ಇರುವ ಕೆಲವು ಮೌಢ್ಯ ಆಚರಣೆಗಳನ್ನು ನಿಲ್ಲಿಸಬೇಕು. ಮುಟ್ಟು ಒಂದು ದೈಹಿಕ ಮತ್ತು ನೈಸರ್ಗಿಕ ಕ್ರಿಯೆ ಎಂಬುದರ ಅರಿವು ಮೂಡಿಸುವ ದಿಸೆಯಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು.

ಕಾಶಿನಾಥ ಮುದ್ದಾಗೋಳ, ಕಲಬುರಗಿ

ಪಿಕೆಟ್ಟಿಯ ಅಸಮಾನತೆ ಪ್ರಣಾಳಿಕೆ ಕಾರ್ಯರೂಪದಲ್ಲಿದೆ!

ಭಾರತದ ಕುರಿತು ಆಕ್ಸ್‌ಫ್ಯಾಮ್ ಬಿಡುಗಡೆ ಮಾಡಿರುವ ವರದಿಯು ವರಮಾನದ ಅಸಮಾನತೆಯು ಹೆಚ್ಚುತ್ತಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸಿದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 1ರಷ್ಟಿರುವ ಅತಿಶ್ರೀಮಂತರು ದೇಶದ ಒಟ್ಟು ಸಂಪತ್ತಿನ ಶೇ 40ರಷ್ಟು ಹೊಂದಿದ್ದಾರೆ ಎನ್ನುತ್ತದೆ ವರದಿ (ಪ್ರ.ವಾ., ಜ. 17). ಸರಿಸುಮಾರು ನೂರರಷ್ಟು ಅಗ್ರ ಶ್ರೀಮಂತರ ಒಟ್ಟು ಸಂಪತ್ತಿನ ಮೌಲ್ಯವು ₹ 54.12 ಲಕ್ಷ ಕೋಟಿಯಾಗಿದೆ. ಅಂದರೆ ಇದು ಕರ್ನಾಟಕದ 2020-21ರ ಜಿಎಸ್‌ಡಿಪಿಯ 3.4 ಪಟ್ಟಾಗುತ್ತದೆ. ಸುಮಾರು ಮೂರು ಕರ್ನಾಟಕಗಳ ವರಮಾನಕ್ಕೆ ಈ 100 ಜನರ ವರಮಾನವು ಸಮನಾಗುತ್ತದೆ.

ಜಗತ್ತಿನಲ್ಲಿ ಅಸಮಾನತೆಯಲ್ಲಿ ಏರಿಕೆಯಾಗುತ್ತಿರುವುದರ ಕುರಿತಂತೆ ಪ್ರಸಿದ್ಧ ಸಿದ್ಧಾಂತವನ್ನು ಮಂಡಿಸಿದ್ದ ಥಾಮಸ್ ಪಿಕೆಟ್ಟಿ ಅವರ ಪ್ರಣಾಳಿಕೆಯು ಭಾರತದಲ್ಲಿ ಇಂದು ಸಂಭವಿಸುತ್ತಿದೆ. ಅವರ ಪ್ರಕಾರ, ಯಾವಾಗ ಬಂಡವಾಳದ ಮೇಲಿನ ಪ್ರತಿಫಲದ ದರವು ಆರ್ಥಿಕ ಬೆಳವಣಿಗೆ ದರಕ್ಕಿಂತ ಅಧಿಕವಾಗಿರುತ್ತದೊ ಅಲ್ಲಿ ಅಸಮಾನತೆಯು ತೀವ್ರವಾಗುತ್ತದೆ. ಭಾರತದಲ್ಲಿ ಇಂದು ಅತಿಬಂಡವಾಳಿಗರ ಸಂಪತ್ತು ನಾಗಾಲೋಟದಲ್ಲಿ ಏರಿಕೆಯಾಗುತ್ತಿದೆ, ಆದರೆ ಆರ್ಥಿಕ ಬೆಳವಣಿಗೆ ದರವು ಶೇ 6- 7ರ ನಡುವೆ ಎಡತಾಕುತ್ತಿದೆ. ಇದಕ್ಕೆ ಒಕ್ಕೂಟ ಸರ್ಕಾರವು ಪಾಲಿಸುತ್ತಿರುವ ಪ್ರತಿಗಾಮಿ ಅಪ್ರತ್ಯಕ್ಷ ತೆರಿಗೆ (ಜಿಎಸ್‌ಟಿ) ಮತ್ತು ಕಡಿತವಾಗುತ್ತಿರುವ ಪ್ರತ್ಯಕ್ಷ ತೆರಿಗೆ (ಕಾರ್ಪೊರೇಟ್ ತೆರಿಗೆ) ನೀತಿಯು ಕಾರಣವಾಗಿದೆ. ಮುಂಬರುವ ಬಜೆಟ್ಟಿನಲ್ಲಾದರೂ ಬಡವರನ್ನು ಕಾಪಿಡುವ ರೀತಿಯಲ್ಲಿ ತೆರಿಗೆ ನೀತಿಯನ್ನು ಒಕ್ಕೂಟ ಸರ್ಕಾರ ಬದಲಾಯಿಸಬೇಕು ಎಂದು ಒತ್ತಾಯಿಸೋಣ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಮಹಿಳೆಯರನ್ನು ಅಪಮಾನಿಸುವ ಏಟು– ಎದುರೇಟು

‘ಹೊಟ್ಟೆಪಾಡಿಗೆ ಮೈ ಮಾರಿಕೊಂಡ ಮಹಿಳೆಯನ್ನು ವೇಶ್ಯೆ ಎಂದು ಕರೆಯುತ್ತೇವೆ. ತಮ್ಮನ್ನೇ ಮಾರಾಟ ಮಾಡಿಕೊಂಡಿದ್ದ ಶಾಸಕರಿಗೆ ಏನೆಂದು ಹೇಳುತ್ತೀರಿ’ ಎಂದು ಪ್ರಶ್ನಿಸಿದ್ದಾರೆ ಕಾಂಗ್ರೆಸ್ ಮುಖಂಡ ಬಿ.ಕೆ.ಹರಿಪ್ರಸಾದ್ (ಪ್ರ.ವಾ., ಜ. 18). ನಿಜಕ್ಕೂ ಈ ಹೇಳಿಕೆ ಮತದಾರರಲ್ಲಿ ರಾಜಕೀಯ ನೈತಿಕ ಪ್ರಶ್ನೆಯನ್ನೇ ಹುಟ್ಟುಹಾಕಿದೆ. ಏಕೆಂದರೆ ಮತದಾರರು ಚುನಾವಣೆಯಲ್ಲಿ ಒಂದು ಪಕ್ಷದ ಅಭಿವೃದ್ಧಿ ಪರ ನೀತಿ ಮತ್ತು ಅಭ್ಯರ್ಥಿಯ ವರ್ಚಸ್ಸು, ನಡೆ ನುಡಿ ಹೇಗಿದೆ ಎಂದು ಆಲೋಚಿಸಿಯೇ ಮತ ನೀಡಿರುತ್ತಾರೆ. ಆದರೆ ಹಾಗೆ ಮತದಾರರನ್ನು ನಂಬಿಸಿ ಗೆದ್ದ ಅಭ್ಯರ್ಥಿಯು ಚುನಾವಣೆ ನಂತರ ತನ್ನ ವೈಯಕ್ತಿಕ ತೆವಲಿಗೆ ಮತದಾರರ ಮತಮೌಲ್ಯವನ್ನೇ ಕಡೆಗಣಿಸಿ, ಪಕ್ಷಾಂತರ ಮಾಡಿ, ಮತ್ತೆ ಅನಗತ್ಯ ಚುನಾವಣೆ ಹೇರಿ, ದೇಶದ ಬೊಕ್ಕಸಕ್ಕೆ ಹೊರೆಯಾಗುತ್ತಾರೆ. ಆದರೆ ಈ ರೀತಿ ಆಲೋಚಿಸುವ ಬದಲು, ಹರಿಪ್ರಸಾದ್ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ಸಚಿವ ಬಿ.ಸಿ.ಪಾಟೀಲ ಅವರು ‘ಹರಿಪ್ರಸಾದರನ್ನು ಪಿಂಪ್ ಎನ್ನಬಹುದೇ’ ಎಂದು ಪ್ರಶ್ನಿಸಿದ್ದಾರೆ.

ಈ ಥರದ ಮಾತಿನ ಏಟು, ಎದುರೇಟುಗಳಿಂದ ಮಹಿಳೆಯರನ್ನು ಅವಮಾನಿಸಿದಂತೆ ಆಗುತ್ತದೆಯೇ ವಿನಾ ಚುನಾವಣೆ ಮತ್ತು ರಾಜಕೀಯ ಸ್ವಚ್ಛತೆ ಕುರಿತು ಕಾಳಜಿ ವ್ಯಕ್ತಪಡಿಸಿದಂತೆ ಆಗುವುದಿಲ್ಲ. ಆದ್ದರಿಂದ ಪರಸ್ಪರ ನಿಂದಿಸಿಕೊಳ್ಳುವ ಭರದಲ್ಲಿ ಮಹಿಳೆಯರನ್ನು ಅವಮಾನಿಸಿದ್ದರಿಂದ ಇವರಿಬ್ಬರೂ ಮಹಿಳೆಯರ ಕ್ಷಮೆ ಕೇಳಬೇಕು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವನ್ಯಜೀವಿ ಕಾಯ್ದೆಗೆ ತಿದ್ದುಪಡಿ

ಸಂರಕ್ಷಣೆ ನಿಯಮಗಳು ಸಡಿಲ

ವನ್ಯಜೀವಿ (ಸಂರಕ್ಷಣಾ) ಕಾಯ್ದೆಗೆ ಕೇಂದ್ರ ಸರ್ಕಾರ ತಿದ್ದುಪಡಿ ತಂದಿದೆ. ಈ ತಿದ್ದುಪಡಿಗಳು ವನ್ಯಜೀವಿ ಸಂರಕ್ಷಣೆಯ ಕೆಲವು ಕಾನೂನುಗಳನ್ನು ದುರ್ಬಲಗೊಳಿಸುತ್ತವೆ ಎಂಬ ಆಕ್ಷೇಪ ಸಂಸತ್ತಿನ ಉಭಯ ಸದನಗಳಲ್ಲಿ ವ್ಯಕ್ತವಾಗಿತ್ತು. 'ಸಂಸತ್ತಿನಲ್ಲಿ ವ್ಯಕ್ತವಾದ ಆಕ್ಷೇಪ ಮತ್ತು ವಿರೋಧಗಳನ್ನು ಗಣನೆಗೆ ತೆಗೆದುಕೊಳ್ಳದ ಕೇಂದ್ರ ಸರ್ಕಾರವು ತಿದ್ದುಪಡಿಗಳನ್ನು ಜಾರಿಗೆ ತಂದಿದೆ. ವನ್ಯಜೀವಿಗಳ ಸಂರಕ್ಷಣೆಯ ಕೆಲವು ನಿಯಮಗಳನ್ನು ತಿದ್ದುಪಡಿ ಕಾಯ್ದೆಯಲ್ಲಿ ಸಡಿಲಗೊಳಿಸಲಾಗಿದೆ ಮತ್ತು ರಾಜ್ಯ ಸರ್ಕಾರಗಳ ಅಧಿಕಾರಗಳನ್ನೂ ಮೊಟಕುಗೊಳಿಸಲಾಗಿದೆ' ಎಂಬುದು ವಿರೋಧ ಪಕ್ಷಗಳ ಆಕ್ಷೇಪ



ಪ್ರಜಾವಾಣಿ ವಾರ್ತೆ

'ಸಾಕಾನೆಯ ವಾಣಿಜ್ಯ ಬಳಕೆಗೆ ಅವಕಾಶ'

1972ರ ಮೂಲ ಕಾಯ್ದೆ ಮತ್ತು ಅನಂತರದ ತಿದ್ದುಪಡಿ ಕಾಯ್ದೆಯಲ್ಲಿ ವನ್ಯಜೀವಿಗಳ ಸಾಗಣೆ ಮತ್ತು ವಾಣಿಜ್ಯ ಬಳಕೆಗೆ ನಿರ್ಬಂಧ ಹೇರಲಾಗಿತ್ತು. ಈ ಕಾಯ್ದೆಗಳ ಸೆಕ್ಷನ್ 43ರಲ್ಲಿ ಇದನ್ನು ಉಲ್ಲೇಖಿಸಲಾಗಿದೆ. ಕೇಂದ್ರ ಸರ್ಕಾರವು ಈಗ ಜಾರಿಗೆ ತಂದಿರುವ ನೂತನ ತಿದ್ದುಪಡಿ ಕಾಯ್ದೆಯಲ್ಲಿ ಈ ಸೆಕ್ಷನ್‌ಗೆ ಹಲವು ಬದಲಾವಣೆಗಳನ್ನು ತಂದಿದೆ.

ತಿದ್ದುಪಡಿಯ ಮೂಲಕ ಕಾಯ್ದೆಯ 43(2) ಸೆಕ್ಷನ್‌ಗೆ ಹೊಸ ಅಂಶವನ್ನು ಸೇರಿಸಲಾಗಿದೆ. 'ಸಾಕಾನೆಯ ಮಾಲೀಕತ್ವಕ್ಕೆ ಸಂಬಂಧಿಸಿದ ಪ್ರಮಾಣ ಪತ್ರ ಹೊಂದಿರುವ ವ್ಯಕ್ತಿಯು, ಅಂತಹ ಆನೆಯನ್ನು ಧಾರ್ಮಿಕ ಕಾರ್ಯಗಳಿಗೆ ಅಥವಾ ಯಾವುದೇ ಉದ್ದೇಶಕ್ಕೆ ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಸಾಗಣೆ ಮಾಡಬಹುದು. ಈ ಸಂಬಂಧ ಕೇಂದ್ರ ಸರ್ಕಾರವು ಸೂಚಿಸುವ ಷರತ್ತುಗಳನ್ನು ಪೂರೈಸಬೇಕು' ಎಂಬ ಹೊಸ ಅಂಶವನ್ನು ಈ ಸೆಕ್ಷನ್‌ಗೆ ಸೇರಿಸಲಾಗಿದೆ.

ಈ ಅಂಶಕ್ಕೆ ಸಂಸತ್ತಿನ ಉಭಯ ಸದನಗಳಲ್ಲೂ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಧಾರ್ಮಿಕ ಕಾರ್ಯಗಳಿಗೆ ಆನೆಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲು ಇದು ಅವಕಾಶ ಮಾಡಿಕೊಡುತ್ತದೆ. ಆನೆಯ ಮಾಲೀಕತ್ವದ ಪ್ರಮಾಣಪತ್ರ ಹೊಂದಿರುವವರು ಈ ಅಂಶವನ್ನು ಬಳಸಿಕೊಂಡು, ಹಣ ಪಡೆದು ಆನೆಯನ್ನು ಧಾರ್ಮಿಕ ಚಟುವಟಿಕೆಗಳಿಗೆ ಒದಗಿಸುವ ಸಾಧ್ಯತೆ ಇರುತ್ತದೆ. 'ಇದರಿಂದ ವನ್ಯಜೀವಿಯನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಂಡಂತೆ ಆಗುತ್ತದೆ ಎಂದು ಟಿಎಂಸಿ ಸಂಸದೆ ಸುಶ್ಮಿತಾ ದೇವ್ ಆಕ್ಷೇಪ ವ್ಯಕ್ತಪಡಿಸಿದ್ದರು. ಕಾಂಗ್ರೆಸ್‌ನ ಸಂಸದರೂ ಈ ಆಕ್ಷೇಪಕ್ಕೆ ದನಿಗೂಡಿಸಿದ್ದರು.

ತಿದ್ದುಪಡಿ ಕಾಯ್ದೆಯಲ್ಲಿ, 'ಯಾವುದೇ ಉದ್ದೇಶಕ್ಕೆ' ಎಂಬ ಅಂಶವನ್ನು ಸೇರಿಸಲಾಗಿದೆ. ಆದರೆ ಆ ಉದ್ದೇಶಗಳು ಯಾವುವು ಎಂಬುದನ್ನು ಸ್ಪಷ್ಟಪಡಿಸಿಲ್ಲ. ಕಾಯ್ದೆಯಲ್ಲಿ ಸ್ಪಷ್ಟತೆ ಇಲ್ಲದೇ ಇರುವುದರಿಂದ ಸಾಕಾನೆಗಳ ದುರ್ಬಳಕೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಸಾಕಾನೆಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಳ್ಳಲೂ ಇದು ಅವಕಾಶ ಮಾಡಿಕೊಡುತ್ತದೆ. ಈ ಅಂಶದ ಬಗ್ಗೆ ಸಂಸತ್ತಿನಲ್ಲಿ ಟಿಎಂಸಿ ಮತ್ತು ಕಾಂಗ್ರೆಸ್‌ನ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದರು. ಆದರೆ, ಸರ್ಕಾರವು ಈ ಅಂಶವನ್ನು ಉಳಿಸಿಕೊಂಡು ಕಾಯ್ದೆ ಜಾರಿಗೊಳಿಸಿದೆ.

'ದೇಶದಲ್ಲಿ 2,675 ಸಾಕಾನೆಗಳಿದ್ದು, ಅವುಗಳಲ್ಲಿ 1,251 ಆನೆಗಳಿಗೆ ಸಂಬಂಧಿಸಿದಂತೆ ಮಾತ್ರ ಮಾಲೀಕತ್ವ ಪ್ರಮಾಣಪತ್ರವನ್ನು ನೀಡಲಾಗಿದೆ. 1,424 ಆನೆಗಳ ಮಾಲೀಕರು ಯಾರು ಎಂಬುದೇ ನಿರ್ಧಾರವಾಗಿಲ್ಲ. ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರವು ಕ್ರಮ ತೆಗೆದುಕೊಂಡಿಲ್ಲ. ಬದಲಿಗೆ ಸಾಕಾನೆಗಳನ್ನು ಯಾವುದೇ ಉದ್ದೇಶಕ್ಕೆ ಬಳಸಿಕೊಳ್ಳಲು ಅವಕಾಶ ಮಾಡಿಕೊಟ್ಟು, ಸಮಸ್ಯೆಯನ್ನು ಹೆಚ್ಚಿಸಿದೆ' ಎಂದು ಕಾಂಗ್ರೆಸ್ ಸಂಸದ ವಿವೇಕ್ ತಂಖಾ ಅವರು ಮಸೂದೆ ಮೇಲಿನ ಚರ್ಚೆ ವೇಳೆ ಆಕ್ಷೇಪ ವ್ಯಕ್ತಪಡಿಸಿದ್ದರು.

'ರಾಜ್ಯಗಳ ಅಧಿಕಾರ ಮೊಟಕು'

ವನ್ಯಜೀವಿ ಸಂರಕ್ಷಣೆಯಲ್ಲಿ ರಾಜ್ಯ ಸರ್ಕಾರಗಳಿಗೆ ಇದ್ದ ಅಧಿಕಾರವನ್ನು ಈ ತಿದ್ದುಪಡಿಗಳು ಮೊಟಕುಗೊಳಿಸುತ್ತವೆ ಎಂದು ಆರ್‌ಜೆಡಿ ಸಂಸದರು ಸಂಸತ್ತಿನಲ್ಲಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಆದರೆ, ಕೇಂದ್ರ ಸರ್ಕಾರವು ಅಂತಹ ತಿದ್ದುಪಡಿ ಅಂಶಗಳನ್ನು ತಿದ್ದುಪಡಿ ಕಾಯ್ದೆಯಲ್ಲಿಯೂ ಉಳಿಸಿಕೊಂಡಿದೆ.

ವನ್ಯಜೀವಿ ಸಂರಕ್ಷಣೆ ವಿಚಾರವು ಸಮವರ್ತಿ ಪಟ್ಟಿಯಲ್ಲಿ ಬರುತ್ತವೆ. ಅಂದರೆ ಈ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮಾನ ಅಧಿಕಾರ ಹೊಂದಿವೆ. ವನ್ಯಜೀವಿ ಸಂರಕ್ಷಣೆಗೆ ಸಂಬಂಧಿಸಿದ ಯಾವುದೇ ಕ್ರಮಗಳನ್ನು ಕೇಂದ್ರ ಸೂಚಿಸಿದರೂ, ರಾಜ್ಯ ವನ್ಯಜೀವಿ ಮಂಡಳಿಗಳು ಅದನ್ನು ಅನುಮೋದಿಸಬೇಕಿತ್ತು. ರಾಜ್ಯ ವನ್ಯಜೀವಿ ಮಂಡಳಿಗಳ ಶಿಫಾರಸಿನಂತೆ ರಾಜ್ಯ ಸರ್ಕಾರಗಳು ನಡೆದುಕೊಳ್ಳಬೇಕು ಎಂದು 1972ರ ಮೂಲ ಕಾಯ್ದೆಯ ಹಲವು ಸೆಕ್ಷನ್‌ಗಳಲ್ಲಿ ವಿವರಿಸಲಾಗಿದೆ. ಈ ಅಂಶಕ್ಕೆ ಕೇಂದ್ರ ಸರ್ಕಾರವು ತಿದ್ದುಪಡಿ ತಂದಿದೆ.

ಮೂಲ ಕಾಯ್ದೆಯ ಹಲವು ಸೆಕ್ಷನ್‌ಗಳಲ್ಲಿ ರಾಜ್ಯ ವನ್ಯಜೀವಿ ಮಂಡಳಿಯನ್ನು 'ಮಂಡಳಿ' ಎಂದಷ್ಟೇ ಉಲ್ಲೇಖಿಸಲಾಗಿತ್ತು. ತಿದ್ದುಪಡಿ ಕಾಯ್ದೆಯ ಹಲವು ಸೆಕ್ಷನ್‌ಗಳಲ್ಲಿ 'ಮಂಡಳಿ' ಎಂಬ ಪದವನ್ನು 'ರಾಷ್ಟ್ರೀಯ ಮಂಡಳಿ' ಎಂದು ಬದಲಿಸಲಾಗಿದೆ. ಹೀಗೆ ಅನ್ವಯವಾಗುವ ಸೆಕ್ಷನ್‌ಗಳ ಅಡಿಯಲ್ಲಿ ರಾಜ್ಯ ವನ್ಯಜೀವಿ ಮಂಡಳಿಗೆ ಇದ್ದ ಅಧಿಕಾರವನ್ನು 'ರಾಷ್ಟ್ರೀಯ ಮಂಡಳಿ'ಗೆ ವರ್ಗಾಯಿಸಲಾಗಿದೆ. ಈ ಸೆಕ್ಷನ್‌ಗಳಿಗೆ ಸಂಬಂಧಿಸಿದ ನಿರ್ಧಾರ ಮತ್ತು ಕ್ರಮಗಳನ್ನು ತೆಗೆದುಕೊಳ್ಳಲು ರಾಷ್ಟ್ರೀಯ ಮಂಡಳಿಯ ಶಿಫಾರಸು ಮತ್ತು ಸೂಚನೆಗಳಿಗೆ ರಾಜ್ಯ ಸರ್ಕಾರವು ಬದ್ಧವಾಗಿರಬೇಕಾಗುತ್ತದೆ.

'ಈ ತಿದ್ದುಪಡಿಯು, ರಾಜ್ಯ ವನ್ಯಜೀವಿ ಮಂಡಳಿಯನ್ನು ನಿಷ್ಕ್ರಿಯಗೊಳಿಸುತ್ತದೆ. ರಾಜ್ಯಗಳಿಗೆ ಸಂಬಂಧಿಸಿದ ಚಟುವಟಿಕೆಗಳಲ್ಲೂ ಕೇಂದ್ರ ಸರ್ಕಾರವು ಹಸ್ತಕ್ಷೇಪ ಮಾಡಲು ಇದು ಅವಕಾಶ ಮಾಡಿಕೊಡುತ್ತದೆ. ಇದು ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾದುದು' ಎಂದು ಆರ್‌ಜೆಡಿ ಸಂಸದ ಮನೋಜ್ ಝಾ ಆಕ್ಷೇಪ ವ್ಯಕ್ತಪಡಿಸಿದ್ದರು.

ಕೀಟಗಳ ಸಂರಕ್ಷಣೆ ಕಡೆಗಣನೆ

1972ರ ವನ್ಯಜೀವಿ ಸಂರಕ್ಷಣಾ ಕಾಯ್ದೆಯಲ್ಲಿ ಸಂರಕ್ಷಿತ ಪ್ರಭೇದಗಳನ್ನು ವರ್ಗೀಕರಿಸಲಾಗಿದೆ. ಈ ವರ್ಗೀಕರಣದ ಷೆಡ್ಯೂಲ್ 2ರ 2ನೇ ಭಾಗದಲ್ಲಿ ಕೀಟಗಳಿಗೆ ಸಂರಕ್ಷಣೆ ನೀಡಲಾಗಿತ್ತು. ತಿದ್ದುಪಡಿ ಕಾಯ್ದೆಯಲ್ಲೂ ಷೆಡ್ಯೂಲ್ 2ರ 2ನೇ ಚಾಪ್ಟರ್ ಹೆಸರಿನಲ್ಲಿ ಕೀಟಗಳ ಸಂರಕ್ಷಣೆಗೆ ಅವಕಾಶ ಕೊಡಲಾಗಿದೆ. ಆದರೆ, ಕೀಟಗಳನ್ನು ಹೊಂದುವ, ಸಾಗಿಸುವುದರ ಮೇಲಿದ್ದ ನಿರ್ಬಂಧಗಳನ್ನು ತಿದ್ದುಪಡಿ ಕಾಯ್ದೆಯಲ್ಲಿ ಸಡಿಲಗೊಳಿಸಲಾಗಿದೆ.



ಮೂಲ ಕಾಯ್ದೆಯ ಸೆಕ್ಷನ್ 48, 49ಎ, 51ಎ, 40, 40ಎ ಮತ್ತು 41ನೇ ಸೆಕ್ಷನ್‌ಗಳಿಂದ 'ಷೆಡ್ಯೂಲ್ 2ರ 2ನೇ ಭಾಗ' ಎಂಬ ಉಲ್ಲೇಖವನ್ನು ಕೈಬಿಡಲಾಗಿದೆ. ಕೀಟಗಳನ್ನು ಜೀವಂತವಾಗಿ ಹಿಡಿದಿಟ್ಟುಕೊಳ್ಳುವ ಅಥವಾ ಅವುಗಳ ಕಳೇಬರಗಳನ್ನು ಸಂಸ್ಕರಿಸಿ ಇಟ್ಟುಕೊಳ್ಳುವ, ಅಂತಹ ಸಂಗ್ರಹವನ್ನು ಸಾಗಿಸುವ ಚಟುವಟಿಕೆಗಳ ಮೇಲೆ ಈ ಸೆಕ್ಷನ್‌ಗಳು ನಿರ್ಬಂಧ ಹೇರುತ್ತವೆ. ಈ ಸೆಕ್ಷನ್‌ಗಳಿಂದ ಕೀಟಗಳನ್ನು ಹೊರಗಿಟ್ಟಿರುವ ಕಾರಣ, ಯಾರು ಬೇಕಾದರೂ ಅವುಗಳನ್ನು ಸಂಗ್ರಹಿಸಿ ಮತ್ತು ಸಂಸ್ಕರಿಸಿ ಇಟ್ಟುಕೊಳ್ಳುವುದು ಸಾಧ್ಯವಾಗುತ್ತದೆ. ಸಾಗಣೆಗೂ ಅವಕಾಶ ಇರುವ ಕಾರಣ ಇದು ಕಳ್ಳಸಾಗಣೆಗೆ ಅವಕಾಶ ಮಾಡಿಕೊಡುತ್ತದೆ ಎಂದು ತಜ್ಞರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕಾಮಗಾರಿಗಳಿಗೆ ಅವಕಾಶ?: ಅರಣ್ಯ ಪ್ರದೇಶದ ಒಳಗೆ ಮತ್ತು ಅಂಚಿನಲ್ಲಿ ಇರುವವರು ಅರಣ್ಯದಲ್ಲಿರುವ ನೀರಿನ ಮೂಲಗಳನ್ನು ಬಳಸಲು ತಿದ್ದುಪಡಿ ಕಾಯ್ದೆಯು ಅವಕಾಶ ಮಾಡಿಕೊಡುತ್ತದೆ. ಆದರೆ ಬಳಕೆಯ ಸ್ವರೂಪ ಎಂತದ್ದು ಮತ್ತು ನೀರನ್ನು ಅರಣ್ಯದಿಂದ ಹೊರಗೆ ಸಾಗಿಸುವ ವಿಧಾನ ಎಂತದ್ದು ಎಂಬುದನ್ನು ಕಾಯ್ದೆಯಲ್ಲಿ ಸ್ಪಷ್ಟಪಡಿಸಿಲ್ಲ. ಹೀಗಾಗಿ ಅರಣ್ಯ ಪ್ರದೇಶದಲ್ಲಿ ನೀರು ಸಾಗಣೆ ಕಾಮಗಾರಿಗಳನ್ನು ನಡೆಸಲು ಈ ತಿದ್ದುಪಡಿಯು ಅವಕಾಶ ಮಾಡಿಕೊಟ್ಟಿದೆ ಎಂದು ಸಂಸತ್ತಿನಲ್ಲಿ ಆಕ್ಷೇಪ ವ್ಯಕ್ತವಾಗಿತ್ತು. ಹೀಗಿದ್ದೂ ಈ ಅಂಶವನ್ನು ಸರ್ಕಾರವು ತಿದ್ದುಪಡಿ ಕಾಯ್ದೆಯಲ್ಲಿ ಉಳಿಸಿಕೊಂಡಿದೆ.

ಪ್ರಾಣಿಗಳ ಮಾರಾಟ, ಸಾಗಣೆಗೆ ಇಲ್ಲ ಅಡ್ಡಿ

ಅಳಿವಿನಂಚಿನಲ್ಲಿರುವ ವನ್ಯಜೀವಿ ಮತ್ತು ಸಸ್ಯಪ್ರಭೇದಗಳ ಅಂತರರಾಷ್ಟ್ರೀಯ ವ್ಯಾಪಾರ ಒಡಂಬಡಿಕೆಯಲ್ಲಿ (ಸಿಐಟಿಇಎಸ್) ಪಟ್ಟಿ ಮಾಡಲಾಗಿರುವ ಪ್ರಾಣಿಗಳು ಮತ್ತು ಸಸ್ಯಗಳನ್ನು ಹೊಂದಲು, ವರ್ಗಾಯಿಸಲು ಮತ್ತು ಮಾರಾಟ ಮಾಡಲು ವನ್ಯಜೀವಿ ತಿದ್ದುಪಡಿ ಕಾಯ್ದೆ-2022 ಅವಕಾಶ ಮಾಡಿಕೊಟ್ಟಿದೆ. ಪಟ್ಟಿ ಮಾಡಲಾದ ಪ್ರಭೇದಗಳ ಮಾದರಿಗಳ ವ್ಯಾಪಾರವನ್ನು ಪರವಾನಗಿ ಮೂಲಕ ನಿಯಂತ್ರಿಸುವುದು ಈ ಒಡಂಬಡಿಕೆಯಲ್ಲಿದೆ. ಈ ಒಡಂಬಡಿಕೆಯನ್ನು ಪಾಲಿಸುವ ಉದ್ದೇಶದಿಂದ ಕಾಯ್ದೆಯಲ್ಲಿ ಅದಕ್ಕೆ ಅನುಗುಣವಾದ ತಿದ್ದುಪಡಿಗಳನ್ನು ಕೇಂದ್ರ ಸರ್ಕಾರ ಮಾಡಿದೆ. ವನ್ಯಜೀವಿ ಮತ್ತು ಸಸ್ಯಗಳ ಮಾರಾಟ, ಆಮದು, ತಡೆ ಹಾಗೂ ನಿಯಂತ್ರಿಸುವ ಸಂಪೂರ್ಣ ಅಧಿಕಾರದ ಕೇಂದ್ರ ಸರ್ಕಾರದ ಅಧೀನದಲ್ಲಿರುತ್ತದೆ.

ಪ್ರಾಣಿಗಳ ಮಾರಾಟ, ವರ್ಗಾವಣೆ ಅಥವಾ ಅವುಗಳನ್ನು ಇರಿಸಿಕೊಳ್ಳಲು ವನ್ಯಜೀವಿ ತಿದ್ದುಪಡಿ ಕಾಯ್ದೆಯಲ್ಲಿ ಷರತ್ತಿನ ಅನುಮತಿ ನೀಡಲಾಗಿದೆ. ನಾಲ್ಕನೇ ಷೆಡ್ಯೂಲ್‌ನಲ್ಲಿ ಉಲ್ಲೇಖಿಸಲಾಗಿರುವ ಪ್ರಾಣಿ ಪ್ರಭೇದಗಳು ಹಾಗೂ ಸಸ್ಯ ಪ್ರಭೇದಗಳನ್ನು ಮಾತ್ರ ಈ ಉದ್ದೇಶಗಳಿಗೆ ಬಳಸಿಕೊಳ್ಳಬಹುದು. ವ್ಯಕ್ತಿಯೊಬ್ಬರು ತಮ್ಮ ವಶದಲ್ಲಿರುವ ಪ್ರಾಣಿಯ ಒಡೆತನವನ್ನು ಅಕ್ರಮವಾಗಿ ಹೊಂದುವ ಬದಲು, ಸಂಬಂಧಿತ ಪ್ರಾಧಿಕಾರಕ್ಕೆ ಮಾಹಿತಿ ನೀಡಿ ಅದನ್ನು ಕಾನೂನುಬದ್ಧವಾಗಿಸಿಕೊಳ್ಳಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ನಿರ್ವಹಣಾ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ, ಪ್ರಮಾಣಪತ್ರ ಪಡೆದುಕೊಳ್ಳುವ ಮೂಲಕ ಅವುಗಳನ್ನು ಮಾರಾಟ ಮಾಡುವ, ಇರಿಸಿಕೊಳ್ಳುವ, ವರ್ಗಾಯಿಸುವ ಅವಕಾಶ ಪಡೆದುಕೊಳ್ಳಬಹುದು. ಎಲ್ಲವನ್ನೂ ಪ್ರಾಧಿಕಾರದ ಗಮನಕ್ಕೆ ತರಬೇಕು. ತಮ್ಮ ಬಳಿಯಿರುವ, ಪ್ರಾಣಿ ಪ್ರಭೇದಗಳ ಸಂತಾನ ಬೆಳೆದರೆ ಅಥವಾ ಅವು ಮೃತಪಟ್ಟರೆ, ಈ ಮಾಹಿತಿಯನ್ನೂ ಸಂಬಂಧಿತ ಪ್ರಾಧಿಕಾರಕ್ಕೆ ನೀಡಬೇಕಿದೆ.

ನಿಯಮಗಳನ್ನು ಉಲ್ಲಂಘಿಸಿದರೆ ವಿಧಿಸುವ ದಂಡದ ಪ್ರಮಾಣವನ್ನು ತಿದ್ದುಪಡಿ ಕಾಯ್ದೆಯಲ್ಲಿ ಹೆಚ್ಚಿಸಲಾಗಿದೆ. ಸಾಮಾನ್ಯ ಉಲ್ಲಂಘನೆಗಳಿಗೆ ಇದ್ದ ದಂಡವನ್ನು ₹25,000ದಿಂದ ₹1 ಲಕ್ಷಕ್ಕೆ ಏರಿಸಲಾಗಿದೆ. ವಿಶೇಷ ಪ್ರಾಣಿಗಳ ಪ್ರಕರಣದಲ್ಲಿ ಇದ್ದ ಕನಿಷ್ಠ ದಂಡವನ್ನು ₹10,000ದಿಂದ ₹25,000ಕ್ಕೆ ಏರಿಸಲಾಗಿದೆ.

ಆಧಾರ: ವನ್ಯಜೀವಿ ಸಂರಕ್ಷಣಾ ಕಾಯ್ದೆ–1972, ವನ್ಯಜೀವಿ ಸಂರಕ್ಷಣಾ ತಿದ್ದುಪಡಿ ಮಸೂದೆ–2022, ವನ್ಯಜೀವಿ ಸಂರಕ್ಷಣಾ ತಿದ್ದುಪಡಿ ಕಾಯ್ದೆ–2022, ಪಿಟಿಐ


ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

2023ರ ಎಫ್‌ಐಎಚ್ ಹಾಕಿ ವಿಶ್ವಕಪ್ ಟೂರ್ನಿಯಲ್ಲಿ 1975ರ ಫಲಿತಾಂಶವನ್ನು ಪುನರಾವರ್ತಿಸುವ ಸಾಮರ್ಥ್ಯ ಭಾರತಕ್ಕೆ ಇದೆ ಎಂದು ಭಾವಿಸುತ್ತೀರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ರಾಜ್ಯಪಾಲ ಆರ್‌.ಎನ್‌.ರವಿ ಸ್ಪಷ್ಟನೆ

'ತಮಿಳುನಾಡು ಹೆಸರು ಬದಲಾವಣೆ ಸೂಚಿಸಿರಲಿಲ್ಲ'

ಪ್ರಜಾವಾಣಿ ವಾರ್ತೆ

ಚೆನ್ನೈ: 'ತಮಿಳುನಾಡು ಹೆಸರು ಬದಲಾವಣೆಗೆ ಸೂಚಿಸಿರಲಿಲ್ಲ' ಎಂದು ರಾಜ್ಯದ ರಾಜ್ಯಪಾಲ ಆರ್.ಎನ್.ರವಿ ಅವರು ಬುಧವಾರ ಸ್ಪಷ್ಟನೆ ನೀಡಿದ್ದಾರೆ.

ತಮಿಳುನಾಡು ಸರ್ಕಾರ ಹಾಗೂ ರಾಜ್ಯಪಾಲರ ಜಟಾಪಟಿ ವಿಚಾರದಲ್ಲಿ ರಾಜ್ಯ ಸರ್ಕಾರದ ಕೈ ಮೇಲಾದಂತೆ ಕಾಣುತ್ತಿದೆ. ರಾಜ್ಯದ ಹೆಸರನ್ನು 'ತಮಿಳಗಂ' ಎಂಬುದಾಗಿ ಬದಲಾವಣೆಗೆ ಪ್ರಸ್ತಾಪಿಸಿದ್ದ ರಾಜ್ಯಪಾಲ ರವಿ ಅವರ ನಡೆಯಿಂದ ನಷ್ಟವೇ ಅಧಿಕ ಎಂಬುದು ಗೊತ್ತಾಗುತ್ತಿದ್ದಂತೆಯೇ, ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಿದೆ ಎನ್ನಲಾಗಿದೆ. ಹೀಗಾಗಿಯೇ, ಬುಧವಾರ ದೆಹಲಿಗೆ ತೆರಳಿದ ರಾಜ್ಯಪಾಲ ರವಿ ಅವರು ನೀಡಿರುವ ಸ್ಪಷ್ಟನೆಯು, ಉಲ್ಬಣವಾಗಬಹುದಾದ ಜಟಾಪಟಿ ಹಾಗೂ ತಮಿಳಿಗರಿಂದ ಎದುರಾಗಿರುವ ಮುಜುಗರದಿಂದ ಪಾರಾಗಲು ಯತ್ನಿಸಿದಂತೆ ತೋರುತ್ತದೆ.



ಆರ್‌.ಎನ್‌. ರವಿ

'ಕಾಶಿ ಜೊತೆಗೆ ತಮಿಳಿಗರ ನಂಟು ಬೆಸೆದಿದ್ದ ಸಮಯದಲ್ಲಿ 'ತಮಿಳುನಾಡು' ಎಂಬುದು ಇರಲಿಲ್ಲ. ಹೀಗಾಗಿಯೇ ತಮಿಳಗಂ ಎಂಬ ಪದವನ್ನು ಐತಿಹಾಸಿಕ ಸಾಂಸ್ಕೃತಿಕ ಅರ್ಥದಲ್ಲಿ ಬಳಸಿದ್ದೆ. ಆದರೆ, ಈ ಪದ ಬಳಕೆಯನ್ನು ರಾಜ್ಯದ ಹೆಸರು ಬದಲಾವಣೆಗೆ ಮಾಡಿದ ಪ್ರಸ್ತಾವ ಎಂದು ತಪ್ಪಾಗಿ ಅರ್ಥೈಸಲಾಗುತ್ತಿದೆ' ಎಂದು ರಾಜ್ಯಪಾಲರು ಸ್ಪಷ್ಟನೆ ನೀಡಿದ್ದಾರೆ. ಆದರೆ ರಾಜ್ಯಪಾಲರ ಸ್ಪಷ್ಟನೆಗೆ ತಮಿಳು ವಿದ್ವಾಂಸರು ತಿರುಗೇಟು ನೀಡಿದ್ದಾರೆ. ಶಿಲಪ್ಪದಿಗಾರಂ, ಮಣಿಮೇಕಲೈ ಮೊದಲಾದ ಸಮೃದ್ಧ ತಮಿಳು ಸಾಹಿತ್ಯದಲ್ಲಿ ತಮಿಳುನಾಡಿನ ಉಲ್ಲೇಖವಿರುವುದನ್ನು ಎತ್ತಿ ತೋರಿಸಿದ್ದಾರೆ.

ಜನವರಿ 4ರಂದು ಕಾಶಿ ತಮಿಳು ಸಂಘದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ರಾಜ್ಯಪಾಲರು 'ತಮಿಳಗಂ ಪದವು ತಮಿಳುನಾಡು ಎಂಬುದಕ್ಕಿಂತ ಹೆಚ್ಚು ಸೂಕ್ತವಾಗಿದೆ' ಎಂದು ಅಭಿಪ್ರಾಯಪಟ್ಟಿದ್ದರು. ಇದು ಆಡಳಿತಾರೂಢ ಡಿಎಂಕೆ ಮಾತ್ರವಲ್ಲದೇ, ಪ್ರತಿಪಕ್ಷಗಳನ್ನೂ ಕೆರಳಿಸಿದೆ. ಭಾಷೆ ಹಾಗೂ ರಾಜಕೀಯ ಅಸ್ಮಿತೆಗೆ ಹೆಸರಾಗಿರುವ ತಮಿಳುನಾಡಿನಲ್ಲಿ ಬಿಜೆಪಿ ಇನ್ನೂ ಅಂಬೆಗಾಲಿಡುತ್ತಿದೆ. ಹೀಗಿರುವಾಗ, ರಾಜ್ಯಪಾಲರ ಮಾತು ಪಕ್ಷಕ್ಕೆ ಹಿನ್ನಡೆ ತರಬಹುದು ಎಂದು ಭಾವಿಸಿದ ಕೇಂದ್ರ, ಮಧ್ಯಪ್ರವೇಶ ಮಾಡಿದೆ ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹಾಗೂ ರಾಜ್ಯಪಾಲರ ನಡುವೆ ಇತ್ತೀಚಿನ ದಿನಗಳಲ್ಲಿ ಹಲವು ವಿಚಾರಗಳಲ್ಲಿ ಜಟಾಪಟಿ ನಡೆದಿದೆ. ಈ ಎಲ್ಲ ವಿಚಾರಗಳಲ್ಲಿ ರಾಜ್ಯಪಾಲರ ನಡೆಯನ್ನು ಬೆಂಬಲಿಸುತ್ತಾ ಬಂದಿರುವ ರಾಜ್ಯದ ಬಿಜೆಪಿ ಘಟಕದ ಮುಖ್ಯಸ್ಥ ಕೆ. ಅಣ್ಣಾಮಲೈ ಅವರು, ತಮಿಳಗಂ ವಿಚಾರದಲ್ಲಿ ರಾಜ್ಯಪಾಲರ ಹೇಳಿಕೆಯಿಂದ ಅಂತರ ಕಾಯ್ದುಕೊಂಡಿರುವುದು ವಿಶೇಷ.

ತಮಿಳಗಂ ಸೂಕ್ತ ಹೆಸರು ಎಂದಿದ್ದರು...

'ತಮಿಳುನಾಡು ಎಂಬ ಹೆಸರಿಗಿಂತ ತಮಿಳಗಂ ಎಂಬ ಹೆಸರು ಹೆಚ್ಚು ಸೂಕ್ತ' ಎಂದು ರಾಜ್ಯಪಾಲ ಆರ್.ಎನ್.ರವಿ ಅವರು ಜನವರಿ 4ರಂದು ಕಾಶಿ ತಮಿಳು ಸಂಘಂ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹೇಳಿದ್ದರು.

'ತಮಿಳುನಾಡು ಎಂಬ ಹೆಸರು, ತಮ್ಮದೇ ಪ್ರತ್ಯೇಕ ದೇಶ ಎಂಬ ಭಾವನೆಯನ್ನು ತಮಿಳರಲ್ಲಿ ಮೂಡಿಸುತ್ತಿದೆ. ಹೀಗಾಗಿಯೇ ಅವರು ತಮ್ಮನ್ನು ದ್ರಾವಿಡರು ಎಂದು ಗುರುತಿಸಿಕೊಳ್ಳುತ್ತಾರೆ. ಅವರು ತಾವು ಭಾರತದ ಭಾಗ ಎಂದು ಅಂದುಕೊಂಡಿಲ್ಲ. ಹೀಗಾಗಿಯೇ ಅವರು ದೇಶಕ್ಕೆ ಸಂಬಂಧಿಸಿದ ಎಲ್ಲಾ ವಿಚಾರದಲ್ಲೂ ಭಿನ್ನ ನಿಲುವು ತೆಗೆದುಕೊಳ್ಳುತ್ತಾರೆ. ರಾಜ್ಯದ ಹೆಸರನ್ನು ತಮಿಳಗಂ ಎಂದು ಬದಲಿಸಿದರೆ ಇದು ಸರಿಹೋಗಬಹುದು' ಎಂದು ಆ ಕಾರ್ಯಕ್ರಮದಲ್ಲಿ ರಾಜ್ಯಪಾಲ ರವಿ ಹೇಳಿದ್ದರು.

ಪೊಂಗಲ್ ಹಬ್ಬದ ಸಲುವಾಗಿ ರಾಜಭವನವು ಹೊರಡಿಸಿದ್ದ ಆಹ್ವಾನ ಪತ್ರಿಕೆಯಲ್ಲಿ ತಮಿಳುನಾಡು ಸರ್ಕಾರದ ಲಾಂಛನವನ್ನು ಕೈಬಿಡಲಾಗಿತ್ತು. ಜತೆಗೆ ಈ ಪತ್ರಿಕೆಯಲ್ಲಿ ರಾಜ್ಯಪಾಲರನ್ನು 'ತಮಿಳಗಂ ರಾಜ್ಯಪಾಲ' ಎಂದು ಸಂಬೋಧಿಸಲಾಗಿತ್ತು. ಇದಕ್ಕೂ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಸಾಮೂಹಿಕ ಭೋಜನಕ್ಕೆ ಸಿದ್ಧಪಡಿಸಲಾದ ಆಹಾರದ ಮೇಲೆ ಮುಸ್ಲಿಂ ವ್ಯಕ್ತಿಯೊಬ್ಬರು ಉಗುಳುತ್ತಿದ್ದಾರೆ ಎಂದು ಹೇಳಲಾಗುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಬಿಳಿವಸ್ತ್ರದಲ್ಲಿರುವ ವ್ಯಕ್ತಿಯೊಬ್ಬರು ಅನ್ನದ ದೊಡ್ಡ ಪಾತ್ರೆಯ ಎದುರು ನಿಂತು, ತಟ್ಟೆಯೊಂದಕ್ಕೆ ಅನ್ನ ಬಡಿಸಿಕೊಂಡು ಅದನ್ನು ತಮ್ಮ ಬಾಯಿಯ ಬಳಿಗೆ ಒಯ್ದು ಏನನ್ನೋ ಮಾಡುತ್ತಿರುವುದು ವಿಡಿಯೊದಲ್ಲಿ ಕಾಣಿಸುತ್ತದೆ. ನಂತರ, ತಟ್ಟೆಯಲ್ಲಿರುವ ಅನ್ನವನ್ನು ದೊಡ್ಡ ಪಾತ್ರೆಗೆ ಸುರಿಯಲಾಗುತ್ತದೆ. 'ಅನ್ನಕ್ಕೆ ಈ ರೀತಿ ಉಗುಳುವುದರ ಹಿಂದಿನ ತರ್ಕವೇನು' ಎಂದು ಟ್ವಿಟರ್ ಬಳಕೆದಾರ ಮೇಜರ್ ಸುರೇಂದ್ರ ಪೂನಿಯಾ ಅವರು ಪ್ರಶ್ನಿಸಿದ್ದಾರೆ. ಈ ವಿಡಿಯೊವನ್ನು ನೂರಾರು ಜನರು ತಮ್ಮ ಫೇಸ್‌ಬುಕ್, ಟ್ವಿಟರ್ ಖಾತೆಗಳಲ್ಲಿ ಹಂಚಿಕೊಂಡಿದ್ದಾರೆ. ಆದರೆ ಈ ಆರೋಪ ಸುಳ್ಳು.



Image Credit: Siasat Daily

ಕೇರಳದ ಮುಸ್ಲಿಂ ಮೌಲ್ವಿ ಉಲ್ಲಾಳ್ ಥಂಗಲ್ ಅವರು ಅನ್ನ ಸಂತರ್ಪಣೆಗೂ ಮುನ್ನ, ತಟ್ಟೆಯಲ್ಲಿ ಬಡಿಸಿಕೊಂಡ ಅನ್ನದ ಮೇಲೆ ಗಾಳಿಯನ್ನು ಊದಿ ದುವಾ ಸಲ್ಲಿಸಿ ಧಾರ್ಮಿಕ ಆಚರಣೆ ಪಾಲಿಸಿದ್ದಾರೆ. ಆದರೆ, ಮೌಲ್ವಿ ಅವರು ಅನ್ನಕ್ಕೆ ಉಗುಳಿದ್ದಾರೆ ಎಂದು ತಪ್ಪಾಗಿ ಬಿಂಬಿಸಲಾಗಿದೆ ಎಂದು 'ದಿ ಲಾಜಿಕಲ್ ಇಂಡಿಯನ್' ವೆಬ್‌ಸೈಟ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ. ಈ ವಿಡಿಯೊ ಸಹ ಇತ್ತೀಚಿನದ್ದಲ್ಲ. 2021ರಲ್ಲೇ ಇದು ಸಾಮಾಜಿಕ ಜಾಲತಾಣಗಳಲ್ಲಿ ಇತ್ತು. ಇದನ್ನು ತಪ್ಪಾಗಿ ಅರ್ಥೈಸಲಾಗಿದೆ ಎಂದು ಹಲವು ವೆಬ್‌ಸೈಟ್‌ಗಳು ಫ್ಯಾಕ್ಟ್‌ಚೆಕ್ ಪ್ರಕಟಿಸಿದ್ದವು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜನವರಿ 19, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪೌಷ ಕೃಷ್ಣದ್ವಾದಶಿ ಗಂ. 13-19ನಕ್ಷತ್ರ: ಜ್ಯೇಷ್ಠ ಗಂ. 15-18 ಯೋಗ: ಧ್ರುವ ಗಂ. 23-04, ಕರಣ: ತೈತಿಲ ಗಂ. 13-19, ಮಕರ ಮಾಸದ 05 ನೇ ದಿನ. ರಾಹುಕಾಲ : ಮಧ್ಯಾಹ್ನ 01-30 –03-00
ಸೂರ್ಯೋದಯ : 07-01 ಸೂರ್ಯಾಸ್ತ : 06-19
ಮುಸ್ಲಿಂ ದಿನಾಂಕ : 26 ಜುಮಾದುಸ್ಸಾನಿ
ದಿನ ವಿಶೇಷ : ಪಕ್ಷ ಪ್ರದೋಷ
ಅದೃಷ್ಟ ಸಂಖ್ಯೆ : 3, 9

ಮೇಷ: ಆಟೋಮೊಬೈಲ್ ಎಂಜಿನಿಯರ್‌ಗಳಿಗೆ ವಿಶೇಷ ಲಾಭ. ಕೆಲಸದಲ್ಲಿ ಅಪ್ರಾಮಾಣಿಕತೆ ಹಾಗೂ ದುಡುಕಿನ ನಿರ್ಧಾರ ತೆಗೆದುಕೊಂಡಲ್ಲಿ ಪಶ್ಚಾತಾಪ ಪಡಬೇಕಾದ ಸಂದರ್ಭ ಅನಿವಾರ್ಯವಾಗಿ ಒದಗಿಬರುತ್ತದೆ.

ವೃಷಭ: ಗುರಿಯನ್ನು ತಲುಪುವಲ್ಲಿ ನಿಮ್ಮ ಪರಿಶ್ರಮದ ಕೊರತೆ ಮತ್ತು ಅದೃಷ್ಟ ಹೀನತೆಯು ಸಮಬಲ ಸಾಧಿಸುವುದು. ಇಂದು ದೂರದ ಊರಿನಲ್ಲಿರುವ ಆಪ್ತರನ್ನು ಭೇಟಿ ಮಾಡುವ ಸಲುವಾಗಿ ಪ್ರಯಾಣ ಕೈಗೊಳ್ಳಬೇಕಾಗುತ್ತದೆ.

ಮಿಥುನ: ಕಾರ್ಯಕ್ಷೇತ್ರದಲ್ಲಿ ಹೆಚ್ಚಿನ ಒತ್ತಡ ತೋರಿಬಂದರೂ ಅಭಿವೃದ್ಧಿದಾಯಕ ಬೆಳವಣಿಗೆ ಹರ್ಷ ತರುವುದು. ನಿರೀಕ್ಷೆಗೂ ಮೀರಿ ಸಹಾಯ ಸೌಹಾರ್ದಗಳು ದೊರೆಯುವುದು. ಧಾರ್ಮಿಕ ವ್ಯಕ್ತಿಗಳನ್ನು ಭೇಟಿ ಮಾಡುವಿರಿ

ಕರ್ಕಾಟಕ: ವಿದೇಶ ವ್ಯಾಸಂಗದ ಅಭಿಲಾಷಿಗಳಿಗೆ ಶುಭ ಸುದ್ದಿ ಕೇಳುವ ದಿನ ಇದಾಗಿದೆ. ರಬ್ಬರ್, ಪ್ಲಾಸ್ಟಿಕ್ ಸಂಬಂಧಿತ ವ್ಯಾಪಾರದಲ್ಲಿರುವವರು ವೃತ್ತಿಯಲ್ಲಿ ಹೆಚ್ಚಿನ ಏರಿಳಿತಗಳೆರಡೂ ಕಂಡುಬಂದರೂ ನೆಮ್ಮದಿಗೆ ಕೊರತೆ ಇರುವುದಿಲ್ಲ.

ಸಿಂಹ: ಸಾಮಾಜಿಕ ಕ್ಷೇತ್ರದಲ್ಲಿ ಹೆಸರು ಸಂಪಾದನೆ ಮಾಡುವ ಅಪೇಕ್ಷಿಗಳಿಗೆ ಹಲವಾರು ಉತ್ತಮ ಅವಕಾಶಗಳು ಎದುರಾಗುವುದು. ಜಾಣ್ಮೆ ತೋರಿದಲ್ಲಿ ಅದೃಷ್ಟ ನಿಮ್ಮದಾಗಲಿದೆ. ಗುರು ಹಿರಿಯರ ಆಶೀರ್ವಾದ ಪಡೆಯಿರಿ.

ಕನ್ಯಾ: ಉದರವ್ಯಾಧಿ ಅಥವಾ ಜೀರ್ಣಾಂಗಕ್ಕೆ ಸಂಬಂಧಿಸದಂತೆ ಅನಾರೋಗ್ಯ ಎದುರಾಗಬಹುದು. ನೀವು ಯೋಚಿಸುವ ಪ್ರತಿಯೊಂದು ಕೆಲಸ-ಕಾರ್ಯಗಳು ವಿಳಂಬ ರೀತಿಯಲ್ಲಿ ನಡೆಯುವುದು.

ತುಲಾ: ಅಲಂಕಾರಿಕ ವಸ್ತುಗಳ ಮಾರಾಟದಿಂದ ಹೆಚ್ಚು ಆದಾಯ ಗಳಿಸುವಿರಿ. ಆರ್ಥಿಕ ಸಮಸ್ಯೆಗಳಿಂದ ಮುಕ್ತಿಯನ್ನು ಹೊಂದಬಹುದು. ಶ್ರೀ ಮಂಜುನಾಥ ಸ್ವಾಮಿಯ ದರ್ಶನ ಭಾಗ್ಯ ದೊರೆತು ಮನಸ್ಸಿಗೆ ನೆಮ್ಮದಿ ಇರುವುದು.

ವೃಶ್ಚಿಕ: ವರ್ಗಾವಣೆ ಮಾಡಿಸಿಕೊಳ್ಳುವ ಪ್ರಯತ್ನ ವಿಫಲವಾಗಲಿದೆ. ಕೇಟರಿಂಗ್ ಸೇವೆಯನ್ನು ಮಾಡುವವರಿಗೆ ಅಧಿಕ ಲಾಭದ ಜತೆಗೆ ಸಂಪನ್ಮೂಲ ವ್ಯಕ್ತಿಗಳ ಬಳಕೆಯಾಗುವುದು. ಸಿನೆಮಾ ರಂಗದವರಿಗೆ ಆರ್ಥಿಕ ಲಾಭ ಉಂಟಾಗಲಿದೆ.

ಧನು: ಹಣ ಹೂಡಿಕೆಯ ವಿಚಾರದಲ್ಲಿ ನಿಮ್ಮ ಅನಿಸಿಕೆಯಂತೆ ನಡೆಯುವುದು ಉತ್ತಮವಾಗಿರುತ್ತದೆ. ಕಲಾವಿದರಿಗೆ ಮುಂಬರುವ ಸ್ಪರ್ಧೆಗಳಿಗೆ ತಯಾರಿ ಮಾಡಿಕೊಳ್ಳಲು ಶುಭದಿನ. ಮದುವೆ ಸಿದ್ಧತೆಗಳು ನಡೆಯುತ್ತದೆ.

ಮಕರ: ವಾಕ್ಚಾತುರ್ಯದಿಂದ ಕೆಲಸ ಕಾರ್ಯಗಳನ್ನು ನೆರವೇರಿಸಿ ಕೊಳ್ಳುವಿರಿ. ತತ್ವಜ್ಞಾನಿಗಳೊಡನೆ ಸುದೀರ್ಘ ಚರ್ಚೆ ನಡೆದು ಬುದ್ಧಿಮಟ್ಟ ಹೆಚ್ಚಲಿದೆ. ನಿಶ್ಚಿತ ಕಾರ್ಯಗಳಿಗೆ ಹಣದ ಹರಿವು ಸರಾಗವಾಗಿರುವುದು.

ಕುಂಭ: ಮಂಗಳ ಕಾರ್ಯಗಳ ಶುಭ ಸೂಚನೆಗಳು ಕಂಡುಬರುತ್ತದೆ. ಹಂತ ಹಂತವಾಗಿ ನಿಮ್ಮ ಆರ್ಥಿಕ ಸ್ಥಿತಿಯು ಗಟ್ಟಿಯಾಗುತ್ತಲೇ ಹೋಗಲಿದೆ. ದಿನದಿಂದ ದಿನಕ್ಕೆ ತಂದೆ- ತಾಯಿಯವರ ಆರೋಗ್ಯ ಸ್ಥಿತಿ ಉತ್ತಮವಾಗಿರುತ್ತದೆ.

ಮೀನ: ಉನ್ನತ ಹುದ್ದೆಯಿಂದ ಮನಸ್ಸಿಗೆ ಖುಷಿಯಿದ್ದರೂ ಕೆಲಸದ ಒತ್ತಡದಿಂದ ಶಿರೋವೇದನೆ ಕಾಣಿಸಬಹುದು. ಮನೆಗೆ ಸೋದರಿಯರ ಆಗಮನದ ಸಂತಸ, ಹಬ್ಬದ ವಾತಾವರಣವನ್ನು ತರುತ್ತದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ



ಜೀವನ್ಮುಕ್ತ

ಎಲ್ಲರೊಳು ತಾನು ತನ್ನೊಳಗೆಲ್ಲರಿರುವವೋ - |
ಲೆಲ್ಲೆಲ್ಲಿಯುಂ ನೋಡಿ ನಡೆದು ನಗುತಳುತ ||
ಬೆಲ್ಲ ಲೋಕಕ್ಕಾಗಿ ತನಗೆ ತಾಂ ಕಲ್ಲಾಗ |
ಬಲ್ಲವನೆ ಮುಕ್ತನಲ - ಮಂಕುತಿಮ್ಮ || 803 ||

ಪದ-ಅರ್ಥ: ಎಲ್ಲರೊಳು = ಎಲ್ಲರಲ್ಲಿ, ತನ್ನೊಳಗೆಲ್ಲರಿರುವವೋಲೆಲ್ಲೆಲ್ಲಿಯುಂ = ತನ್ನೊಳಗೆ + ಎಲ್ಲರೂ + ಇರುವವೋಲ್(ಇರುವಂತೆ) + ಎಲ್ಲೆಲ್ಲಿಯುಂ(ಎಲ್ಲೆಡೆಗೂ), ತಾ = ತಾನು.


ವಾಚ್ಯಾರ್ಥ: ಎಲ್ಲರಲ್ಲಿ ತನ್ನನ್ನು ಮತ್ತು ತನ್ನಲ್ಲಿ ಎಲ್ಲರೂ ಇರುವಂತೆ ಎಲ್ಲೆಡೆಗೆ ನೋಡಿ ನಡೆದು, ಅವರೊಂದಿಗೆ ನಗುತ್ತ, ಅಳುತ್ತ, ಲೋಕಕ್ಕೆ ಸಂತಸ ನೀಡುವ ಬೆಲ್ಲವಾಗಿ, ತನ್ನ ಮಟ್ಟಿಗೆ ತಾನು ಕಲ್ಲಿನಂತೆ ಧೃಡವಾಗಿ ಇರಬಲ್ಲವನೇ ಮುಕ್ತ.

ವಿವರಣೆ: ಬಸವಣ್ಣ, ಕಲ್ಯಾಣವೆಂಬ ಸಾಮಾನ್ಯ ರಾಜ್ಯಕ್ಕೆ ದೈವೀಕಳೆಯನ್ನು ತಂದು ಕೊಟ್ಟವರು. ಅದನ್ನೊಂದು ಕೈಲಾಸದಂತೆ ಮಾಡಲು ಕಾರ್ಯಯೋಗವನ್ನು ಕೈಕೊಂಡು ಅಹರ್ನಿಶಿ ದುಡಿದರು. ಸಮಾನತೆಗಾಗಿ ಒದ್ದಾಡಿದರು, ಜಾತಿ ಮತಗಳ ಭೇದಗಳನ್ನು ತೊಡೆದು ಹಾಕಲು ಶ್ರಮಿಸಿದರು. ಅವೆಲ್ಲ ಸುಲಭವಾಗಿ ಆಗುವಂಥವುಗಳೇ? ಶತಮಾನಗಳಿಂದ ಬಂದ ಜಿಡ್ಡನ್ನು ತೆಗೆದು ಹಾಕಲು ಹಗಲು ರಾತ್ರಿ ಪರಿಶ್ರಮ ಪಟ್ಟರು. ಅವರ ಸತತವಾದ ಪ್ರಯತ್ನದಿಂದ ಕಲ್ಯಾಣ ಭೂಕೈಲಾಸವಾಗಿತ್ತು. ಅವರ ಮಹಾಮನೆ ಶ್ರದ್ಧಾಕೇಂದ್ರವಾಗಿತ್ತು. ಆದರೂ ಅವರಿಗೊಂದು ಜವಾಬ್ದಾರಿ. ಅದು ಬಿಜ್ಜಳನ ಮಂತ್ರಿಯ ಕಾಯಕ. ತಮ್ಮ ಕಾರ್ಯನಿರ್ವಹಣೆಯಲ್ಲಿ ಯಾವ ಕೊರೆಯೂ ಆಗದಂತೆ ರಾಜ್ಯದ ಕ್ಷೇಮಕ್ಕಾಗಿ ದುಡಿದರು. ಅವರನ್ನು ಕಂಡರೆ ಎಲ್ಲರಿಗೂ, ರಾಜನಿಗೂ ಸಹಿತ, ಅಪಾರ ಗೌರವ, ಪ್ರೀತಿ. ಹೀಗೆ ಕಲ್ಯಾಣ, ಬಸವಣ್ಣನವರನ್ನು ಗಟ್ಟಿಯಾಗಿ ಹಿಡಿದಪ್ಪಿಕೊಂಡಿತ್ತು. ಆದರೆ ಏನೋ ಒಂದು ಅಹಿತಕರ ಘಟನೆ ನಡೆಯಿತು. ಅಪವಾದ ಬಂದಿತು. ಒಂದು ಮಾತನ್ನೂ ಆಡದೆ, ಬಸವಣ್ಣನವರು ತಾವೇ ಕಟ್ಟಿ ನಿಲ್ಲಿಸಿದ್ದ ಸುಂದರ ಕಲ್ಯಾಣವನ್ನು ಬಿಟ್ಟು ನಗುನಗುತ್ತ ಕೂಡಲಸಂಗನತ್ತ ನಡೆದೇಬಿಟ್ಟರು. ತನಗಾಗಿ, ತನ್ನದೆನ್ನುವ ಯಾವ ವಸ್ತುವನ್ನೂ ಮುಟ್ಟದೆ ನಿರಾಭಾರಿಯಾಗಿ ಹೊರಟುಬಿಟ್ಟರು. ಇದು ಪರಮ ನಿರ್ಲಿಪ್ತತೆ. ಎಲ್ಲವೂ ತನ್ನದೆ, ಎಲ್ಲರೂ ತನ್ನವರೇ ಎಂದು ಹಗಲಿರುಳು ದುಡಿದದ್ದು ಸುಳ್ಳಲ್ಲ. ಆದರೆ ಯಾವುದೂ ತನ್ನದಲ್ಲ ಎಂಬ ನಿರ್ಮೋಹದಿಂದ ಹೊರಟದ್ದೂ ಸುಳ್ಳಲ್ಲ. ಈ ನಿರ್ಲಿಪ್ತತೆಯನ್ನು ಹೊಂದಿದ ಮುಕ್ತನ ಬಗ್ಗೆ ಕಗ್ಗ ಹೇಳುತ್ತದೆ. ಆತ ಎಲ್ಲರೂ ತನ್ನೊಳಗೇ ಇರುವರೆಂದು ಭಾವಿಸುತ್ತ, ತಾನೂ ಎಲ್ಲರೊಳಗೆ ಒಂದಾಗಿ ಇರುತ್ತ, ಅವರ ಸುಖ, ದುಃಖಗಳಿಗೆ ಪ್ರತಿಧ್ವನಿಯಾಗುತ್ತ, ಲೋಕದ ಜನರಿಗೆಲ್ಲ ಸಂತಸದ ಬೆಲ್ಲವನ್ನು ಹಂಚುತ್ತಾನೆ. ಆದರೆ ತನ್ನ ಕೆಲಸಗಳಿಂದ ಸ್ವಂತಕ್ಕೆ ಯಾವ ಲಾಭವನ್ನೂ ಅಪೇಕ್ಷಿಸುವುದಿಲ್ಲ. ಅವನು ಬ್ರಹ್ಮವನ್ನು ಕಂಡವನು. ಎಲ್ಲದರಲ್ಲೂ, ಎಲ್ಲರಲ್ಲೂ ತನ್ನನ್ನೇ, ಬ್ರಹ್ಮವನ್ನೇ ಕಾಣುತ್ತಾನೆ. ಅವನೇ ಜೀವನ್ಮುಕ್ತ. ಆ ಮುಕ್ತ, ಜಗತ್ತಿನಲ್ಲಿ ಶಾಶ್ವತವಾಗಿ ಇರುವವನಂತೆ, ಜಗತ್ತಿನಲ್ಲಿ ಬದುಕಿರುವಷ್ಟು ಕಾಲ ದುಡಿಯುತ್ತಾನೆ. ಆದರೆ ಯಾವುದಕ್ಕೂ ಅಂಟಿಕೊಳ್ಳದೆ ನಿರ್ಲಿಪ್ತನಾಗಿರುತ್ತಾನೆ. ಅದನ್ನೇ ಕಗ್ಗ, "ಬೆಲ್ಲ ಲೋಕಕ್ಕಾಗಿ, ತನಗೆ ತಾಂ ಕಲ್ಲಾದವನು" ಎಂದು ವರ್ಣಿಸುತ್ತದೆ.

ಪದಬಂಧ 5204 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಕೆಡುಕಾಗಲೆಂದು ಬಯಸಿ ಹೇಳುವ ಮಾತು (2)
5. ಹಿಂದಿನಿಂದ ಉಳಿದು ಬಂದ ಪ್ರಾಣಿ ಸಸ್ಯಗಳ ಅವಶೇಷ (5)
6.ಗಡಕ್ಕನೆ ಬಂದೆರಗಿದ ಗಂಡು ಕೋತಿ (3)
7.ಇದು ಮಣ್ಣಿಗೆ ಸಂಬಂಧಿಸಿದ್ದು (3)
8.ಸಮಾಜದ ಎಲ್ಲರಿಗೂ ಸಂಬಂಧಿಸಿದ್ದು (5)
9.ರಾಜಿಗೊಂದು ಪರ್ಯಾಯ ಪದ (3)
10.ಕಡಿದಾದ ಕೊರಕಲು (3)
13.ಉದಾಹರಣೆಯಿಂದ ಕೂಡಿದುದು (5)
14.ಜನನಿ ನುಡಿದಿರುವ ಸತ್ಯ (2)

ಮೇಲಿಂದ ಕೆಳಕ್ಕೆ
1.ಒಪ್ಪವಾಗಿ ರಾಗದೊಡನಿರುವ ಪ್ರೀತಿ (4)
2. ತನ್ನ ರಕ್ಷಣೆಗೆ ಅಥವಾ ಇತರರನ್ನು ಹೊಡೆಯಲು ಬಳಸುವ ಸಾಧನ (3)
4. ಸೋಲು ಹೀಗೆ ಬಂದಿದೆ (4)
5. ಅಂತ್ಯ ಅಥವಾ ಕೊನೆ ಎಂದರೂ ಆದೀತು (5)
7.ಈತ ಅಡುಗೆಯಲ್ಲಿ ನುರಿತವನು (5)
9. ಸತ್ತವರನ್ನು ಬದುಕಿಸುವುದೆಂದು ನಂಬಲಾದ ಮೂಲಿಕೆ (4)
11.ಜಲಪಾತವಿಲ್ಲಿ ಕಾಣುತ್ತಿದೆ (4)
12.ಅಪಹಾಸ್ಯ ಮಾಡುವವನು (3)



5203ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗುರುಕುಲ 3.ಆಲಸಿಗ
5.ಬರ 6.ಹಳವಂಡ
7.ವರಮಾನತೆರಿಗೆ 10.ಅವಧಾನಿ
11.ಜ್ಞಾತಿ 13.ಗರ್ಭಕೋಶ
14.ಪೀಕದಾನಿ

ಮೇಲಿಂದ ಕೆಳಕ್ಕೆ:
1.ಗುಳಿ 2.ಕುವರ
4.ಗರುಡ 5.ಬಡವ
6.ಹಣತೆ 8.ಮಾನಿನಿ
9.ಗೆಳತಿ 10.ಅಪಾಂಗ
11.ಜ್ಞಾಪಕ 12.ಜ್ಞಾನಿ

ಸುಡೊಕು 5590

		1		7		6		2
		5	2		9			
2	8			1			9	
	5		7		4	8		
				8		5		9
8	3	6						4
6				5		9		7
	7	8	1	3				
5		3		6		1		8

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5589ಸುಡೊಕು


9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

‘ಕೆನರಾ’ದಿಂದ ಹೊಸ ಠೇವಣಿ ಯೋಜನೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ 400 ದಿನಗಳ ಹೊಸ ಅವಧಿ ಠೇವಣಿ ಯೋಜನೆಗಳನ್ನು ಆರಂಭಿಸಿದೆ. ಅವಧಿಗೆ ಮೊದಲು ಠೇವಣಿ ಹಿಂಪಡೆಯುವುದು ಅಥವಾ ಠೇವಣಿಯ ಒಂದಿಷ್ಟು ಪಾಲನ್ನು ಹಿಂದಕ್ಕೆ ಪಡೆಯುವ ಅವಕಾಶ ಇರುವ ಯೋಜನೆಯಲ್ಲಿ ₹ 25 ಸಾವಿರದಿಂದ ₹ 2 ಕೋಟಿವರೆಗೆ ತೊಡಗಿಸಬಹುದು. ಇದಕ್ಕೆ ಶೇಕಡ 7.15ರಷ್ಟು ಬಡ್ಡಿ ಸಿಗಲಿದೆ.

ಅವಧಿಗೆ ಮೊದಲು ಠೇವಣಿ ಹಣ ಹಿಂಪಡೆಯಲು ಅಥವಾ ಒಂದಿಷ್ಟು ಪಾಲನ್ನು ಮಾತ್ರ ಹಿಂದಕ್ಕೆ ಪಡೆಯಲು ಅವಕಾಶ ಇಲ್ಲದ ಯೋಜನೆಯಲ್ಲಿ ₹ 15 ಲಕ್ಷದಿಂದ ₹ 2 ಕೋಟಿವರೆಗೆ ಹಣ ತೊಡಗಿಸಬಹುದು. ಇದಕ್ಕೆ ಶೇ 7.25ರಷ್ಟು ಬಡ್ಡಿ ಸಿಗುತ್ತದೆ ಎಂದು ಕೆನರಾ ಬ್ಯಾಂಕ್ ಪ್ರಕಟಣೆ ತಿಳಿಸಿದೆ. ಎರಡೂ ಯೋಜನೆಗಳಲ್ಲಿ ಹಿರಿಯ ನಾಗರಿಕರಿಗೆ ಹೆಚ್ಚುವರಿಯಾಗಿ ಶೇಕಡ 0.50ರಷ್ಟು ಬಡ್ಡಿ ಸಿಗಲಿದೆ.

ಷೇರುಪೇಟೆ ವಹಿವಾಟು 390



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18053
ಇಂದಿನ ಅಂತ್ಯ	18165
▲	112
ದಿನದ ಕನಿಷ್ಠ	18183

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹575
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹577

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1500-2000
ಮಧ್ಯಮ	₹1000-1500
ಸಣ್ಣ	₹500-1000

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹137
ಆರ್‌ಎಸ್‌ಎಸ್-5	₹132
ಗುಡ್ ಲಾಟ್	₹126

ಕೊಬ್ಬರಿ ಧಾರಣೆ

ಪುತ್ತೂರು (ಇತರ)	₹ 4500-8500
ತುರುವೇಕೆರೆ	₹11450-11450
ತಿಪಟೂರು	₹10500-11600

ಮೈಕ್ರೊಸಾಫ್ಟ್‌ನಲ್ಲಿ 10 ಸಾವಿರ ಉದ್ಯೋಗ ಕಡಿತ

ದಾವೋಸ್ / ಬೆಂಗಳೂರು (ರಾಯಿಟರ್ಸ್): 2023ರ ಅಂತ್ಯದೊಳಗೆ ಒಟ್ಟು 10 ಸಾವಿರ ನೌಕರರನ್ನು ಕೆಲಸದಿಂದ ತೆಗೆಯುವುದಾಗಿ ಮೈಕ್ರೊಸಾಫ್ಟ್ ತಿಳಿಸಿದೆ. ಇದು ಅಮೆರಿಕದ ತಂತ್ರಜ್ಞಾನ ಉದ್ಯಮ ವಲಯದಲ್ಲಿ ನೌಕರರ ವಜಾ ಪ್ರಕ್ರಿಯೆಗಳು ವೇಗ ಪಡೆಯುತ್ತಿರುವುದರ ಸೂಚನೆಯಾಗಿದೆ.


ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಸತ್ಯ ನಾದೆಲ್ಲ ಅವರು ಕಂಪನಿಯ ನೌಕರರಿಗೆ ಬರೆದಿರುವ ಟಿಪ್ಪಣಿಯಲ್ಲಿ, ‘ಗ್ರಾಹಕರು ತಮ್ಮ ಡಿಜಿಟಲ್ ವೆಚ್ಚಗಳನ್ನು ಹೆಚ್ಚು ಪರಿಣಾಮಕಾರಿ ಆಗಿಸಲು ಬಯಸಿದ್ದಾರೆ. ಕಡಿಮೆ ವೆಚ್ಚದಲ್ಲಿ ಹೆಚ್ಚು ಕೆಲಸಗಳನ್ನು ಅವರು ಬಯಸುತ್ತಿದ್ದಾರೆ. ಜಗತ್ತಿನ ಕೆಲವು ಪ್ರದೇಶಗಳಲ್ಲಿ ಆರ್ಥಿಕ ಹಿಂಜರಿತ ಇದೆ, ಇನ್ನು ಕೆಲವು ಪ್ರದೇಶಗಳು ಹಿಂಜರಿತ ಎದುರಾಗುವ ನಿರೀಕ್ಷೆಯಲ್ಲಿರುವ ಕಾರಣ ಗ್ರಾಹಕರು ಎಚ್ಚರಿಕೆ ವಹಿಸಿದ್ದಾರೆ’ ಎಂದು ಹೇಳಿದ್ದಾರೆ.

ವೈಯಕ್ತಿಕ ಕಂಪ್ಯೂಟರ್ ಮಾರುಕಟ್ಟೆಯಲ್ಲಿ ಬೇಡಿಕೆಯು ಕಡಿಮೆ ಆಗಿದೆ. ಇದರಿಂದಾಗಿ ಮೈಕ್ರೊಸಾಫ್ಟ್‌ನ ವಿಂಡೋಸ್ ಹಾಗೂ ಇತರ ಕೆಲವು ತಂತ್ರಾಂಶಗಳಿಗೆ ಬೇಡಿಕೆ ಕಡಿಮೆ ಆಗಿದೆ.

ಅದಾನಿ ಎಂಟರ್‌ಪ್ರೈಸಸ್‌ನಿಂದ ₹ 20 ಸಾವಿರ ಕೋಟಿ ಎಫ್‌ಪಿಒ

ನವದೆಹಲಿ/ಬೆಂಗಳೂರು (ಪಿಟಿಐ/ ರಾಯಿಟರ್ಸ್): ಭಾರತದ ಅತ್ಯಂತ ಶ್ರೀಮಂತ ವ್ಯಕ್ತಿ ಗೌತಮ್ ಅದಾನಿ ನೇತೃತ್ವದ ಅದಾನಿ ಎಂಟರ್‌ಪ್ರೈಸಸ್ ಕಂಪನಿಯು ಹೊಸದಾಗಿ ಷೇರುಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ (ಎಫ್‌ಪಿಒ) ಮೂಲಕ ₹ 20 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ಮುಂದಾಗಿದೆ. ಇದಕ್ಕೆ ಸಂಬಂಧಿಸಿದ ದಾಖಲೆಪತ್ರಗಳನ್ನು ಕಂಪನಿಯು ಷೇರುಪೇಟೆಗೆ ಸಲ್ಲಿಸಿದೆ.

ಕಂಪನಿಯ ಎಫ್‌ಪಿಒ ಜನವರಿ 27ರಿಂದ 31ರವರೆಗೆ ನಡೆಯಲಿದೆ. ಸಂಗ್ರಹವಾಗುವ ₹ 20 ಸಾವಿರ ಕೋಟಿಯಲ್ಲಿ ₹ 10,869 ಕೋಟಿಯನ್ನು


ಗೌತಮ್ ಅದಾನಿ

ಕಂಪನಿಯು ಪರಿಸರಪೂರಕ ಹೈಡ್ರೋಜನ್ ಯೋಜನೆಗಳಿಗೆ, ಕಂಪನಿ ನಿರ್ವಹಿಸುತ್ತಿರುವ ವಿಮಾನ ನಿಲ್ದಾಣಗಳಿಗೆ ಹಾಗೂ ಇನ್ನಿತರ ಕೆಲಸಗಳಿಗೆ ವಿನಿಯೋಗಿಸಲಿದೆ. ₹ 4,165 ಕೋಟಿಯನ್ನು ಕಂಪನಿಯು ಸಾಲ ಮರುಪಾವತಿಗೆ ಬಳಸಿಕೊಳ್ಳಲಿದೆ.

ಅದಾನಿ ಏರ್‌ಪೋರ್ಟ್ ಹೋಲ್ಡಿಂಗ್ಸ್ ಲಿಮಿಟೆಡ್, ಅದಾನಿ ರೋಡ್ ಟ್ರಾನ್ಸ್‌ಪೋರ್ಟ್ ಲಿ,. ಮತ್ತು ಮುಂದ್ರಾ ಸೋಲಾರ್ ಲಿ. ಕಂಪನಿಗಳ ಸಾಲ ಮರುಪಾವತಿಗೆ ಈ ಮೊತ್ತ ಬಳಕೆಯಾಗುತ್ತದೆ. ಎಫ್‌ಪಿಒ ಸಂದರ್ಭದಲ್ಲಿ ಷೇರು ಬೆಲೆಯು ಏನಿರುತ್ತದೆ ಎಂಬುದನ್ನು ಅದಾನಿ ಎಂಟರ್‌ಪ್ರೈಸಸ್ ಸ್ಪಷ್ಟಪಡಿಸಿಲ್ಲ.

ಮುಖ್ಯಾಂಶಗಳು

- ಬಂಡವಾಳ ಸಂಗ್ರಹದ ಒಂದು ಪಾಲು ಸಾಲ ತೀರಿಸಲು ಬಳಕೆ
- 2022ರಲ್ಲಿ ದೊಡ್ಡ ಪ್ರಮಾಣದಲ್ಲಿ ಸ್ವಾಧೀನ ಪ್ರಕ್ರಿಯೆ ನಡೆಸಿರುವ ಅದಾನಿ ಸಮೂಹ

ಅದಾನಿ ಸಮೂಹವು ಸಿಮೆಂಟ್, ಆರೋಗ್ಯಸೇವೆಯಂತಹ ಕ್ಷೇತ್ರಗಳಿಗೆ ತನ್ನ ಚಟುವಟಿಕೆಯನ್ನು ವಿಸ್ತರಿಸಿಕೊಳ್ಳುತ್ತಿದೆ. ಸಮೂಹದ ಸಾಲದ ಮೊತ್ತವು ಹೆಚ್ಚಿದೆ ಎಂಬ ಕಳವಳ ಕೂಡ ಇದೆ. ಡೀಲಾಜಿಕ್ ಅಂಕಿ–ಅಂಶದ ಅನ್ವಯ ಅದಾನಿ ಸಮೂಹವು 2022ರಲ್ಲಿ ಒಟ್ಟು ₹ 1.12 ಲಕ್ಷ ಕೋಟಿ ಮೌಲ್ಯದ ಸ್ವಾಧೀನ ಪ್ರಕ್ರಿಯೆಯನ್ನು 2022ರಲ್ಲಿ ನಡೆಸಿದೆ. ಇದು ವರ್ಷವೊಂದರಲ್ಲಿ ಈ ಸಮೂಹ ಸ್ವಾಧೀನಕ್ಕೆ ವಿನಿಯೋಗಿಸಿರುವ ಅತಿದೊಡ್ಡ ಮೊತ್ತ. 2022ರಲ್ಲಿ ಅದಾನಿ ಎಂಟರ್‌ಪ್ರೈಸಸ್ ಷೇರು ಮೌಲ್ಯವು ಸರಿಸುಮಾರು ಶೇಕಡ 130ರಷ್ಟು ಹೆಚ್ಚಳವಾಗಿದೆ.

ಆಂಧ್ರದ ಮೇಲ್ಮನವಿ: ಇಂದು ವಿಚಾರಣೆ

ನವದೆಹಲಿ(ಪಿಟಿಐ): ರಾಷ್ಟ್ರೀಯ ಹೆದ್ದಾರಿಗಳು ಸೇರಿ ರಸ್ತೆಗಳಲ್ಲಿ ಸಾರ್ವಜನಿಕ ಸಭೆಗಳು ಮತ್ತು ರ‍್ಯಾಲಿಗಳನ್ನು ನಡೆಸದಂತೆ ನಿಷೇಧಿಸಿದ ಆಂಧ್ರ ಪ್ರದೇಶ ಸರ್ಕಾರದ ತೀರ್ಮಾನ ಜಾರಿಗೊಳಿಸದಂತೆ ತಡೆ ನೀಡಿದ ಹೈಕೋರ್ಟ್ ಮಧ್ಯಂತರ ಆದೇಶ ಪ್ರಶ್ನಿಸಿರುವ ಮೇಲ್ಮನವಿ ವಿಚಾರಣೆಗೆ ಸುಪ್ರೀಂ ಕೋರ್ಟ್ ಬುಧವಾರ ಸಮ್ಮತಿಸಿದೆ. ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ಪೀಠ ವಿಚಾರಣೆ ನಡೆಸಲಿದೆ.

ಏರ್‌ಬ್ಯಾಗ್ ಲೋಪ ಸರಿಪಡಿಸಲಿರುವ ಮಾರುತಿ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಕಂಪನಿಯು ತನ್ನ ವಿವಿಧ ಮಾದರಿಗಳ ಒಟ್ಟು 17,362 ಕಾರುಗಳನ್ನು ಹಿಂದಕ್ಕೆ ಪಡೆದು, ಅವುಗಳ ಏರ್‌ಬ್ಯಾಗ್ ನಿಯಂತ್ರಕ ವ್ಯವಸ್ಥೆಯಲ್ಲಿ ದೋಷ ಇದೆಯೇ ಎಂಬುದನ್ನು ಪರಿಶೀಲಿಸಲಿದೆ. ದೋಷ ಇದ್ದಲ್ಲಿ ಅದನ್ನು ಬದಲಿಸಿ ಕೊಡಲಿದೆ.

2022ರ ಡಿಸೆಂಬರ್ 8ರಿಂದ ಈ ವರ್ಷದ ಜನವರಿ 12ರವರೆಗೆ ತಯಾರಾದ ಆಲ್ಟೊ ಕೆ10, ಎಸ್–ಪ್ರೆಸೊ, ಇಕೊ, ಬ್ರೆಜಾ, ಬಲೆನೊ ಮತ್ತು ಗ್ರ್ಯಾಂಡ್ ವಿಟಾರಾ ಮಾದರಿಗಳನ್ನು ಕಂಪನಿಯು ಹಿಂದಕ್ಕೆ ಪಡೆದು, ಲೋಪವನ್ನು ಪರಿಶೀಲಿಸಲಿದೆ. ಈ ವಿಚಾರವನ್ನು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಲೋಪ ಕಂಡುಬಂದಲ್ಲಿ ಅದನ್ನು ಕಂಪನಿಯು ಉಚಿತವಾಗಿ ಬದಲಿಸಿ ಕೊಡಲಿದೆ. ‘ಏರ್‌ಬ್ಯಾಗ್ ನಿಯಂತ್ರಕ ವ್ಯವಸ್ಥೆಯಲ್ಲಿ ಲೋಪ ಇರುವ ಸಾಧ್ಯತೆ ಇದೆ ಎಂಬ ಅನುಮಾನವಿದೆ’ ಎಂದು ಅದು ತಿಳಿಸಿದೆ.

ಮುನ್ನೆಚ್ಚರಿಕೆಯ ಕ್ರಮವಾಗಿ, ಲೋಪ ಸರಿಪಡಿಸುವವರೆಗೆ ವಾಹನ ಮಾಲೀಕರು ಕಾರು ಚಲಾಯಿಸಬಾರದು ಎಂದು ಕಂಪನಿ ಸಲಹೆ ನೀಡಿದೆ. ವಾಹನ ಮಾಲೀಕರಿಗೆ ಮಾರುತಿ ಸುಜುಕಿ ಕಡೆಯಿಂದ ಸಂದೇಶ ಬರಲಿದೆ.

8 ಸಾಧಕರಿಗೆ ‘ಸಂದೇಶ’ ಪ್ರಶಸ್ತಿ

ಮಂಗಳೂರು: ಇಲ್ಲಿಯ ಸಂದೇಶ ಸಂಸ್ಕೃತಿ ಮತ್ತು ಶಿಕ್ಷಣ ಪ್ರತಿಷ್ಠಾನದ ಸಂದೇಶ ಪ್ರಶಸ್ತಿಗೆ ಎಂಟು ಮಂದಿ ಆಯ್ಕೆ ಆಗಿದ್ದಾರೆ. ‘ಸಂದೇಶ ಕನ್ನಡ ಸಾಹಿತ್ಯ ಪ್ರಶಸ್ತಿಗೆ ರಾಘವೇಂದ್ರ ಪಾಟೀಲ, ಕೊಂಕಣಿ ಸಾಹಿತ್ಯ ಪ್ರಶಸ್ತಿಗೆ ಆಂಡ್ರ್ಯೂ ಎಲ್. ಡಿಕುನ್ಹ, ತುಳು ಸಾಹಿತ್ಯ ಪ್ರಶಸ್ತಿಗೆ ಡಾ.ಕೆ.ಚಿನ್ನಪ್ಪ ಗೌಡ, ಮಾಧ್ಯಮ ಪ್ರಶಸ್ತಿಗೆ ಶಿವಾಜಿ ಗಣೇಶನ್, ಕೊಂಕಣಿ ಸಂಗೀತ ಪ್ರಶಸ್ತಿಗೆ ಜಾಯ್ಸ್ ಒಝಾರಿಯೊ, ಕಲಾ ಪ್ರಶಸ್ತಿಗೆ ಡಾ.ಎಂ.ಎಸ್. ಮೂರ್ತಿ, ಶಿಕ್ಷಣ ಪ್ರಶಸ್ತಿಗೆ ಕೋಟಿಗಾನಹಳ್ಳಿ ರಾಮಯ್ಯ, ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿಗೆ ಸಬಿಹಾ ಭೂಮಿಗೌಡ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರೇರಣಾ ರಿಸೋರ್ಸ್ ಸೆಂಟರ್‌ಗೆ ವಿಶೇಷ ಪ್ರಶಸ್ತಿ ನೀಡಲಾಗುತ್ತದೆ’ ಎಂದು ಟ್ರಸ್ಟಿ ರಾಯ್ ಕ್ಯಾಸ್ಟಲಿನೊ ತಿಳಿಸಿದರು.



ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	450-480
ರಾಶಿ	480- 500
ರಾಶಿ ಉತ್ತಮ	550-600
ಜರಡಿ	700 - 750
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,250-1,350
ಕಾಳು ಮೆಣಸು -	500
ಅಡಿಕೆ	
ಬಂಟ್ವಾಳ	
ಕೋಕ	12,500-25,000
ಹೊಸತು	22,500-40,000
ಹಳತು	48,000-54,500
ಕಾರ್ಕಳ	
ಹೊಸತು	30,000-40,000
ಹಳತು	40,000-54,500
ಕುಮಟಾ	
ಚಿಪ್ಪು	27,209-33,019
ಕೋಕ	16,509-29,999
ಫ್ಯಾಕ್ಟರಿ	12,019-19,849
ಹಳೆಚಾಲಿ	36,509-41,399
ಹೊಸಚಾಲಿ	34,019-36,729
ಪುತ್ತೂರು	
ಕೋಕ	11,000-26,000
ಹೊಸತು	33,000-40,000
ಶಿವಮೊಗ್ಗ	
ಬೆಟ್ಟೆ	47,158-52,859
ಗೊರಬಲು	18,119-35,999
ರಾಶಿ	41,009-46,450
ಸರಕು	45,009-67,500
ಸಿದ್ದಾಪುರ	
ಬಿಳಿಗೋಟು	24,119-33,298
ಚಾಲಿ	37,599-41,599
ಕೋಕ	24,299-31,612
ಹೊಸಚಾಲಿ	30,669-35,099
ಕೆಂಪುಗೋಟು	29,112-31,699
ರಾಶಿ	44,099-45,699
ತಟ್ಟಿಬೆಟ್ಟೆ	37,000-44,209
ಶಿರಸಿ	
ಬೆಟ್ಟೆ	30,629-43,399
ಬಿಳಿಗೋಟು	21,099-36,713
ಚಾಲಿ	34,800-43,711
ಕೆಂಪುಗೋಟು	32,100-34,806
ರಾಶಿ	39,123-46,569

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13900	13750	13750	151.10 ಸೆಂಟ್ಸ್
ಎಸಿ	6720	6800	6000	
ಆರ್‌ಪಿ	8400	8300	7925	ಲಂಡನ್
ಆರ್‌ಸಿ	4500	164	4200	1895 ಡಾಲರ್ಸ್

ಕಾರ್ಯನಿರತ ಪತ್ರಕರ್ತರ ಸಂಘ: ‘ಪ್ರಜಾವಾಣಿ’ಗೆ ಏಳು ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 2020- 21ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದ್ದು, ‘ಪ್ರಜಾವಾಣಿ’ಗೆ ಏಳು, ಡೆಕ್ಕನ್ ಹೆರಾಲ್ಡ್‌ಗೆ ಒಂದು ಪ್ರಶಸ್ತಿ ದೊರೆತಿವೆ.

‘ಪ್ರಜಾವಾಣಿ’ ವರದಿಗಾರರ ವಿಭಾಗದ ಮುಖ್ಯಸ್ಥ ವೈ.ಗ.ಜಗದೀಶ್ (ಖಾದ್ರಿ ಶಾಮಣ್ಣ ಪ್ರಶಸ್ತಿ–ಅತ್ಯುತ್ತಮ ರಾಜಕೀಯ ವಿಮರ್ಶೆ), ಹಿರಿಯ ವರದಿಗಾರರಾದ ಗುರು ಪಿ.ಎಸ್. (ನಾಡಿಗೇರ ಕೃಷ್ಣರಾಯರ ಪ್ರಶಸ್ತಿ–ಅತ್ಯುತ್ತಮ ಲೇಖನ), ಕೆ.ಓಂಕಾರಮೂರ್ತಿ (ಪಟೇಲ್ ಭೈರಹನುಮಯ್ಯ ಪ್ರಶಸ್ತಿ–ಅತ್ಯುತ್ತಮ ಮಾನವೀಯ ವರದಿ), ಉಪ ಸಂಪಾದಕಿ ಕಲಾವತಿ ಬೈಚಬಾಳ (ಜಿ.ನಾರಾಯಣ ಸ್ವಾಮಿ ಪ್ರಶಸ್ತಿ–ಅತ್ಯುತ್ತಮ ಗ್ರಾಮಾಂತರ ವರದಿ), ಅರೆಕಾಲಿಕ ವರದಿಗಾರರಾದ ಅಶೋಕ ಸಾಲವಡಗಿ (ಬಿ.ಜಿ.ತಿಮ್ಮಪ್ಪಯ್ಯ ಪ್ರಶಸ್ತಿ–ಆರ್ಥಿಕ ದುರ್ಬಲ ವರ್ಗದ ಅತ್ಯುತ್ತಮ ವರದಿಗೆ), ಬಸವರಾಜ ಭೋಗಾವತಿ (ಸಣ್ಣುವಂಡ ಶ್ರೀನಿವಾಸ ಚಂಗಪ್ಪ ಪ್ರಶಸ್ತಿ –ಅತ್ಯುತ್ತಮ ವರದಿ), ಎಸ್.ಎಸ್.ಸಚ್ಚಿತ್, ಹುಣಸೂರು (ಆರ್.ಎಲ್.ವಾಸುದೇವರಾವ್ ಪ್ರಶಸ್ತಿ–ಅರಣ್ಯ ಕುರಿತ ವರದಿಗೆ), ಡೆಕ್ಕನ್ ಹೆರಾಲ್ಡ್‌ನ ಹಿರಿಯ ವಿಶೇಷ ವರದಿಗಾರ್ತಿ ಬಿ.ಎಸ್. ರಶ್ಮಿ ಬೇಲೂರು (ಕೆ.ಎನ್.ಸುಬ್ರಹ್ಮಣ್ಯ ಪ್ರಶಸ್ತಿ–ಇಂಗ್ಲಿಷ್ ಪತ್ರಿಕೆ ಅತ್ಯುತ್ತಮ ವರದಿ) ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಗೆ ಆಯ್ಕೆಯಾದವರ ವಿವರ: ಮಂಜುನಾಥ ಜೂಟಿ, ವಿಜಯ ಕರ್ನಾಟಕ, ಕಲಬುರಗಿ (ಜಿ. ನಾರಾಯಣ ಸ್ವಾಮಿ ಪ್ರಶಸ್ತಿ – ಅತ್ಯುತ್ತಮ ಗ್ರಾಮಾಂತರ ವರದಿ). ಕೂಡ್ಲಿ ಗುರುರಾಜ, ಉದಯವಾಣಿ, ಮೈಸೂರು (ಖಾದ್ರಿ ಶಾಮಣ್ಣ ಪ್ರಶಸ್ತಿ–ಅತ್ಯುತ್ತಮ ರಾಜಕೀಯ ವಿಮರ್ಶೆ), ಜಿ.ವಿ.ಸುಬ್ಬರಾವ್, ಬಳ್ಳಾರಿ ಬೆಳಗಾಯಿತು ಪತ್ರಿಕೆ, ವಿಜಯನಗರ ಜಿಲ್ಲೆ (ಪಟೇಲ್ ಭೈರಹನುಮಯ್ಯ ಪ್ರಶಸ್ತಿ–ಅತ್ಯುತ್ತಮ ಮಾನವೀಯ ವರದಿ), ವಿಜಯಲಕ್ಷ್ಮಿ ಶಿಬರೂರು, ವಿಜಯ ಟೈಮ್ಸ್, ಬೆಂಗಳೂರು, ಎಲ್.ಎಸ್.ಶ್ರೀಕಾಂತ್, ಕನ್ನಡಪ್ರಭ, ಮೈಸೂರು(ಬಿ.ಎಸ್. ವೆಂಕಟರಾಂ ಪ್ರಶಸ್ತಿ-ಅತ್ಯುತ್ತಮ ಸ್ಕೂಪ್ ವರದಿ), ಇಬ್ರಾಹಿಂ ಖಲೀಲ್, ಸುದ್ದಿ ಬಿಡುಗಡೆ, ಪುತ್ತೂರು. ಎಚ್.ಟಿ.ಪ್ರಸನ್ನ, ಪೊಲೀಸ್ ಬೇಟೆ, ಹಿರಿಯೂರು (ಗಿರಿಧರ್ ಪ್ರಶಸ್ತಿ -ಅತ್ಯುತ್ತಮ ಅಪರಾಧ ವರದಿ).

ಡಾ.ಯು.ಬಿ.ರಾಜಲಕ್ಷ್ಮಿ, ತರಂಗ, ಮಣಿಪಾಲ್. ಎಚ್.ಜಿ.ಶೋಭ, ಸ್ತ್ರೀ ಜಾಗೃತಿ ಪತ್ರಿಕೆ (ಮಂಗಳ ಎಂ.ಸಿ. ವರ್ಗೀಸ್ ಪ್ರಶಸ್ತಿ, ವಾರಪತ್ರಿಕೆ ವಿಭಾಗ). ಅವಿನಾಶ್ ಜೈನಹಳ್ಳಿ, ವಿಜಯವಾಣಿ, ಮೈಸೂರು. ಸ್ಪಂದನ್ ಕೆ. ಕನ್ನಡ ಪ್ರಭ, ಬೆಂಗಳೂರು (ನೆಟ್ಟಕಲ್ಲಪ್ಪ ಪ್ರಶಸ್ತಿ–ಅತ್ಯುತ್ತಮ ಕ್ರೀಡಾ ವರದಿ). ಎಂ.ಎನ್. ಲಕ್ಷ್ಮೀನಾರಾಯಣ ಯಾದವ್, ಸ್ಟಾರ್ ಆಫ್ ಮೈಸೂರು, ಕೆ.ಎಸ್.ಶ್ರೀಧರ್, ವಿಜಯಕರ್ನಾಟಕ, ಆರ್.ನಾಗರಾಜ್, ತುಮಕೂರು (ಬಂಡಾಪುರ ಮುನಿರಾಜು ಪ್ರಶಸ್ತಿ–ಅತ್ಯುತ್ತಮ ಸುದ್ದಿ ಚಿತ್ರ).

ಶ್ರೀನಿವಾಸ.ಪಿ.ಎ, ಹಾಸನ (ಆರ್. ಎಲ್.ವಾಸುದೇವರಾವ್ ಪ್ರಶಸ್ತಿ–ಅರಣ್ಯ ಕುರಿತ ವರದಿಗೆ). ನಿರಂಜನ ಕಗ್ಗೆರೆ, ಟೈಮ್ಸ್ ಆಫ್ ಇಂಡಿಯಾ, ಇಮ್ರಾನ್ ವುಲ್ಲಾ, ಪಾವಗಡ, ಗುರುದತ್ ಭಟ್, ವಿಜಯ ಕರ್ನಾಟಕ, ಬೆಳಗಾವಿ (ಆರ್.ಎಲ್.ವಾಸುದೇವ ರಾವ್ ಪ್ರಶಸ್ತಿ–ವನ್ಯಪ್ರಾಣಿಗಳ ಅತ್ಯುತ್ತಮ ವರದಿಗೆ).

ಕೆ.ಬಿ.ಜಗದೀಶ್ ಜೇಡುಬೀಟೆ, ಗೋಣಿಕೊಪ್ಪ, ಕೊಡಗು, ಕೆ.ಎಸ್. ಸೋಮಶೇಖರ, ಇಂದುಸಂಜೆ, ಬೆಂಗಳೂರು (ಬಿ.ಜಿ.ತಿಮ್ಮಪ್ಪಯ್ಯ ಪ್ರಶಸ್ತಿ–ಆರ್ಥಿಕ ದುರ್ಬಲ ವರ್ಗದ ಅತ್ಯುತ್ತಮ ವರದಿಗೆ), ಎಚ್. ಆರ್.ದೇವರಾಜ್, ಕಡೂರು, ಚಿಕ್ಕಮಗಳೂರು ಜಿಲ್ಲೆ, ರಾಘವೇಂದ್ರ ವೆಂಕಟರಾವ್ ಗುಮಾಸ್ತೆ, ಸಂಯುಕ್ತ ಕರ್ನಾಟಕ, ರಾಯಚೂರು ಜಿಲ್ಲೆ, ಸದಾಶಿವ ರಾಮಪ್ಪ ಬಡಿಗೇರ, ರಾಯಭಾಗ, ಬೆಳಗಾವಿ ಜಿಲ್ಲೆ (ಮಂಡಿಬೆಲೆ ಶಾಮಣ್ಣ ಪ್ರಶಸ್ತಿ – ಗ್ರಾಮೀಣ ವಿಭಾಗ).

ಎನ್.ಬಿ.ನಾರಾಯಣ, ಮಂಗಳ ಪತ್ರಿಕೆ, ಆರ್.ಜಿ.ಹಳ್ಳಿ ನಾಗರಾಜ್, ಬೆಂಗಳೂರು, ಗಂಗಾಧರ ಕುಷ್ಟಗಿ, ಲಂಕೇಶ್ ಪತ್ರಿಕೆ, ಪುಟ್ಟಸ್ವಾಮರಾಧ್ಯ, ಬೆಂಗಳೂರು (ನಾಡಪ್ರಭು ಕೆಂಪೇಗೌಡ ಪ್ರಶಸ್ತಿ). ರಾಜು ಖಾರ್ವಿ, ಉದಯವಾಣಿ, ಬೆಂಗಳೂರು, ಕೆ.ಪ್ರಕಾಶ್, ವಿಜಯ ಕರ್ನಾಟಕ, ಮುಳಬಾಗಿಲು (ಯಜಮಾನ್ ಟಿ.ನಾರಾಯಣಪ್ಪ ಪ್ರಶಸ್ತಿ –ಅತ್ಯುತ್ತಮ ಕೃಷಿ ವರದಿ). ಬಿ.ಎನ್.ಮಲ್ಲೇಶ್, ನಗರವಾಣಿ, ದಾವಣಗೆರೆ (ನಾಡಿಗೇರ ಕೃಷ್ಣರಾಯರ ಪ್ರಶಸ್ತಿ –ಅತ್ಯುತ್ತಮ ಲೇಖನ). ಹರೀಶ್ ಕುಮಾರ್. ಆರ್, ವಿಜಯವಾಣಿ, ಎಸ್.ಆರ್.ರೋಹಿತ್, ನಾವಿಕ ಪತ್ರಿಕೆ, ಶಿವಮೊಗ್ಗ (ಅತ್ಯುತ್ತಮ ಪುಟ ವಿನ್ಯಾಸಗಾರರು). ಪಿ.ರಾಜೇಂದ್ರ, ಹೊಸದಿಗಂತ, ಜಗನ್ .ಆರ್, ವಿಜಯವಾಣಿ (ನ್ಯಾಯಾಲಯ ವಿಭಾಗ). ಪಿ.ಪಿ.ಕಾಳಯ್ಯ, ಶಕ್ತಿ ದಿನಪತ್ರಿಕೆ, ಕೊಡಗು (ಸಣ್ಣುವಂಡ ಶ್ರೀನಿವಾಸ ಚಂಗಪ್ಪ ಪ್ರಶಸ್ತಿ –ಅತ್ಯುತ್ತಮ ವರದಿ), ಪ್ರವೀಣ್ ಎಚ್.ಪರ, ದಿ ಹಿಂದೂ, ಕಲಬುರಗಿ, ಚೇತನ ಬೆಳಗೆರೆ, ಬೆಂಗಳೂರು (ಕೆ.ಎನ್.ಸುಬ್ರಹ್ಮಣ್ಯ ಪ್ರಶಸ್ತಿ –ಇಂಗ್ಲಿಷ್ ಪತ್ರಿಕೆ ಅತ್ಯುತ್ತಮ ವರದಿ). ಆನಂದ ಸೌದಿ, ಕನ್ನಡ ಪ್ರಭ, ಯಾದಗಿರಿ ಜಿಲ್ಲೆ, ಜಿ.ಮಹಾಂತೇಶ್, ದಿ ಫೈಲ್ಸ್ (ಅತ್ಯುತ್ತಮ ತನಿಖಾ ವರದಿ). ನಾಗರಾಜ ಭಟ್, ವಿಜಯವಾಣಿ, ರಾಧಾಕೃಷ್ಣ ಬಡ್ತಿ, ವಿಶ್ವವಾಣಿ, ಶಶಿಧರ್, ಸಂಯುಕ್ತ ಕರ್ನಾಟಕ, ಡಿ.ಜಿ.ಮಮತಾ, ಉದಯಕಾಲ (ಅತ್ಯುತ್ತಮ ಡೆಸ್ಕ್ ನಿರ್ವಹಣೆ), ಅಜಿತ್ ಹನುಮಕ್ಕನವರ, ಸುವರ್ಣ ಟಿವಿ, ಸಿದ್ದು ಕಾಳೋಜಿ, ದಿಗ್ವಿಜಯ ಟಿವಿ, ಸುಕನ್ಯ, ಟಿವಿ 9 (ವಿದ್ಯುನ್ಮಾನ ವಿಭಾಗ), ರವೀಶ್, ಪಬ್ಲಿಕ್ ಟಿವಿ, ವಿನಾಯಕ ಗಂಗೊಳ್ಳಿ, ಫಸ್ಟ್ ನ್ಯೂಸ್, ಮಾರುತಿ ಪಾವಗಡ, ವಿಸ್ತಾರ ನ್ಯೂಸ್, ಎಸ್.ಚಂದ್ರಶೇಖರ್ ಚಂದನ ಟಿವಿ, ಕೋಲಾರ, ಕೆಪಿಎಸ್ ಪ್ರಮೋದ್, ಪ್ರಜಾ ಟಿವಿ, ಎಚ್.ಜಿ.ಶಾಂತಿನಾಥ, ಈ ಟಿವಿ ಭಾರತ್, ತುಮಕೂರು, ಕೆ.ಎಸ್. ದೀಪ, ಕಸ್ತೂರಿ ಟಿವಿ, ಸಿದ್ದುಬಿರಾದರ್, ಪವರ್ ಟಿವಿ (ವಿದ್ಯುನ್ಮಾನ ವಿಭಾಗ–ವರದಿ).

ವಿಜಯಪುರದಲ್ಲಿ ಫೆಬ್ರುವರಿ 4 ಮತ್ತು 5ರಂದು ನಡೆಯುವ 37ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ್ ಮಾಹಿತಿ ನೀಡಿದ್ದಾರೆ.

ವಿಶ್ವದ ಹಿರಿಯ ಸನ್ಯಾಸಿನಿ ಇನ್ನಿಲ್ಲ



ಪ್ಯಾರಿಸ್ (ಎಪಿ): ವಿಶ್ವದ ಅತ್ಯಂತ ಹಿರಿಯ ವ್ಯಕ್ತಿ ಎನ್ನಲಾಗಿದ್ದ ಫ್ರೆಂಚ್ ಸನ್ಯಾಸಿನಿ ಸಿಸ್ಟರ್ ಆ್ಯಂಡ್ರೆ ಎಂದು ಕರೆಯಲ್ಪಡುವ ಲುಸಿಲ್ ರಾಂಡನ್ ತಮ್ಮ 119ನೇ ಹುಟ್ಟುಹಬ್ಬದ ಕೆಲ ವಾರಗಳ ಮೊದಲು ನಿಧನರಾದರು ಎಂದು ದಕ್ಷಿಣ ಫ್ರಾನ್ಸ್‌ನಲ್ಲಿರುವ ಲೇಬರ್ ನರ್ಸಿಂಗ್ ಹೋಮ್ ವಕ್ತಾರ ಡೇವಿಡ್ ಟವೆಲ್ಲಾ ಬುಧವಾರ ತಿಳಿಸಿದ್ದಾರೆ.

ಮಂಗಳವಾರ ಮುಂಜಾನೆ 2 ಗಂಟೆಗೆ ಟೌಲೋನ್ ಪಟ್ಟಣದ ಸೇಂಟ್- ಕ್ಯಾಥರೀನ್-ಲೇಬರ್ ನರ್ಸಿಂಗ್ ಹೋಮ್‌ನಲ್ಲಿ ಅವರು ನಿಧನರಾದರು. 110 ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರ ವಿವರಗಳನ್ನು ದಾಖಲಿಸುವ ಜೆರಾಂಟಾಲಜಿ ರಿಸರ್ಚ್ ಗ್ರೂಪ್, ಕಳೆದ ವರ್ಷ 119 ವರ್ಷದ ಜಪಾನ್‌ನ ಕೇನ್ ತನಕಾ ಅವರ ಮರಣದ ನಂತರ ವಿಶ್ವದ ಅತ್ಯಂತ ಹಿರಿಯ ವ್ಯಕ್ತಿ ಎಂದು ಆ್ಯಂಡ್ರೆ ಅವರನ್ನು ಪಟ್ಟಿ ಮಾಡಿತ್ತು. ಅವರ ದೀರ್ಘಾಯುಷ್ಯದ ಬಗ್ಗೆ ಈ ಹಿಂದೆ ಕೇಳಿದ ಪ್ರಶ್ನೆಗೆ, ‘ಕೆಲಸ ನಿಮ್ಮನ್ನು ಬದುಕುವಂತೆ ಮಾಡುತ್ತದೆ. ನಾನು 108 ವರ್ಷದವರೆಗೂ ಕೆಲಸ ಮಾಡಿದ್ದೇನೆ’ ಎಂದಿದ್ದರು. ಅವರು ಪ್ರತಿದಿನ ಒಂದು ಲೋಟ ವೈನ್ ಮತ್ತು ಚಾಕೊಲೇಟ್ ಸೇವಿಸುತ್ತಿದ್ದರಂತೆ.

ಹೆಲಿಕಾಪ್ಟರ್ ಪತನ: ಸಚಿವ ಸೇರಿ 18 ಸಾವು

ಕೀವ್ (ಎಪಿ): ರಾಜಧಾನಿ ಕೀವ್ ಪೂರ್ವದ ಉಪನಗರ ಬ್ರೊವರಿಯ ಕಿಂಡರ್‌ಗಾರ್ಟನ್ ಬಳಿ ಬುಧವಾರ ಹೆಲಿಕಾಪ್ಟರ್ ಅಪ್ಪಳಿಸಿ ಉಕ್ರೇನ್ ಗೃಹ ಸಚಿವ ಮತ್ತು ಪ್ರಾದೇಶಿಕ ಗವರ್ನರ್ ಅವರ ಮೂವರು ಮಕ್ಕಳು ಸೇರಿ 18 ಜನರು ಮೃತಪಟ್ಟಿದ್ದಾರೆ.

ಗೃಹ ಸಚಿವ ಡೆನಿಸ್ ಮೊನಾಸ್ಟಿರಸ್ಕಿ, ಉಪ ಸಚಿವ ಯೆವ್ಹೆನ್ ಯೆನಿನ್, ಸಚಿವಾಲಯದ ರಾಜ್ಯ ಕಾರ್ಯದರ್ಶಿ ಯೂರಿ ಲುಬ್ಕೊವಿಚ್, ಕೀವ್ ಪ್ರಾದೇಶಿಕ ಗವರ್ನರ್ ಒಲೆಕ್ಸಿ ಕುಲೆಬಾ ಅವರ ಮೂವರು ಮಕ್ಕಳು ಸಹ ಸಾವನ್ನಪ್ಪಿದ್ದಾರೆ.

ಈ ದುರಂತದಲ್ಲಿ ಹೆಲಿಕಾಪ್ಟರ್‌ನಲ್ಲಿದ್ದ ತುರ್ತು ಸೇವೆಗಳ ಒಂಬತ್ತು ಮಂದಿಯೂ ಮೃತಪಟ್ಟಿದ್ದಾರೆ. ದೇಶದ ಭದ್ರತಾ ಸೇವೆ ವಿಭಾಗವು ತನಿಖೆ ನಡೆಸುತ್ತಿದೆ ಎಂದು ಉಕ್ರೇನ್ ರಾಷ್ಟ್ರೀಯ ಪೊಲೀಸ್ ಮುಖ್ಯಸ್ಥ ಐಹೋರ್ ಕ್ಲೈಮೆಂಕೊ ತಿಳಿಸಿದರು.

ಉಕ್ರೇನ್ ಪೊಲೀಸ್ ಮತ್ತು ಇತರ ತುರ್ತು ಸೇವೆಗಳ ಉಸ್ತುವಾರಿ ವಹಿಸಿದ್ದ ಮೊನಾಸ್ಟಿರಸ್ಕಿ ಅವರು, ರಷ್ಯಾ ಯುದ್ಧ ಆರಂಭಿಸಿದಾಗಿನಿಂದ ಸಾವನ್ನಪ್ಪಿದವರಲ್ಲಿ ಅತ್ಯಂತ ಉನ್ನತ ಹುದ್ದೆಯಲ್ಲಿದ್ದ ವ್ಯಕ್ತಿ ಎನಿಸಿದ್ದಾರೆ.


ಉಕ್ರೇನ್ ರಾಜಧಾನಿ ಕೀವ್ ಪೂರ್ವದ ಉಪನಗರ ಬ್ರೊವರಿಯ ಕಿಂಡರ್‌ಗಾರ್ಟನ್ ಬಳಿ ಬುಧವಾರ ಹೆಲಿಕಾಪ್ಟರ್ ಪತನಗೊಂಡು ಬೆಂಕಿಗೆ ಆಹುತಿಯಾಯಿತು – ಎಪಿ/ಪಿಟಿಐ ಚಿತ್ರ

ಈ ಘಟನೆ ಹವಾಮಾನ ವೈಪರೀತ್ಯ ಅಥವಾ ರಷ್ಯಾ ದಾಳಿಯಿಂದ ನಡೆದಿದೆಯೇ ಎನ್ನುವುದು ಈವರೆಗೆ ಸ್ಪಷ್ಟವಾಗಿಲ್ಲ. ಕೀವ್ ಪ್ರದೇಶದಲ್ಲಿ ಇತ್ತೀಚೆಗೆ ಉಭಯ ರಾಷ್ಟ್ರಗಳ ಸೇನೆಗಳ ನಡುವೆ ಯಾವುದೇ ಹೋರಾಟ ನಡೆದ ವರದಿಯಾಗಿಲ್ಲ.

15 ಮಕ್ಕಳು ಸೇರಿ 29 ಜನರು ಗಾಯಗೊಂಡಿರುವುದಾಗಿ ಈ ಮೊದಲು, ಅಧಿಕಾರಿಗಳು ಮತ್ತು ಮಾಧ್ಯಮ ವರದಿಗಳು ಮಾಡಿದ್ದವು.

‘ವೀಸಾಗೆ ಕಾಯುವ ಅವಧಿ ಕಡಿತಕ್ಕೆ ಯತ್ನ’

ವಾಷಿಂಗ್ಟನ್ (ಪಿಟಿಐ): ಭಾರತದಲ್ಲಿ ವೀಸಾಗಾಗಿ ಕಾಯುವ ಸಮಯವನ್ನು ಕಡಿಮೆ ಮಾಡಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದು ಅಮೆರಿಕದ ವೀಸಾ ಸೇವೆಗಳ ಉಪ ಸಹಾಯಕ ಕಾರ್ಯದರ್ಶಿ ಜೂಲಿ ಸ್ಟುಫಟ್ ತಿಳಿಸಿದ್ದಾರೆ.

‘ಭಾರತದಲ್ಲಿರುವ ನಮ್ಮ ಕಾನ್ಸುಲ್ ಕಚೇರಿಗಳು ಮತ್ತು ರಾಜತಾಂತ್ರಿಕ ಕಚೇರಿಗಳಲ್ಲಿನ ಸಿಬ್ಬಂದಿಗೆ ನೆರವಾಗಲು ಕಾನ್ಸುಲರ್ ಅಧಿಕಾರಿಗಳ ತಂಡವನ್ನು ನಾವು ಕಳುಹಿಸುತ್ತಿದ್ದೇವೆ. ಅವರು ಪಾಳಿಯಲ್ಲಿ ಕೆಲಸ ನಿರ್ವಹಿಸಲಿದ್ದಾರೆ. ವಾರಾಂತ್ಯದಲ್ಲೂ ಕೆಲಸ ಮಾಡಲಿದ್ದಾರೆ’ ಎಂದು ಅವರು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಕೊರೊನಾ ವೈರಸ್‌ಗೆ ಸಂಬಂಧಿಸಿದಂತೆ ವಿಧಿಸಲಾಗಿರುವ ಪ್ರಯಾಣ ನಿರ್ಬಂಧದ ನಂತರ ಭಾರತ ಸೇರಿ ಕೆಲವು ದೇಶಗಳ ಪ್ರಜೆಗಳು ಅಮೆರಿಕ ವೀಸಾ ಪಡೆಯಲು ಹೆಚ್ಚಿನ ಶ್ರಮ ವಹಿಸಬೇಕಿದೆ.



ಮಕ್ಕಳ ಕಲಿಕಾ ಮಟ್ಟದಲ್ಲಿ ಇಳಿಕೆ

ನವದೆಹಲಿ: ದೇಶದಲ್ಲಿ 3,5 ಹಾಗೂ 8ನೇ ತರಗತಿ ವಿದ್ಯಾರ್ಥಿಗಳ ಕಲಿಕಾ ಮಟ್ಟದಲ್ಲಿ ಇಳಿಕೆ ಕಂಡುಬಂದಿದೆ. ವಿದ್ಯಾರ್ಥಿಗಳ ಕಲಿಕಾ ಮಟ್ಟವು 2012ಕ್ಕೂ ಹಿಂದಿನ ಮಟ್ಟವನ್ನು ತಲುಪಿದೆ. ಜೊತೆಗೆ ಗಣಿತ ವಿಷಯದ ಕಲಿಕಾ ಮಟ್ಟವು 2018ರ ಮಟ್ಟಕ್ಕೆ ಇಳಿದಿದೆ ಎಂದು ಶಿಕ್ಷಣ ಸ್ಥಿತಿಗತಿ ವಾರ್ಷಿಕ ವರದಿ (ಎಎಸ್‌ಇಆರ್) 2022ರಲ್ಲಿ ಹೇಳಲಾಗಿದೆ. ಈ ವರದಿಯು ಬುಧವಾರ ಬಿಡುಗಡೆಯಾಗಿದೆ.

ಎಲ್ಲ ರಾಜ್ಯಗಳ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲೂ ವಿದ್ಯಾರ್ಥಿಗಳ ಕಲಿಕಾ ಮಟ್ಟದಲ್ಲಿ ಇಳಿಕೆ ಕಂಡುಬಂದಿದೆ. ಕೇರಳ, ಹಿಮಾಚಲ ಪ್ರದೇಶ ಮತ್ತು ಹರಿಯಾಣದ ವಿದ್ಯಾರ್ಥಿಗಳ ಓದಿನ ಸಾಮರ್ಥ್ಯ ಕುಂಠಿತಗೊಂಡಿದೆ. ತಮಿಳುನಾಡು, ಮಿಜೋರಾಂ ಹಾಗೂ ಹರಿಯಾಣದ ವಿದ್ಯಾರ್ಥಿಗಳ ಗಣಿತ ಕೌಶಲವು ಕಡಿಮೆಯಾಗಿದೆ.

ಏನಿದು ಎಎಸ್‌ಇಆರ್?

ಇದೊಂದು ರಾಷ್ಟ್ರೀಯ ಮಟ್ಟದ ಮನೆ–ಮನೆ ಸಮೀಕ್ಷೆಯಾಗಿದೆ. ಇದನ್ನು ಎಎಸ್‌ಇಆರ್ ಕೇಂದ್ರ ನಡೆಸುತ್ತದೆ. ಗ್ರಾಮೀಣ ಭಾರತದ ಮಕ್ಕಳ ಶಾಲೆ ಹಾಗೂ ಕಲಿಕೆಯ ಕುರಿತು ಈ ಸಮೀಕ್ಷೆ ಮಾಹಿತಿ ನೀಡುತ್ತದೆ. 2005ರಿಂದ ಎಎಸ್‌ಇಆರ್ ಈ ಸಮೀಕ್ಷೆಗಳನ್ನು ನಡೆಸುತ್ತಿದೆ.

ಕೋವಿಡ್ ಕಾರಣದಿಂದ ಮಕ್ಕಳು ಶಾಲೆಗೆ ಹೋಗದಂತಾಗಿತ್ತು. ಆದರೆ, ಈಗ ಪರಿಸ್ಥಿತಿ ಸುಧಾರಿಸಿದ್ದು, ಮಕ್ಕಳು ಪುನಃ ಶಾಲೆಗೆ ತೆರಳುತ್ತಿದ್ದಾರೆ. ಈ ಹಂತದಲ್ಲಿ ಈ ಸಮೀಕ್ಷೆ ನಡೆಸಿರುವುದು ಈ ವರದಿಯ ಪ್ರಾಮುಖ್ಯತೆಯನ್ನು ಹೆಚ್ಚಿಸಿದೆ.

ದಾಖಲಾತಿ ಏರಿಕೆ

ಶಾಲಾ ದಾಖಲಾತಿಯ ಸಂಖ್ಯೆಯು ಶೇ 98ರಷ್ಟು ಏರಿಕೆಯಾಗಿದೆ. ಶಿಕ್ಷಣ ಹಕ್ಕು ಕಾಯ್ದೆ ಜಾರಿ ಆದಾಗಿನಿಂದಲೂ ಈ ಮಟ್ಟದ ಏರಿಕೆ ಕಂಡಿರುವುದು ಇದೇ ಮೊದಲ ಬಾರಿಗೆ ಎಂದು ಎಎಸ್‌ಇಆರ್ ತನ್ನ ವರದಿಯಲ್ಲಿ ಹೇಳಿದೆ.

ಕೋವಿಡ್ ಕಾರಣದಿಂದ ಶಾಲೆಗಳು ಕೆಲವು ವರ್ಷಗಳು ಮುಚ್ಚಿದ್ದವು. ಹೀಗಿದ್ದರೂ, ಶಾಲಾ ದಾಖಲಾತಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಜೊತೆಗೆ, ಸರ್ಕಾರಿ ಶಾಲೆಗಳಲ್ಲೇ ಹೆಚ್ಚಿನ ದಾಖಲಾತಿ ಆಗುತ್ತಿದೆ. 2018ರ ಹೋಲಿಕೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆಯಲ್ಲೂ ಇಳಿಕೆಯಾಗಿದೆ ಎಂದೂ ಹೇಳಿದೆ. 'ಕಳೆದ 15 ವರ್ಷಗಳಿಂದಲೂ 6–14 ವಯಸ್ಸಿನ ಮಕ್ಕಳ ದಾಖಲಾತಿ ಪ್ರಯಾಣವು ಶೇ 95ಕ್ಕೂ ಹೆಚ್ಚಿಗೆ ಇತ್ತು. 2018ಕ್ಕೆ ಹೋಲಿಸಿಕೊಂಡರೆ ಒಟ್ಟಾರೆ ದಾಖಲಾತಿ ಪ್ರಮಾಣವು ಶೇ 97.2 (2018)ರಿಂದ ಶೇ 98.4 (2022)ಕ್ಕೆ ಏರಿಕೆಯಾಗಿದೆ' ಎಂದಿದೆ.

ಸಮೀಕ್ಷೆ ವೇಳೆ ವಿದ್ಯಾರ್ಥಿಗಳಿಗೆ ನೀಡಲಾದ ಪರೀಕ್ಷೆ


- **ಒಂದನೇ ಹಂತ** ಅಕ್ಷರ, ಪದ, ಸರಳ ಪ್ಯಾರಾ ಓದುವುದು
- **ಎರಡನೇ ಹಂತ** ಕಥೆ ಓದುವುದು

2018 2022 (ಶೇಕಡವಾರು ಪ್ರಮಾಣಗಳಲ್ಲಿ)

3ನೇ ತರಗತಿ

ಎರಡನೇ ಹಂತದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಪ್ರಮಾಣವು ಶೇ 27.3 (2018)ರಿಂದ ಶೇ 20.5 (2022)ಕ್ಕೆ ಇಳಿಕೆಯಾಗಿದೆ


ಶೇ 10 ಅಂಕಗಳಷ್ಟು ಇಳಿಕೆ ಕಂಡ ರಾಜ್ಯಗಳ ಪಟ್ಟಿ



5ನೇ ತರಗತಿ

ಎರಡನೇ ಹಂತದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಪ್ರಮಾಣವು ಶೇ 50.5 (2018)ರಿಂದ ಶೇ 42.8 (2022)ಕ್ಕೆ ಇಳಿಕೆಯಾಗಿದೆ. ಬಿಹಾರ, ಒಡಿಶಾ, ಮಣಿಪುರ ಹಾಗೂ ಜಾರ್ಖಂಡ್ ರಾಜ್ಯಗಳಲ್ಲಿ ಈ ತರಗತಿಯ ವಿದ್ಯಾರ್ಥಿಗಳ ಕಲಿಕಾ ಮಟ್ಟದಲ್ಲಿ ಸ್ವಲ್ಪ ಸುಧಾರಣೆಯಾಗಿದೆ

ಶೇ 15 ಅಂಕಗಳಷ್ಟು ಇಳಿಕೆ ಕಂಡ ರಾಜ್ಯಗಳ ಪಟ್ಟಿ



ಉತ್ತರಾಖಂಡ, ರಾಜಸ್ಥಾನ, ಹರಿಯಾಣ, ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಗಳು ಶೇ 10ರಷ್ಟು ಇಳಿಕೆಕಂಡಿವೆ.

8ನೇ ತರಗತಿ


ಈ ತಗರತಿಯಲ್ಲಿ ಓದುವ ಸಾಮರ್ಥ್ಯ ಇರುವ ವಿದ್ಯಾರ್ಥಿಗಳ ಪ್ರಮಾಣವು ಶೇ 73 (2018)ರಿಂದ ಶೇ 69.6 (2022)ಕ್ಕೆ ಇಳಿಕೆಯಾಗಿದೆ.

ಗಣಿತ ಕಲಿಕಾ ಸಾಮರ್ಥ್ಯ

ವಿದ್ಯಾರ್ಥಿಗಳ ಗಣಿತ ಕಲಿಕಾ ಸಾಮರ್ಥ್ಯವು 2018ರ ಮಟ್ಟವನ್ನು ತಲುಪಿದೆ. ಮೂರನೇ ಹಾಗೂ ಐದನೇ ತರಗತಿ ವಿದ್ಯಾರ್ಥಿಗಳ ಗಣಿತ ಕಲಿಕಾ ಮಟ್ಟವು ಕುಸಿತ ಕಂಡಿದ್ದರೆ, 8ನೇ ತರಗತಿಯ ವಿದ್ಯಾರ್ಥಿಗಳ ಕಲಿಕಾ ಮಟ್ಟದಲ್ಲಿ ಏರಿಕೆ ಕಂಡುಬಂದಿದೆ.


3ನೇ ತರಗತಿ

ಈ ಹಂತದ ಮಕ್ಕಳು ವ್ಯವಕಲನ (ಕಳೆಯುವುದು) ಮಾಡುವ ಸಾಮರ್ಥ್ಯವು ಶೇ 28.2 (2018)ರಿಂದ ಶೇ 25.9 (2022)ಕ್ಕೆ ಇಳಿಕೆಯಾಗಿದೆ.



5ನೇ ತರಗತಿ

ಭಾಗಾಕಾರ ಮಾಡುವ ಸಾಮರ್ಥ್ಯ ಇರುವ ಐದನೇ ತರಗತಿ ವಿದ್ಯಾರ್ಥಿಗಳ ಪ್ರಮಾಣವು ಶೇ 27.9 (2018) ರಿಂದ ಶೇ 25.6 (2022)ಕ್ಕೆ ಇಳಿಕೆಯಾಗಿದೆ.



8ನೇ ತರಗತಿ ವಿದ್ಯಾರ್ಥಿಗಳ ಗಣಿತ ಕಲಿಕಾ ಸಾಮರ್ಥ್ಯದಲ್ಲಿ ಶೇ 44.1 (2018)ರಿಂದ ಶೇ 44.7 (2022)ರಷ್ಟು ಸುಧಾರಣೆ ಕಂಡುಬಂದಿದೆ. ಈ ಹಂತದಲ್ಲಿ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳ ಹಾಗೂ ಪ್ರಮುಖವಾಗಿ ಹೆಣ್ಣುಮಕ್ಕಳ ಸಾಮರ್ಥ್ಯದಲ್ಲಿ ಏರಿಕೆ ಕಂಡುಬಂದಿದೆ. ಹುಡುಗರು ಹಾಗೂ ಖಾಸಗಿ ಶಾಲೆಗಳ ವಿದ್ಯಾರ್ಥಿಗಳಲ್ಲಿ ಗಣಿತ ಕಲಿಕಾ ಸಾಮರ್ಥ್ಯದಲ್ಲಿ ಇಳಿಕೆ ಕಂಡುಬಂದಿದೆ.

ಆಧಾರ: ಪಿಟಿಐ ಪ್ರಜಾವಾಣಿ ಗ್ರಾಫಿಕ್ಸ್

ಮಾಧ್ಯಮ ಸ್ವಾತಂತ್ರ್ಯ ಹತ್ತಿಕ್ಕುವ ಯತ್ನ: ಕಳವಳ

ಪ್ರಜಾವಾಣಿ

ನವದೆಹಲಿ: ಮಾಹಿತಿ ತಂತ್ರಜ್ಞಾನ ನಿಯಮಗಳಿಗೆ ಕೇಂದ್ರ ಸರ್ಕಾರವು ತರಲು ಹೊರಟಿರುವ ತಿದ್ದುಪಡಿಗಳ ಬಗ್ಗೆ ಭಾರತೀಯ ಸಂಪಾದಕರ ಕೂಟವು ತೀವ್ರ ಕಳವಳ ವ್ಯಕ್ತಪಡಿಸಿದೆ. ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಕರಡು ತಿದ್ದುಪಡಿ ನಿಯಮಗಳು, ಮಾಧ್ಯಮಗಳ ಸ್ವಾತಂತ್ರ್ಯವನ್ನು ಹತ್ತಿಕ್ಕುತ್ತವೆ ಎಂದು ಕೂಟವು ಕಳವಳ ವ್ಯಕ್ತಪಡಿಸಿದೆ.

'ಸುದ್ದಿಯೊಂದನ್ನು ಪರಿಶೀಲಿಸಿ, ಅದು ಸುಳ್ಳು ಎಂದು ಘೋಷಿಸುವ ಪೂರ್ಣ ಅಧಿಕಾರವು ಕೇಂದ್ರ ಸರ್ಕಾರದ ಅಧೀನ ಸಂಸ್ಥೆಯಾದ ಪಿಐಬಿ ಅಥವಾ ಈ ಕೆಲಸಕ್ಕೆ ಕೇಂದ್ರ ಸರ್ಕಾರವು ನಿಯೋಜಿಸುವ ಯಾವುದೇ ಸಂಸ್ಥೆಗೆ ಲಭ್ಯವಾಗುತ್ತದೆ. ತನಗೆ ತೊಂದರೆಯಾಗುತ್ತಿದೆ ಎಂದು ಸರ್ಕಾರವು ಭಾವಿಸುವ ಯಾವುದೇ ಸುದ್ದಿಯನ್ನು ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳಿಂದ ಬಲವಂತವಾಗಿ ತೆಗೆಸುವ ಅಧಿಕಾರ ಈ ಸಂಸ್ಥೆಗಳಿಗೆ ದೊರೆಯುತ್ತದೆ. ಇಂತಹ ಸುದ್ದಿಗಳ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಹಲವು ಕಾನೂನುಗಳು ಜಾರಿಯಲ್ಲಿವೆ. ಆದರೆ ಈಗ ತರಲು ಹೊರಟಿರುವ ನಿಯಮಗಳು ಮಾಧ್ಯಮಗಳ ಸೆನ್ಸಾರ್‌ಶಿಪ್‌ಗೆ ಕಾರಣವಾಗುತ್ತವೆ ಮತ್ತು ಮಾಧ್ಯಮಗಳನ್ನು ಹತ್ತಿಕ್ಕಲು ಸರ್ಕಾರಕ್ಕೆ ನೆರವಾಗುತ್ತವೆ' ಎಂದು ಕೂಟವು ಕಳವಳ ವ್ಯಕ್ತಪಡಿಸಿದೆ.

ಕರಡು ತಿದ್ದುಪಡಿ ನಿಯಮಗಳಲ್ಲಿ 'ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ಎಲ್ಲಾ ವ್ಯವಹಾರಗಳು' ಎಂಬುದನ್ನು ಸೇರಿಸಲಾಗಿದೆ. ತನ್ನ ಯಾವುದೇ ವ್ಯವಹಾರಗಳಿಗೆ ಸಂಬಂಧಿಸಿದ ಸುದ್ದಿಗಳು ಸತ್ಯ ಅಥವಾ ಅಸತ್ಯ ಎಂದು ನಿರ್ಧರಿಸುವ ಅನಿರ್ಬಂಧಿತ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ನೀಡಲು ಇದನ್ನು ಸೇರಿಸಲಾಗಿದೆ ಎಂದು ಭಾಸವಾಗುತ್ತಿದೆ. ಸರ್ಕಾರದ ವಿರುದ್ಧದ ಕಾನೂನುಬದ್ಧ ಟೀಕೆಯನ್ನು ಇದು ಹತ್ತಿಕ್ಕುತ್ತದೆ ಮತ್ತು ಸರ್ಕಾರವನ್ನು ಹೊಣೆಯಾಗಿಸುವ ಮಾಧ್ಯಮಗಳ ಸಾಮರ್ಥ್ಯವನ್ನು ಬಾಧಿಸುತ್ತದೆ' ಎಂದು ಕೂಟವು ಟೀಕಿಸಿದೆ.

'ಈ ನಿಯಮಗಳನ್ನು 2021ರ ಮಾರ್ಚ್‌ನಲ್ಲಿ ಮೊದಲ ಬಾರಿಗೆ ಪ್ರಕಟಿಸಿದಾಗಲೂ ಸಂಪಾದಕರ ಕೂಟವು ಕಳವಳವನ್ನು ದಾಖಲಿಸಿತ್ತು. ದೇಶದ ಯಾವುದೇ ಭಾಗದಲ್ಲಿ ಪ್ರಕಟವಾದ ಸುದ್ದಿಗಳನ್ನು ನ್ಯಾಯಾಂಗದ ಪರಿಶೀಲನೆ ಇಲ್ಲದೆಯೇ ತಡೆಯುವ, ಅಳಿಸಿ ಹಾಕುವ, ಮಾರ್ಪಡಿಸುವ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ಈ ನಿಯಮಗಳು ನೀಡುತ್ತವೆ. ಡಿಜಿಟಲ್ ಸುದ್ದಿ ಮಾಧ್ಯಮಗಳು ಮತ್ತು ವಿಸ್ತೃತವಾಗಿ ಮಾಧ್ಯಮಗಳ ಮೇಲೆ ವಿನಾ ಕಾರಣ ನಿರ್ಬಂಧ ಹೇರುವ ಅವಕಾಶಗಳು ಈ ನಿಯಮಗಳಲ್ಲಿ ಇವೆ ಎಂದು ಆಗ ಹೇಳಲಾಗಿತ್ತು' ಎಂದು ಕೂಟವು ಹೇಳಿದೆ.

ಸುಳ್ಳು ಸುದ್ದಿ ನಿರ್ಧಾರ ಅಧಿಕಾರ ಪಿಐಬಿಗೆ

ದೇಶದ ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳಲ್ಲಿ ಪ್ರಕಟವಾಗುವ ಸುದ್ದಿಗಳು ಸುಳ್ಳೇ ಅಥವಾ ನಿಜವೇ ಎಂಬುದನ್ನು ನಿರ್ಧರಿಸುವ ಹಾಗೂ ಅಂತಹ ಸುದ್ದಿಗಳನ್ನು ತೆಗೆದುಹಾಕುವ ಅಧಿಕಾರವನ್ನು ಪಿಐಬಿಗೆ ನೀಡಲು ಕೇಂದ್ರ ಸರ್ಕಾರವು ಮುಂದಾಗಿದೆ. ಇದಕ್ಕಾಗಿ ಮಾಹಿತಿ ತಂತ್ರಜ್ಞಾನ ನಿಯಮಗಳಿಗೆ ತರಲು ಹೊರಟಿರುವ ಕರಡು ತಿದ್ದುಪಡಿಗಳನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ.

ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ತಿದ್ದುಪಡಿಯ ಕರಡನ್ನು ತನ್ನ ಜಾಲತಾಣದಲ್ಲಿ ಇದೇ ಮಂಗಳವಾರ ಪ್ರಕಟಿಸಿದೆ. ಇದಕ್ಕೆ ಸಾರ್ವಜನಿಕರಿಂದ ಅಭಿಪ್ರಾಯವನ್ನು ಆಹ್ವಾನಿಸಿದೆ.

ಆನ್‌ಲೈನ್ ಸುದ್ದಿ ಮಾಧ್ಯಮಗಳು, ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾಗುವ ಸುದ್ದಿಗಳ ಸತ್ಯಾಸತ್ಯತೆಯನ್ನು ಪರಿಶೀಲಿಸುವ ಮತ್ತು ಅದನ್ನು ಸುಳ್ಳು ಸುದ್ದಿ ಎಂದು ಘೋಷಿಸುವ ಅಧಿಕಾರವನ್ನು ಪಿಐಬಿಯ 'ಫ್ಯಾಕ್ಟ್‌ಚೆಕ್' ಘಟಕಕ್ಕೆ ಈ ತಿದ್ದುಪಡಿಯು ನೀಡುತ್ತದ.

ಮಾಧ್ಯಮ ಸ್ವಾತಂತ್ರ್ಯ ಹತ್ತಿಕ್ಕದೇ ಇರಲು ಈ ತಿದ್ದುಪಡಿಗಳನ್ನು ಸರ್ಕಾರ ತೆಗೆದುಹಾಕಬೇಕು. ಮಾಧ್ಯಮ ಸಂಸ್ಥೆಗಳ ಜತೆಗೆ ಸಮಾಲೋಚನೆ ನಡೆಸಬೇಕು

ಭಾರತೀಯ ಸಂಪಾದಕರ ಕೂಟ

ಹಲ್ಲೆ: ತೆಲಂಗಾಣ ಬಿಜೆಪಿ ಅಧ್ಯಕ್ಷನ ಪುತ್ರ ಅಮಾನತು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಹೈದರಾಬಾದ್‌ನ ಮಹೀಂದ್ರಾ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಸಹವಿದ್ಯಾರ್ಥಿ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ತೆಲಂಗಾಣ ಪೊಲೀಸರು ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಬಂಡಿ ಸಂಜಯ್ ಅವರ ಪುತ್ರ ಬಂಡಿ ಭಗೀರಥ ಸಾಯಿ ಮತ್ತು ಇತರರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಭಗೀರಥ ವಿದ್ಯಾರ್ಥಿಗೆ ಕಪಾಳ ಮೋಕ್ಷ ಮಾಡುತ್ತಿರುವುದು ಹಾಗೂ ಆತನ ಸ್ನೇಹಿತ ಸಹ ಹೊಡೆದಿರುವ ದೃಶ್ಯಗಳನ್ನು ಮಂಗಳವಾರದಿಂದ ಕೆಲ ಸುದ್ದಿ ವಾಹಿನಿಗಳು ಬಿತ್ತರಿಸಿವೆ. ಸಾಮಾಜಿಕ ಮಾಧ್ಯಮಗಳಲ್ಲೂ ಹಲ್ಲೆ ನಡೆಸಿರುವ ವಿಡಿಯೊ ಹರಿದಾಡಿದೆ.

ದುಂಡಿಗಲ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುವ ವಿ.ವಿ ಅಧಿಕಾರಿಗಳು ಹಲ್ಲೆ ನಡೆಸಿದಕ್ಕಾಗಿ ಭಗೀರಥನನ್ನು ವಿ.ವಿಯಿಂದ ಅಮಾನತುಗೊಳಿಸಿದ್ದಾರೆ ಎಂದು ವರದಿಯಾಗಿದೆ.

'ಸಿ.ಎಂ ಕೆ. ಚಂದ್ರಶೇಖರ್ ರಾವ್ ಅವರ ಆದೇಶದ ಮೇರೆಗೆ ನನ್ನ ಮಗನನ್ನು ಅಮಾನತು ಮಾಡಲಾಗಿದೆ. ನನ್ನ ರಾಜಕೀಯ ಬೆಳವಣಿಗೆ ಸಹಿಸದೆ ಈ ರೀತಿ ಮಾಡಿದ್ದಾರೆ' ಎಂದು ಬಂಡಿ ಸಂಜಯ್ ಆರೋಪಿಸಿದರು.

ಬಂಡಿ ಕಚೇರಿಯು ವಿಡಿಯೊ ಬಿಡುಗಡೆ ಮಾಡಿದ್ದು, ಹಲ್ಲೆಗೊಳಗಾದ ವಿದ್ಯಾರ್ಥಿ ಹೇಳಿಕೆ ನೀಡಿದ್ದಾನೆ. 'ಭಗೀರಥನ ಸ್ನೇಹಿತನ ಸಹೋದರಿಗೆ ಮೆಸೇಜ್ ಕಳುಹಿಸುತ್ತಿದ್ದ ಬಗ್ಗೆ ಕೇಳಿದ ಪ್ರಶ್ನೆಗೆ ನಾನು ಅಸಭ್ಯವಾಗಿ ಉತ್ತರಿಸಿದೆ. ಆಗ ಅವನು ನನಗೆ ಕಪಾಳಕ್ಕೆ ಹೊಡೆದ. ಅದನ್ನು ಮರೆತು, ನಾವು ಸ್ನೇಹಿತರಾಗಿದ್ದೇವೆ' ಎಂದು ಸಂತ್ರಸ್ತ ವಿದ್ಯಾರ್ಥಿ ಶ್ರೀರಾಮ್ ಹೇಳಿದ್ದಾರೆ.

ತೆರಿಗೆ ವಂಚನೆ: ನೌಕಾಪಡೆ ಸಿಬ್ಬಂದಿ ಸೇರಿ 31 ಮಂದಿ ವಿರುದ್ಧ ಸಿಬಿಐ ಎಫ್‌ಐಆರ್

ನವದೆಹಲಿ (ಪಿಟಿಐ): ಫಾರ್ಮ್–16ರಲ್ಲಿ ಸೇರಿಸದ ವಿವಿಧ ಕಡಿತಗಳ ಕುರಿತು ಸುಳ್ಳು ಮಾಹಿತಿ ನೀಡುವ ಮೂಲಕ ₹ 44 ಲಕ್ಷಕ್ಕೂ ಹೆಚ್ಚು ಆದಾಯ ತೆರಿಗೆ ಮರುಪಾವತಿ ಕ್ಲೇಮ್ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ನೌಕಾಪಡೆ 18 ಸಿಬ್ಬಂದಿ ಸೇರಿದಂತೆ ಕೇರಳ ಮೂಲದ 31 ಜನರ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ನಕಲಿ ಕ್ಲೇಮ್‌ಗಳನ್ನು ಮಾಡಲು ಏಜೆಂಟರ ಸೇವೆ ಬಳಸಿದ ಆರೋಪದ ಮೇಲೆ ನೌಕಾಪಡೆ, ಪೊಲೀಸ್ ಸಿಬ್ಬಂದಿ ಮತ್ತು ಎರಡು ಖಾಸಗಿ ಕಂಪನಿಗಳ ಕಾರ್ಯನಿರ್ವಾಹಕರ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿದೆ ಎಂದು ಅವರು ಹೇಳಿದರು.

ಏಜೆಂಟರು ಆದಾಯ ತೆರಿಗೆ ಮರುಪಾವತಿಯ ಶೇಕಡ 10ರಷ್ಟು ಶುಲ್ಕ ವಿಧಿಸುತ್ತಿದ್ದರು ಎಂದು ತನಿಖಾ ಸಂಸ್ಥೆ ಆರೋಪಿಸಿದೆ.

ಒಟ್ಟು 51 ಜನರು ಸುಳ್ಳು ಮಾಹಿತಿ ನೀಡಿದ್ದಾರೆ ಎಂದು ಆರೋಪಿಸಿ ಕೇರಳದ ಪ್ರಧಾನ ಮುಖ್ಯ ಆದಾಯ ತೆರಿಗೆ ಆಯುಕ್ತರು ನೀಡಿದ ದೂರಿನ ಮೇರೆಗೆ ಸಿಬಿಐ ಈ ಕ್ರಮ ಕೈಗೊಂಡಿದೆ.

'ಐಟಿ ಇಲಾಖೆ ನೋಟಿಸ್ ನೀಡಿದ ನಂತರ 51 ತೆರಿಗೆದಾರರ ಪೈಕಿ 20 ಮಂದಿ ತಪ್ಪು ಮಾಡಿರುವುದನ್ನು ಒಪ್ಪಿಕೊಂಡು ₹14.62 ಲಕ್ಷಗಳನ್ನು ಆದಾಯ ತೆರಿಗೆ ಇಲಾಖೆಗೆ ಮರುಪಾವತಿ ಮಾಡಿದ್ದಾರೆ' ಎಂದು ಎಫ್‌ಐಆರ್‌ನಲ್ಲಿ ತಿಳಿಸಲಾಗಿದೆ.

ಗುಜರಾತ್ ನಕಲಿ ಎನ್‌ಕೌಂಟರ್: 'ಸುಪ್ರೀಂ'ನಲ್ಲಿ ವಿಚಾರಣೆ ಆರಂಭ

ನವದೆಹಲಿ (ಪಿಟಿಐ): ಗುಜರಾತ್‌ನಲ್ಲಿ 2002ರಿಂದ 2006ರ ನಡುವೆ ನಡೆದ ಹಲವು 'ನಕಲಿ ಎನ್‌ಕೌಂಟರ್' ಪ್ರಕರಣಗಳ ವಿಚಾರಣೆಯನ್ನು ಸುಪ್ರೀಂಕೋರ್ಟ್ ಬುಧವಾರ ಕೈಗೆತ್ತಿಕೊಂಡಿತು.

ಈ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಮೂರ್ತಿ ಎಚ್.ಎಸ್. ಬೇಡಿ ನೇತೃತ್ವದ ಸಮಿತಿಯನ್ನು ಸುಪ್ರೀಂಕೋರ್ಟ್ ಈ ಹಿಂದೆ ರಚಿಸಿತ್ತು. ಈ ಸಮಿತಿಯು 2002ರಿಂದ 2006ರ ನಡುವೆ ನಡೆದ ನಕಲಿ ಎನ್‌ಕೌಂಟರ್‌ಗಳ ತನಿಖೆ ನಡೆಸಿ ಮುಚ್ಚಿದ ಲಕೋಟೆಯಲ್ಲಿ ವರದಿಯನ್ನು 2019ರಲ್ಲಿ ಸುಪ್ರೀಂಕೋರ್ಟ್‌ಗೆ ಸಲ್ಲಿಸಿತ್ತು.

17 ಪ್ರಕರಣಗಳ ಪೈಕಿ ಮೂರು ಪ್ರಕರಣಗಳಲ್ಲಿ ಪೊಲೀಸ್ ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಲು ಸಮಿತಿ ಶಿಫಾರಸು ಮಾಡಿದೆ. ಈ ಕುರಿತ ವಿಚಾರಣೆ ಆರಂಭಿಸಿದ ನ್ಯಾಯಮೂರ್ತಿ ಎಸ್.ಕೆ.ಕೌಲ್, ಎ.ಎಸ್.ಓಕಾ ಮತ್ತು ಜೆ.ಬಿ. ಪಾರ್ದಿವಾಲಾ ಅವರ ಪೀಠ, ವಿಚಾರಣೆಯನ್ನು ಮಾರ್ಚ್‌ಗೆ ಮುಂದೂಡಿತು.

ದೆಹಲಿ: ಸದನದಲ್ಲಿ ಲಂಚದ ಹಣ ಪ್ರದರ್ಶನ

ನವದೆಹಲಿ(ಪಿಟಿಐ): ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ತಾತ್ಕಾಲಿಕ ಸಿಬ್ಬಂದಿ ನೇಮಕ ಸಂಬಂಧ ಗುತ್ತಿಗೆದಾರನೊಬ್ಬ ಲಂಚ ನೀಡಲು ಪ್ರಯತ್ನಿಸಿದ್ದಾನೆಂದು ಆರೋಪಿಸಿ ಆಡಳಿತ ಪಕ್ಷ ಆಮ್ ಆದ್ಮಿಯ ಶಾಸಕ ಮಹೇಂದರ್ ಗೋಯಲ್ ಅವರು ಬುಧವಾರ ದೆಹಲಿ ವಿಧಾನಸಭೆಯಲ್ಲಿ ಲಂಚದ ಹಣ ಪ್ರದರ್ಶಿಸಿ ಕೋಲಾಹಲ ಸೃಷ್ಟಿಸಿದರು.

ರೋಹಿಣಿಯಲ್ಲಿನ ಬಾಬಾಸಾಹೇಬ್ ಅಂಬೇಡ್ಕರ್ ಆಸ್ಪತ್ರೆಯಲ್ಲಿ ತಾತ್ಕಾಲಿಕ ಸಿಬ್ಬಂದಿ ನೇಮಕದಲ್ಲಿ ಅಕ್ರಮಗಳು ನಡೆದಿವೆ ಎಂದು ಆರೋಪಿಸಿದ ಗೋಯಲ್ ಅವರು ತಮ್ಮ ಬಾಯಿ ಮುಚ್ಚಿಸಲು ಯತ್ನಿಸುತ್ತಿರುವ 'ಬಲಾಢ್ಯ'ರಿಂದ ಜೀವ ಬೆದರಿಕೆ ಇದೆ ಎಂದು ಸದನದಲ್ಲಿ ಹೇಳಿದರು.

'ನನ್ನ ಜೀವ ಅಪಾಯದಲ್ಲಿದೆ. ನನಗೆ ರಕ್ಷಣೆ ಬೇಕು. ಖಾಸಗಿ ಗುತ್ತಿಗೆದಾರನ ಮೇಲೆ ಕ್ರಮ ತೆಗೆದುಕೊಳ್ಳಬೇಕು' ಎಂದು ರಿಥಾಲಾ ಕ್ಷೇತ್ರದ ಶಾಸಕ ಮನವಿ ಮಾಡಿದರು.

ಕಲಾಪ ಮುಂದೂಡಿಕೆ: ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸುತ್ತಿರುವ ಮುಖ್ಯ ಕಾರ್ಯದರ್ಶಿ, ಹಣಕಾಸು ಕಾರ್ಯದರ್ಶಿ ಮತ್ತು ಆರೋಗ್ಯ ಕಾರ್ಯದರ್ಶಿಗಳನ್ನು ಅಮಾನತುಗೊಳಿಸಲು ಆಗ್ರಹಿಸಿ ಆಡಳಿತ ಪಕ್ಷ ಎಎಪಿ ಶಾಸಕರು ಸ್ಪೀಕರ್ ಮುಂದಿನ ಆವರಣಕ್ಕೆ ಧುಮುಕಿ ಪ್ರತಿಭಟನೆ ನಡೆಸಿದರು.

ಇದರಿಂದಾಗಿ ಸ್ಪೀಕರ್ ರಾಮ್ ನಿವಾಸ್ ಗೋಯಲ್ ಕಲಾಪವನ್ನು ಕೆಲ ಕಾಲ ಮುಂದೂಡಿದ್ದರು. ಸಂಜೆ ಮತ್ತೆ ಕಲಾಪ ಸೇರಿದಾಗ ಪ್ರತಿಭಟನೆ ಮುಂದುವರಿಯಿತು. ಇದರಿಂದ ಕಲಾಪವನ್ನು ದಿನದ ಮಟ್ಟಿಗೆ ಸ್ಪೀಕರ್ ಮುಂದೂಡಿದರು.

ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಅವರ ಆಜ್ಞೆಯ ಮೇರೆಗೆ ಮುಖ್ಯ ಕಾರ್ಯದರ್ಶಿ ಸೇರಿ ಅನೇಕ ಅಧಿಕಾರಿಗಳು ವಿವಿಧ ಯೋಜನೆಗಳಿಗೆ ಅಡ್ಡಿಯಾಗಿದ್ದಾರೆ. ಸರ್ಕಾರದ ಕಾರ್ಯಚಟುವಟಿಕೆಗಳಿಗೆ ಅಡ್ಡಿಪಡಿಸುವ ಪಿತೂರಿಯಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಆಡಳಿತ ಪಕ್ಷದ ಶಾಸಕರು ಒತ್ತಾಯಿಸಿದರು.

ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರದ ಕೌಂಟರ್ ಅಫಿಡವಿಟ್

'ಇಸ್ಲಾಮಿಕ್ ಆಡಳಿತ ಸ್ಥಾಪನೆ ಒಪ್ಪಲಾಗದು'

ನವದೆಹಲಿ (ಪಿಟಿಐ): 'ಸ್ಟೂಡೆಂಟ್ಸ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ (ಸಿಮಿ) ಸಂಘಟನೆಯು ಭಾರತದಲ್ಲಿ ಇಸ್ಲಾಮಿಕ್ ಆಡಳಿತ ಸ್ಥಾಪಿಸುವ ಉದ್ದೇಶ ಹೊಂದಿದ್ದು ಅದನ್ನು ಒಪ್ಪಲು ಸಾಧ್ಯವಿಲ್ಲ. ಈ ಸಂಘಟನೆಯ ಸದಸ್ಯರು ದೇಶದ ಸಾರ್ವಭೌಮತ್ವ ಹಾಗೂ ಪ್ರಾದೇಶಿಕ ಸಮಗ್ರತೆಗೆ ಧಕ್ಕೆ ತರುವಂತಹ ಚಟುವಟಿಕೆಗಳಲ್ಲಿ ಈಗಲೂ ನಿರತರಾಗಿದ್ದಾರೆ' ಎಂದು ಕೇಂದ್ರ ಸರ್ಕಾರವು ಬುಧವಾರ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಕೌಂಟರ್ ಅಫಿಡವಿಟ್‌ನಲ್ಲಿ ತಿಳಿಸಿದೆ.

ಸಿಮಿ ಸಂಘಟನೆ ಮೇಲೆ ನಿಷೇಧ ಹೇರಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಹಲವು ಅರ್ಜಿಗಳನ್ನು ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಅಭಯ್ ಎಸ್.ಓಕಾ ಮತ್ತು ಜೆ.ಬಿ.ಪಾರ್ದಿವಾಲಾ ಅವರನ್ನೊಳಗೊಂಡ ತ್ರಿಸದಸ್ಯ ಪೀಠವು ಬುಧವಾರ ವಿಚಾರಣೆಗೆ ಒಳಪಡಿಸಿತು.

'ಸಂಘಟನೆಯ ಸದಸ್ಯರು ತಮ್ಮ ಸಹವರ್ತಿಗಳು ಹಾಗೂ ಅಲ್ ಕೈದಾ, ಎಲ್‌ಇಟಿ, ಜೆಇಎಂ, ಐಎಸ್, ಐಎಂನಂತಹ ಉಗ್ರ ಸಂಘಟನೆಗಳ ಜೊತೆ ನಿರಂತರ ಸಂಪರ್ಕದಲ್ಲಿದ್ದಾರೆ. ಅವರ ಚಟುವಟಿಕೆಗಳಿಂದಾಗಿ ದೇಶದಲ್ಲಿ ಶಾಂತಿ ಮತ್ತು ಕೋಮು ಸೌಹಾರ್ದತೆಗೆ ಧಕ್ಕೆ ಎದುರಾಗಲಿದೆ' ಎಂದು ಅಫಿಡವಿಟ್‌ನಲ್ಲಿ ಉಲ್ಲೇಖಿಸಲಾಗಿದೆ.

'ಸಿಮಿ ಸಂಘಟನೆಯ ಉದ್ದೇಶವು ನಮ್ಮ ದೇಶದ ಕಾನೂನಿಗೆ ವಿರುದ್ಧವಾಗಿದೆ. ಈ ಸಂಘಟನೆ ಇಸ್ಲಾಂ ತತ್ವ ಪಸರಿಸಲು ಹಾಗೂ ಧಾರ್ಮಿಕ ಯುದ್ಧಕ್ಕಾಗಿ ವಿದ್ಯಾರ್ಥಿಗಳು ಹಾಗೂ ಯುವಕರನ್ನು ಸಜ್ಜುಗೊಳಿಸುತ್ತಿದೆ. 'ಇಸ್ಲಾಮಿ ಇನ್ ಕ್ವಿಲಾಬ್' ಕ್ರಾಂತಿಯ ಮೂಲಕ ಮುಸ್ಲಿಂ ವೈಯಕ್ತಿಕ ಕಾನೂನು (ಶರಿಯತ್) ಆಧಾರಿತ ಇಸ್ಲಾಮಿಕ್ ಆಡಳಿತ ಸ್ಥಾಪಿಸಲು ಒತ್ತು ನೀಡುತ್ತಿದೆ. ಸಿಮಿಗೆ ಈ ದೇಶದ ಸಂವಿಧಾನ ಮತ್ತು ಅದರಲ್ಲಿನ ಜಾತ್ಯತೀತ ತತ್ವದಲ್ಲಿ ನಂಬಿಕೆ ಇಲ್ಲ. ಮೂರ್ತಿ ಪೂಜೆಯನ್ನು ಪಾಪವೆಂದು ಪರಿಗಣಿಸಿರುವ ಈ ಸಂಘಟನೆ, ಇಂತಹ ಆಚರಣೆಗೆ ಅಂತ್ಯ-ಹಾಡಬೇಕೆಂದು ಪ್ರಚಾರ ಮಾಡುತ್ತಿದೆ' ಎಂದು ವಿವರಿಸಲಾಗಿದೆ.

'2001ರ ಸೆಪ್ಟೆಂಬರ್ 27ರಂದು ಸಿಮಿ ಮೇಲೆ ನಿಷೇಧ ಹೇರಲಾಗಿತ್ತು. ಅಂದಿನಿಂದಲೂ ಈ ಸಂಘಟನೆಯ ಸದಸ್ಯರು ಒಂದೆಡೆ ಸೇರುತ್ತಿದ್ದಾರೆ. ಸಭೆಗಳನ್ನು ನಡೆಸುತ್ತಿದ್ದಾರೆ. ಒಳಸಂಚು ನಡೆಸುತ್ತಿದ್ದಾರೆ. ಶಸ್ತ್ರಾಸ್ತ್ರ ಮತ್ತು ಸ್ಫೋಟಕ ವಸ್ತುಗಳನ್ನು ಸಂಗ್ರಹಿಸಿಡುವಂತಹ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಆ ಮೂಲಕ ದೇಶದ ಸಾರ್ವಭೌಮತ್ವ ಮತ್ತು ಆಂತರಿಕ ಭದ್ರತೆಗೆ ಧಕ್ಕೆ ತರುವ ಪ್ರಯತ್ನ ನಡೆಸುತ್ತಿದ್ದಾರೆ' ಎಂದು ಹೇಳಲಾಗಿದೆ.

'ಸಿಮಿಯು ಪಾಕಿಸ್ತಾನ, ಅಫ್ಗಾನಿಸ್ತಾನ, ಸೌದಿ ಅರೇಬಿಯಾ, ಬಾಂಗ್ಲಾದೇಶ ಮತ್ತು ನೇಪಾಳದಲ್ಲಿ ತನ್ನ ಸಂಪರ್ಕ ಹೊಂದಿದೆ. ವಿದ್ಯಾರ್ಥಿ ಸಂಘಟನೆಯಾಗಿರುವ ಇದು ಇಸ್ಲಾಮಿಕ್ ಉಗ್ರ ಸಂಘಟನೆಗಳಿಂದ ಪ್ರಭಾವಿತವಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರ ಚಟುವಟಿಕೆಗಳನ್ನು ನಡೆಸಲು ಈ ಸಂಘಟನೆಯನ್ನು ಬಳಸಿಕೊಳ್ಳಲಾಗಿದೆ. ಹಿಜ್ಬುಲ್–ಮುಜಾಹಿದ್ದೀನ್, ಲಷ್ಕರ್–ಎ–ತಯಬಾದಂತಹ ಉಗ್ರ ಸಂಘಟನೆಗಳು ದೇಶ ವಿರೋಧಿ ಗುರಿಗಳನ್ನು ಸಾಧಿಸುವುದಕ್ಕಾಗಿ ಸಿಮಿ ಸದಸ್ಯರನ್ನು ಯಶಸ್ವಿಯಾಗಿ ಬಳಸಿಕೊಂಡಿವೆ' ಎಂದೂ ತಿಳಿಸಿದೆ.

ವಿಚಾರಣೆ ಮುಂದೂಡಿಕೆ

'ಸಿಮಿ ಸಂಘಟನೆ ಮೇಲೆ ಹೇರಲಾಗಿರುವ ನಿರ್ಬಂಧವನ್ನು ಮುಂದುವರಿಸಲಾಗಿದೆ. ಅರ್ಜಿದಾರರು 2019ರ ಜುಲೈ 29ರಂದು ಕಾನೂನು ಬಾಹಿರ ಚಟುವಟಿಕೆ (ನಿಯಂತ್ರಣ) ಮಂಡಳಿ ನೀಡಿದ್ದ ತೀರ್ಪನ್ನು ಪ್ರಶ್ನಿಸಿದ್ದಾರೆ. ಅದಕ್ಕೆ ಪ್ರತಿಯಾಗಿ ನಾವು ಅಫಿಡವಿಟ್ ಸಲ್ಲಿಸಿದ್ದೇವೆ' ಎಂದು ಕೇಂದ್ರ ಸರ್ಕಾರದ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲ ರಜತ್ ನಾಯರ್ ನ್ಯಾಯಪೀಠಕ್ಕೆ ತಿಳಿಸಿದರು.

ವಿವಿಧ ಅರ್ಜಿದಾರರ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲರು ಕೇಂದ್ರ ಸರ್ಕಾರ ಸಲ್ಲಿಸಿರುವ ಅಫಿಡವಿಟ್ ಅನ್ನು ಪರಿಶೀಲಿಸುವುದಾಗಿ ಹೇಳಿದರು. ಬಳಿಕ ಅರ್ಜಿದಾರರು ಹಾಗೂ ಪ್ರತಿವಾದಿಗಳು ವಿಚಾರಣೆಯನ್ನು ಮುಂದೂಡುವಂತೆ ಮನವಿ ಮಾಡಿದರು. ಅವರ ಕೋರಿಕೆಯನ್ನು ಮಾನ್ಯ ಮಾಡಿದ ನ್ಯಾಯಪೀಠವು ಮುಂದಿನ ತಿಂಗಳು ವಿಚಾರಣೆ ನಡೆಸುವುದಾಗಿ ಹೇಳಿತು.

ಪಂಜಾಬ್: ಬಿಜೆಪಿ ಸೇರಿದ ಮನ್‌ಪ್ರೀತ್ ಬಾದಲ್

ನವದೆಹಲಿ: ಪಂಜಾಬ್‌ನ ಮಾಜಿ ಹಣಕಾಸು ಸಚಿವ ಮನ್‌ಪ್ರೀತ್ ಸಿಂಗ್ ಬಾದಲ್ ಅವರು ಬುಧವಾರ ಬಿಜೆಪಿಗೆ ಸೇರ್ಪಡೆಯಾಗಿದ್ದು, ಹೊಸ ಪಕ್ಷದಲ್ಲಿ ಮೊದಲ ಇನ್ನಿಂಗ್ಸ್ ಆರಂಭಿಸುವ ಮುನ್ನವೇ ಈ ಹಿಂದೆ ಇದ್ದ ಕಾಂಗ್ರೆಸ್ ಪಕ್ಷದ ಗುಂಪುಗಾರಿಕೆಯನ್ನು ಟೀಕಿಸಿದ್ದಾರೆ.

ಬಿಜೆಪಿ ಮತ್ತು ಪ್ರಧಾನಿ ಮೋದಿ ಅವರ ನಾಯಕತ್ವವನ್ನು ಶ್ಲಾಘಿಸಿದ ಮನ್‌ಪ್ರೀತ್, 'ಮೋದಿ ಅವರ ಸುಮಾರು ಒಂಬತ್ತು ವರ್ಷಗಳ ಆಡಳಿತದಲ್ಲಿ ಭಾರತವು ರಾಜತಾಂತ್ರಿಕವಾಗಿ ಮತ್ತು ಆರ್ಥಿಕವಾಗಿಯೂ ಸೇರಿದಂತೆ ಪ್ರಬಲ ಶಕ್ತಿಯಾಗಿ ಹೊರಹೊಮ್ಮಿದೆ' ಎಂದಿದ್ದಾರೆ.

ಕಾಂಗ್ರೆಸ್ ತೊರೆದ ಕಾರಣ ವಿವರಿಸಿದ ಅವರು, 'ತನ್ನಲ್ಲೇ ಹೋರಾಟ ಮಾಡುತ್ತಿರುವ ಒಂದು ಪಕ್ಷವು ಹೇಗೆ ಕಾರ್ಯನಿರ್ವಹಿಸಬಲ್ಲದು? ಪಂಜಾಬ್ ಮಾತ್ರವಲ್ಲ. ಇತರ ರಾಜ್ಯಗಳಲ್ಲೂ ಕಾಂಗ್ರೆಸ್ ಬಣಗಳಿಂದ ತುಂಬಿ ಹೋಗಿದೆ' ಎಂದಿದ್ದಾರೆ.

ಗಣರಾಜ್ಯೋತ್ಸವ ಸಾರ್ವಜನಿಕರಿಗೆ ಸೀಮಿತ ಅವಕಾಶ

ನವದೆಹಲಿ: ಈ ವರ್ಷದ ಗಣರಾಜ್ಯೋತ್ಸವದ ಪರೇಡ್ ವೀಕ್ಷಣೆಗೆ ಸಾರ್ವಜನಿಕರ ಉಪಸ್ಥಿತಿಯನ್ನು ಕೋವಿಡ್ ಪೂರ್ವದ ದಿನಗಳಿಗೆ ಹೋಲಿಸಿದರೆ ಶೇ 50ಕ್ಕಿಂತಲೂ ಹೆಚ್ಚು ಕಡಿತಗೊಳಿಸಲಾಗುತ್ತಿದೆ ಎಂದು ರಕ್ಷಣಾ ಸಚಿವಾಲಯ ಬುಧವಾರ ತಿಳಿಸಿದೆ.

'ಕೋವಿಡ್ ಪೂರ್ವದಲ್ಲಿ ಲಕ್ಷಕ್ಕೂ ಹೆಚ್ಚು ಸಂಖ್ಯೆಯಲ್ಲಿ ಸೇರುತ್ತಿದ್ದರು. ಇದನ್ನು ಈ ಬಾರಿ 45,000ಕ್ಕೆ ಕಡಿತಗೊಳಿಸಲಾಗಿದೆ' ಎಂದು ರಕ್ಷಣಾ ಕಾರ್ಯದರ್ಶಿ ಗಿರಿಧರ್ ಅರಮನೆ ಹೇಳಿದರು.

ಈ ಬಾರಿ ಮುಖ್ಯ ಅತಿಥಿಯಾಗಿ ಈಜಿಪ್ಟ್ ಅಧ್ಯಕ್ಷ ಅಬ್ದುಲ್ ಫತ್ತಾಹ ಅಲ್ ಸಿಸಿ ಅವರನ್ನು ಆಹ್ವಾನಿಸಲಾಗಿದೆ.

ಕೇಂದ್ರ ವಾಣಿಜ್ಯ ಸಚಿವಾಲಯದಿಂದ ಬಿಡುಗಡೆ

ಹಲಾಲ್ ಪ್ರಮಾಣೀಕರಣ: ಕರಡು ಮಾರ್ಗಸೂಚಿ

ನವದೆಹಲಿ (ಪಿಟಿಐ): ದೇಶದಿಂದ ರಫ್ತು ಮಾಡುವ ಎಲ್ಲ ಬಗೆಯ ಮಾಂಸ ಮತ್ತು ಮಾಂಸ ಉತ್ಪನ್ನಗಳ ಹಲಾಲ್ ಪ್ರಮಾಣೀಕರಣಕ್ಕಾಗಿ ಕೇಂದ್ರ ವಾಣಿಜ್ಯ ಸಚಿವಾಲಯವು ಕರಡು ಮಾರ್ಗಸೂಚಿಗಳನ್ನು ಹೊರಡಿಸಿದೆ.

ಸಚಿವಾಲಯ ಕರಡು ಮಾರ್ಗಸೂಚಿ ಪ್ರಕಾರ, 'ಹಲಾಲ್ ಪ್ರಮಾಣೀಕೃತ' ವಾದ ಎಲ್ಲ ಬಗೆಯ ಮಾಂಸ ಮತ್ತು ಅದರ ಉತ್ಪನ್ನಗಳು ರಫ್ತು ಮಾಡಬಹುದು. ಕ್ವಾಲಿಟಿ ಕೌನ್ಸಿಲ್ ಆಫ್ ಇಂಡಿಯಾದ ಮಂಡಳಿಯ ಮಾನ್ಯತೆ ಪಡೆದ ಪ್ರಮಾಣೀಕರಣ ಸಂಸ್ಥೆಯು, ಹಲಾಲ್‌ನಡಿ ಉತ್ಪಾದಿಸಿದ, ಸಂಸ್ಕರಿಸಿದ ಮತ್ತು ಪ್ಯಾಕ್ ಮಾಡಿದ ಬಗ್ಗೆ ಮಾನ್ಯತಾ ಪ್ರಮಾಣಪತ್ರ ವಿತರಿಸಲಿದೆ.

ಭಾರತೀಯ ಅನುಸರಣೆ ಮೌಲ್ಯಮಾಪನ ಯೋಜನೆ (ಐ–ಸಿಎಎಸ್) ಹಲಾಲ್‌ಗೆ ನಿಗದಿಪಡಿಸಿದ ಕಾರ್ಯವಿಧಾನದ ಪ್ರಕಾರ ಪ್ರಮಾಣೀಕರಣ ಸಂಸ್ಥೆಗಳು ಮಾನ್ಯತಾ ಪ್ರಮಾಣ ಪತ್ರ ನೀಡಲಿವೆ. ಇದರ ಮೇಲ್ವಿಚಾರಣಾ ಸಂಸ್ಥೆಯಾಗಿ ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (ಎಪಿಇಡಿಎ) ಗುರುತಿಸಲಾಗಿದೆ ಎಂದು ಮಾರ್ಗಸೂಚಿಗಳಲ್ಲಿ ಹೇಳಿದೆ.

ವಿದೇಶಿ ವ್ಯಾಪಾರದ ಪ್ರಧಾನ ನಿರ್ದೇಶನಾಲಯ (ಡಿಜಿಎಫ್‌ಟಿ) ಹಲಾಲ್ ಮಾನ್ಯತಾ ಪ್ರಮಾಣ ಪತ್ರದ ಅಗತ್ಯದ ಬಗ್ಗೆ ಸಲ್ಲಿಸಿದ ಪ್ರಸ್ತಾವನೆ ಮೇಲೆ ವಾಣಿಜ್ಯ ಸಚಿವಾಲಯ ಕರಡು ಮಾರ್ಗಸೂಚಿಗಳನ್ನು ಹೊರಡಿಸಿದೆ.

ಕರಡು ಮಾರ್ಗಸೂಚಿ ಪರಿಷ್ಕರಣೆಗೆ, ಅಂತಿಮ ಮಾರ್ಗಸೂಚಿ ಪ್ರಕಟಿಸಲು ಸಾರ್ವಜನಿಕ ಮತ್ತು ಕೈಗಾರಿಕಾ ವಲಯದ ಅಭಿಪ್ರಾಯ ಆಹ್ವಾನಿಸಿದ್ದು, ಫೆ.17 ರೊಳಗೆ ಅಭಿಪ್ರಾಯ ಸಲ್ಲಿಸಬಹುದಾಗಿದೆ.

ಜಾಗತಿಕ ಹಲಾಲ್ ಆಹಾರ ಮಾರುಕಟ್ಟೆ ವಹಿವಾಟು 2021ರಲ್ಲಿ 1978 ಶತಕೋಟಿ ಡಾಲರ್ ಇತ್ತು. 2027ರ ವೇಳೆಗೆ ಮಾರುಕಟ್ಟೆ ವಹಿವಾಟು 3,907.7 ಶತಕೋಟಿ ಡಾಲರ್ ತಲುಪುವ ನಿರೀಕ್ಷೆಯಿದೆ. ದೊಡ್ಡ ಮುಸ್ಲಿಂ ಜನಸಂಖ್ಯೆಯನ್ನು ಪ್ರತಿನಿಧಿಸುವ ಭಾರತ ಹಲಾಲ್ ಆಧಾರಿತ ಉದ್ಯಮಗಳಿಗೆ ವಿಪುಲ ಅವಕಾಶಗಳನ್ನು ಒದಗಿಸಲಿದೆ ಎಂದು ಮಾರ್ಗಸೂಚಿಯಲ್ಲಿ ಹೇಳಿದೆ.

ಮುಖ್ಯಾಂಶಗಳು

- ಅಭಿಪ್ರಾಯ ಸಲ್ಲಿಸಲು ಫೆ.17 ಕೊನೆ ದಿನ
- ಹಲಾಲ್ ಆಧರಿತ ಉದ್ಯಮಗಳಿಗೆ ವಿಪುಲ ಅವಕಾಶ
- ಮೇಲ್ವಿಚಾರಣಾ ಸಂಸ್ಥೆಯಾಗಿ ಅಪೆಡಾ ಆಯ್ಕೆ

ಕ್ರಿಕೆಟ್: ಶಾರ್ದೂಲ್ ಅಮೋಘ ಬೌಲಿಂಗ್; ಕಿವೀಸ್ ದಿಟ್ಟ ಹೋರಾಟ, ಬ್ರೇಸ್‌ವೆಲ್ ಶತಕ ವ್ಯರ್ಥ

ಗಿಲ್ ದ್ವಿಶತಕ: ಭಾರತಕ್ಕೆ ಜಯ

ಹೈದರಾಬಾದ್ (ಪಿಟಿಐ): ಶುಭಮನ್ ಗಿಲ್ ದ್ವಿಶತಕದ ಭರಾಟೆ ಮತ್ತು ಪ್ರವಾಸಿ ನ್ಯೂಜಿಲೆಂಡ್ ತಂಡದ ದಿಟ್ಟ ಹೋರಾಟಕ್ಕೆ ಮುತ್ತಿನನಗರಿಯ ಕ್ರಿಕೆಟ್ ಅಭಿಮಾನಿಗಳು ಸಾಕ್ಷಿಯಾದರು. ಒಟ್ಟು 686 ರನ್‌ಗಳ ಹೊಳೆಯಲ್ಲಿ ಮಿಂದೆದ್ದರು.

ಇಲ್ಲಿಯ ರಾಜೀವಗಾಂಧಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಮೊದಲ ಏಕದಿನ ಪಂದ್ಯದಲ್ಲಿ ಭಾರತ ತಂಡವು 12 ರನ್‌ಗಳಿಂದ ಜಯ ಸಾಧಿಸಿತು.

ಆರಂಭಿಕ ಬ್ಯಾಟರ್ ಶುಭಮನ್ ಗಿಲ್ (208; 149ಎಸೆತ) ಅಬ್ಬರದ ದ್ವಿಶತಕದ ಬಲದಿಂದ ಭಾರತ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 349 ರನ್ ಗಳಿಸಿತು. ಇದಕ್ಕುತ್ತರವಾಗಿ ಕಿವೀಸ್ ಬಳಗವೂ ದಿಟ್ಟ ಆಟವಾಡಿತು. ಮೈಕಲ್ ಬ್ರೇಸ್‌ವೆಲ್ (140; 78ಎ) ಅವರ ಅಬ್ಬರದ ಶತಕದಿಂದಾಗಿ ಜಯದ ಸನಿಹ ಸಾಗಿತ್ತು. ಆದರೆ, ಆತಿಥೇಯ ಬೌಲರ್‌ಗಳ ಆಟ ಮೇಲುಗೈ ಸಾಧಿಸಿತು. ಕಿವೀಸ್ 49.2 ಓವರ್‌ಗಳಲ್ಲಿ 337 ರನ್ ಗಳಿಸಿ ಆಲೌಟ್ ಆಯಿತು. ಭಾರತವು 3 ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಗಳಿಸಿತು.

ಎರಡು ಜೀವದಾನಕ್ಕೆ ದ್ವಿಶತಕದ ಲಾಭ: ಶುಭಮನ್ ಗಿಲ್ ಅವರಿಗೆ ನ್ಯೂಜಿಲೆಂಡ್ ಫೀಲ್ಡರ್‌ಗಳು ಎರಡು ಜೀವದಾನ ನೀಡಿದರು. ಇದರ ಲಾಭ ಪಡೆದ ಪಂಜಾಬಿ ಹುಡುಗ ಗಿಲ್ ದ್ವಿಶತಕದ ದಾಖಲೆ ಬರೆದರು.

ಹೋದ ತಿಂಗಳಷ್ಟೇ ಬಾಂಗ್ಲಾದೇಶದ ಎದುರು ಚಟ್ಟೋಗ್ರಾಮ್‌ನಲ್ಲಿ ಇಶಾನ್ ಕಿಶನ್ ಅಬ್ಬರದ ದ್ವಿಶತಕ ಸಿಡಿಸಿದ್ದರು. ಈಗ ಅವರಿಗಿಂತ ಒಂದು ವರ್ಷ ಕಿರಿಯ ವಯಸ್ಸಿನ ಆಟಗಾರ ಶುಭಮನ್ ಗಿಲ್ ದ್ವಿಶತಕ ಗಳಿಸಿದರು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಭಾರತ ತಂಡಕ್ಕೆ ನಾಯಕ ರೋಹಿತ್ ಶರ್ಮಾ ಮತ್ತು ಗಿಲ್ ಮೊದಲ ವಿಕೆಟ್ ಜೊತೆಯಾಟದಲ್ಲಿ 60 ರನ್ ಸೇರಿಸಿ ಉತ್ತಮ ಆರಂಭ ನೀಡಿದರು.

ಆದರೆ 13ನೇ ಓವರ್‌ನಲ್ಲಿ ರೋಹಿತ್ ಔಟಾದ ನಂತರ ವಿರಾಟ್ ಕೊಹ್ಲಿ, ಇಶಾನ್ ಕಿಶನ್ ಒಂದಂಕಿ ಗಳಿಸಿ ನಿರ್ಗಮಿಸಿದರು. ಸೂರ್ಯಕುಮಾರ್ ಯಾದವ್ (31), ಹಾರ್ದಿಕ್ ಪಾಂಡ್ಯ (28) ಮತ್ತು ವಾಷಿಂಗ್ಟನ್ ಸುಂದರ್ (12) ಮಾತ್ರ ಸ್ವಲ್ಪ ಹೊತ್ತು ಕ್ರೀಸ್‌ನಲ್ಲಿದ್ದರು. ಆದರೆ, ಗಿಲ್ ಮಾತ್ರ ತಮ್ಮ ಲಯದಲ್ಲಿದ್ದರು. 182 ರನ್ ಗಳಿಸಿದ ಸಂದರ್ಭದಲ್ಲಿ ಸತತ ಮೂರು ಸಿಕ್ಸರ್ ಬಾರಿಸಿದ ಗಿಲ್ ದ್ವಿಶತಕದ ಗಡಿ ದಾಟಿ ಸಂಭ್ರಮಿಸಿದರು. ಈ ಸಾಧನೆ ಮಾಡಿದ ಅತಿ ಕಿರಿಯ ಆಟಗಾರನಾದರು. ಸಚಿನ್ ತೆಂಡೂಲ್ಕರ್, ವೀರೇಂದ್ರ ಸೆಹ್ವಾಗ್, ರೋಹಿತ್ ಶರ್ಮಾ, ಇಶಾನ್ ನಂತರದ ದ್ವಿಶತಕ ಬಾರಿಸಿದ ಭಾರತೀಯ ಆಟಗಾರನಾದರು. 19 ಇನಿಂಗ್ಸ್‌ಗಳಲ್ಲಿ ಸಾವಿರ ರನ್ ದಾಟಿದ ವಿಶ್ವದ 2ನೇ ಆಟಗಾರನಾದರು.



ವಿಕೆಟ್ ಗಳಿಸಿದ ಶಾರ್ದೂಲ್ ಠಾಕೂರ್ ಅವರನ್ನು ಸಹ ಆಟಗಾರ ಹಾರ್ದಿಕ್ ಪಾಂಡ್ಯ ಅಭಿನಂದಿಸಿದರು– ಎಎಫ್‌ಪಿ ಚಿತ್ರ



ಮೈಕಲ್ ಬ್ರೇಸ್‌ವೆಲ್

ಸ್ಕೋರ್ ಕಾರ್ಡ್

ಭಾರತ 8ಕ್ಕೆ 349 (50 ಓವರ್)

ರೋಹಿತ್ ಸಿ ಡೆರಿಲ್ ಬಿ ಟಿಕ್ನರ್ 34 (38ಎ, 4X4, 6X2), ಶುಭಮನ್ ಸಿ ಫಿಲಿಪ್ಸ್ ಬಿ ಶಿಪ್ಲಿ 208 (149ಎ, 4X19, 6X9), ಕೊಹ್ಲಿ ಬಿ ಸ್ಯಾಂಟ್ನರ್ 8 (10ಎ, 4X1), ಇಶಾನ್ ಸಿ ಲಥಾಮ್ ಬಿ ಫರ್ಗ್ಯುಸನ್ 5 (14ಎ), ಸೂರ್ಯಕುಮಾರ್ ಸಿ ಸ್ಯಾಂಟ್ನರ್ ಬಿ ಡೆರಿಲ್ 31 (26ಎ, 4X4), ಹಾರ್ದಿಕ್ ಬಿ ಡೆರಿಲ್ 28 (38ಎ, 4X3), ವಾಷಿಂಗ್ಟನ್ ಎಲ್‌ಬಿಡಬ್ಲ್ಯು ಬಿ ಶಿಪ್ಲಿ 12 (14ಎ), ಶಾರ್ದೂಲ್ ರನೌಟ್ (ಸ್ಯಾಂಟ್ನರ್/ಲಥಾಮ್) 3 (3ಎ), ಕುಲದೀಪ್ ಔಟಾಗದೆ 5 (6ಎ), ಶಮಿ ಔಟಾಗದೆ 2 (2ಎ)

ಇತರೆ (ವೈಡ್ 13) 13

ವಿಕೆಟ್ ಪತನ: 1-60 (ರೋಹಿತ್ ಶರ್ಮಾ, 12.1), 2-88 (ವಿರಾಟ್ ಕೊಹ್ಲಿ, 15.2), 3-110 (ಇಶಾನ್ ಕಿಶನ್, 19.4), 4-175 (ಸೂರ್ಯಕುಮಾರ್ ಯಾದವ್, 28.3), 5-249 (ಹಾರ್ದಿಕ್ ಪಾಂಡ್ಯ, 39.4), 6-292 (ವಾಷಿಂಗ್ಟನ್ ಸುಂದರ್, 44.6), 7-302 (ಶಾರ್ದೂಲ್ ಠಾಕೂರ್, 46.4), 8-345 (ಶುಭಮನ್ ಗಿಲ್, 49.2)

ಬೌಲಿಂಗ್: ಹೆನ್ರಿ ಶಿಪ್ಲಿ 9–0–74–2, ಲಾಕಿ ಫರ್ಗ್ಯುಸನ್ 10–0–77–1, ಬ್ಲೇರ್ ಟಿಕ್ನರ್ 10–0–69–1, ಮಿಚೆಲ್ ಸ್ಯಾಂಟ್ನರ್ 10–0–56–1, ಮೈಕಲ್ ಬ್ರೇಸ್‌ವೆಲ್ 6–0–43–0, ಡೆರಿಲ್ ಮಿಚೆಲ್ 5–0–30–2

ನ್ಯೂಜಿಲೆಂಡ್ 337 (49.2 ಓವರ್)

ಫಿನ್ ಸಿ ಶಹಬಾಜ್ (ಬದಲಿ) ಬಿ ಶಾರ್ದೂಲ್ 40 (39ಎ, 4X7, 6X1), ಡೆವೊನ್ ಸಿ ಕುಲದೀಪ್ ಬಿ ಸಿರಾಜ್ 10 (16ಎ, 4X2), ನಿಕೊಲ್ಸ್ ಬಿ ಕುಲದೀಪ್ 18 (31ಎ, 4X3), ಡೆರಿಲ್ ಎಲ್‌ಬಿಡಬ್ಲ್ಯು ಕುಲದೀಪ್ 9 (12ಎ), ಲಥಾಮ್ ಸಿ ವಾಷಿಂಗ್ಟನ್ ಬಿ ಸಿರಾಜ್ 24 (46ಎ, 4X3), ಫಿಲಿಪ್ಸ್ ಬಿ ಶಮಿ 11 (20ಎ, 6X1), ಬ್ರೇಸ್‌ವೆಲ್ ಎಲ್‌ಬಿಡಬ್ಲ್ಯು ಶಾರ್ದೂಲ್ 140 (78ಎ, 4X12, 6X10), ಸ್ಯಾಂಟ್ನರ್ ಸಿ ಸೂರ್ಯಕುಮಾರ್ ಬಿ ಸಿರಾಜ್ 57 (45ಎ, 4X7, 6X1), ಹೆನ್ರಿ ಬಿ ಸಿರಾಜ್ 0 (1ಎ), ಫರ್ಗ್ಯುಸನ್ ಸಿ ಶುಭಮನ್ ಬಿ ಹಾರ್ದಿಕ್ 8 (7ಎ, 4X1), ಟಿಕ್ನರ್ ಔಟಾಗದೆ 1 (1ಎ)

ಇತರೆ 19 (ಲೆಗ್‌ಬೈ 5, ವೈಡ್ 14)

ವಿಕೆಟ್ ಪತನ: 1-28 (ಡೆವೊನ್ ಕಾನ್ವೆ, 5.4), 2-70 (ಫಿನ್ ಅಲೆನ್, 12.5), 3-78 (ಹೆನ್ರಿ ನಿಕೊಲ್ಸ್, 15.3), 4-89 (ಡೆರಿಲ್ ಮಿಚೆಲ್, 17.4), 5-110 (ಗ್ಲೆನ್ ಫಿಲಿಪ್ಸ್, 24.3), 6-131 (ಟಾಮ್ ಲಥಾಮ್, 28.4), 7-293 (ಮಿಚೆಲ್ ಸ್ಯಾಂಟ್ನರ್, 45.4), 8-294 (ಹೆನ್ರಿ ಶಿಪ್ಲಿ, 45.5), 9-328 (ಲಾಕಿ ಫರ್ಗ್ಯುಸನ್, 48.3), 10-337 (ಮೈಕಲ್ ಬ್ರೇಸ್‌ವೆಲ್, 49.2)

ಬೌಲಿಂಗ್: ಮೊಹಮ್ಮದ್ ಶಮಿ 10–1–69–1, ಮೊಹಮ್ಮದ್ ಸಿರಾಜ್ 10–2–46–4, ಹಾರ್ದಿಕ್ ಪಾಂಡ್ಯ 7–0–70–1, ಕುಲದೀಪ್ ಯಾದವ್ 8–1–43–2, ಶಾರ್ದೂಲ್ ಠಾಕೂರ್ 7.2–0–54–2, ವಾಷಿಂಗ್ಟನ್ ಸುಂದರ್ 7–0–50–0

ಫಲಿತಾಂಶ: ಭಾರತ ತಂಡಕ್ಕೆ 12 ರನ್‌ಗಳ ಜಯ

ವೇಗದ ದ್ವಿಶತಕ ಸಾಧನೆ

ಎಸೆತಗಳು	ಆಟಗಾರ	ದೇಶ
126	ಇಶಾನ್ ಕಿಶನ್	ಭಾರತ
138	ಕ್ರಿಸ್ ಗೇಲ್	ವಿಂಡೀಸ್
140	ವೀರೇಂದ್ರ ಸೆಹ್ವಾಗ್	ಭಾರತ
145	ಶುಭಮನ್ ಗಿಲ್	ಭಾರತ
147	ಸಚಿನ್ ತೆಂಡೂಲ್ಕರ್	ಭಾರತ

ವೇಗದ 1000 ರನ್ ಗಳಿಕೆ

ಇನಿಂಗ್ಸ್	ಆಟಗಾರ
18	ಫಕರ್ ಜಮಾನ್ (ಪಾಕ್)
19	ಶುಭಮನ್ ಗಿಲ್ (ಭಾರತ)
19	ಇಮಾಮ್ ಉಲ್ ಹಕ್ (ಪಾಕ್)
21	ವಿವಿಯನ್ ರಿಚರ್ಡ್ಸ್ (ವಿಂಡೀಸ್)

ತಂಡಗಳ ದ್ವಿಶತಕ ಸಾಧನೆಗಳು

ತಂಡ	ದ್ವಿಶತಕ
ಭಾರತ	7
ನ್ಯೂಜಿಲೆಂಡ್	1
ಪಾಕಿಸ್ತಾನ	1
ವೆಸ್ಟ್ ಇಂಡೀಸ್	1



ಪ್ರತಿಭಟನೆ ಮಾಡುತ್ತಿರುವ ಕುಸ್ತಿಪಟುಗಳಾದ ಸಾಕ್ಷಿ ಮಲಿಕ್, ವಿನೇಶಾ ಫೋಗಟ್, ಮತ್ತಿತರರರು –ಪಿಟಿಐ ಚಿತ್ರ

ಬ್ರಿಜ್‌ಭೂಷಣ್ ಶರಣ್ ವಿರುದ್ಧ ತೊಡೆ ತಟ್ಟಿದ ಪೈಲ್ವಾನರು

ಡಬ್ಲ್ಯುಎಫ್‌ಐ ಅಧ್ಯಕ್ಷ ಸರ್ವಾಧಿಕಾರಿ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷರು 'ಸರ್ವಾಧಿಕಾರಿ ಧೋರಣೆ' ತೋರುತ್ತಿದ್ದಾರೆ ಎಂದು ಆರೋಪಿಸಿರುವ ಖ್ಯಾತನಾಮ ಕುಸ್ತಿಪಟುಗಳು ಬುಧವಾರ ರಾಜಧಾನಿಯಲ್ಲಿ ಧರಣಿ ನಡೆಸಿದರು. ಅಧ್ಯಕ್ಷ ಸಿಂಗ್ ಅವರನ್ನು ವಜಾಗೊಳಿಸುವವರೆಗೂ ಅಂತರರಾಷ್ಟ್ರೀಯ ಕುಸ್ತಿ ಸ್ಪರ್ಧೆಗಳಲ್ಲಿ ಭಾಗವಹಿಸುವುದಿಲ್ಲವೆಂದೂ ಎಚ್ಚರಿಕೆ ನೀಡಿದ್ದಾರೆ.

ಟೋಕಿಯೊ ಒಲಿಂಪಿಕ್ ಕಂಚು ಪದಕವಿಜೇತ ಬಜರಂಗ್ ಪೂನಿಯಾ, ಸಾಕ್ಷಿ ಮಲಿಕ್ ಮತ್ತು ವಿಶ್ವ ಚಾಂಪಿಯನ್‌ಷಿಪ್ ಪದಕವಿಜೇತ ಕುಸ್ತಿಪಟು ವಿನೇಶಾ ಫೋಗಟ್ ಅವರೂ ಸೇರಿದಂತೆ ಪ್ರತಿಭಟನೆಯಲ್ಲಿದ್ದರು. ಡಬ್ಲ್ಯುಎಫ್‌ಐ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರ ವಿರುದ್ಧ ಟೀಕೆಗಳ ಮಳೆಗರೆದರು. 2019ರ ಫೆಬ್ರುವರಿಯಲ್ಲಿ ಸಿಂಗ್ ಅವರು ಫೆಡರೇಷನ್‌ಗೆ ಅವಿರೋಧವಾಗಿ ನೇಮಕವಾಗಿದ್ದರು.

'ನಮ್ಮ ಹೋರಾಟ ಸರ್ಕಾರ ಅಥವಾ ಭಾರತೀಯ ಕ್ರೀಡಾ ಪ್ರಾಧಿಕಾರ (ಎಸ್‌ಎಐ) ವಿರುದ್ಧ ಅಲ್ಲ. ಡಬ್ಲ್ಯುಎಫ್‌ಐ ಅಧ್ಯಕ್ಷರನ್ನು ಕಿತ್ತೆಸೆಯುವುದಕ್ಕಾಗಿ ನಮ್ಮ ಹೋರಾಟ. ಅಲ್ಲಿಯವರೆಗೂ ನಾವು ಸುಮ್ಮನಾಗುವುದಿಲ್ಲ' ಎಂದು ಬಜರಂಗ್ ಪೂನಿಯಾ ಹೇಳಿದರು.

'ನಮ್ಮ ಬೇಡಿಕೆ ಈಡೇರುವವರೆಗೂ ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸುವುದಿಲ್ಲ. ವಿದೇಶಿ ಕೋಚ್‌ಗಳು ನಮಗೆ ಬೆಂಬಲ ನೀಡಲು ನಿರಾಕರಿಸಿದ್ದಾರೆ. ಆದರೆ ಸಿಂಗ್ ಅವರು ಗೋಂಡಾದಲ್ಲಿರುವ ತಮ್ಮ ಸ್ವಂತ ಅಕಾಡೆಮಿಯಲ್ಲಿ ವಿದೇಶಿ ಕೋಚ್‌ಗಳನ್ನು ನೇಮಕ ಮಾಡಿಕೊಂಡಿದ್ದಾರೆ. ಕುಸ್ತಿಪಟುಗಳ ವಿರುದ್ಧ ಅವಾಚ್ಯ ಪದಗಳಿಂದಲೂ ಅವರು ನಿಂದಿಸಿದ್ದಾರೆ. ಆ ಘಟನೆಗಳ ವಿಡಿಯೊ ತುಣುಕುಗಳು ನಮ್ಮಲ್ಲಿವೆ. ಬೇಕಾದರೆ ತೋರಿಸುತ್ತೇವೆ' ಎಂದು ಬಜರಂಗ್ ಹೇಳಿದರು.

ಈ ಘಟನೆಗಳ ಬಗ್ಗೆ ಇದಕ್ಕೂ ಮುನ್ನ ಏಕೆ ಧ್ವನಿಯೆತ್ತಲಿಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ವಿನೇಶಾ ಫೋಗಟ್, 'ಅವರೆಲ್ಲ ಬಹಳ ಪ್ರಭಾವಿ ಹಾಗೂ ಬಲಾಢ್ಯ ವ್ಯಕ್ತಿಗಳಾಗಿದ್ದಾರೆ. ಆದ್ದರಿಂದ ನಮಗೆ ಧೈರ್ಯ ಸಾಲಲಿಲ್ಲ. ಇದೀಗ ನಮಗೆ ಬೇರೆ ದಾರಿಯೇ ಇರಲಿಲ್ಲ. ಪ್ರವಾಹದ ನೀರು ತಲೆಯ ಮಟ್ಟಕ್ಕೆ ಏರಿದೆ. ಮುಂದಿನ ಪೀಳಿಗೆಯ ಬಗ್ಗೆಯೂ ನಾವು ಯೋಚಿಸಬೇಕಿದೆ' ಎಂದರು.

'ನಾನು ನೇರವಾಗಿ ಮಾತನಾಡುತ್ತೇನೆ. ಪ್ರತಿಭಟಿಸುತ್ತೇನೆ ಎಂಬ ಕಾರಣಕ್ಕೆ ಅಶಿಸ್ತಿನ ಕ್ರೀಡಾಪಟು ಎಂಬ ಹಣೆಪಟ್ಟಿಯನ್ನು ನನಗೆ ಅಂಟಿಸಲಾಗಿದೆ' ಎಂದೂ ವಿನೇಶಾ ಹೇಳಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಅಧ್ಯಕ್ಷ ಸಿಂಗ್, 'ಡಬ್ಲ್ಯುಎಫ್‌ಐನಲ್ಲಿ ಜಾರಿಯಾಗಿರುವ ಕೆಲವು ನಿಯಮಗಳಿಂದ ಕುಸ್ತಿಪಟುಗಳು ವಿಚಲಿತರಾಗಿದ್ದಾರೆ. ಆದ್ದರಿಂದ ಪ್ರತಿಭಟನೆ ನಡೆಸಿದ್ದಾರೆ. ರಾಷ್ಟ್ರೀಯ ಚಾಂಪಿಯನ್‌ಷಿಪ್ ಮತ್ತು ಟ್ರಯಲ್ಸ್‌ನಲ್ಲಿ ಭಾಗವಹಿಸುವಂತೆ ಕುಸ್ತಿಪಟುಗಳಿಗೆ ತಿಳಿಸಲಾಗಿತ್ತು' ಎಂದಿದ್ದಾರೆ.

ಆಸ್ಟ್ರೇಲಿಯಾ ಓಪನ್ ಟೆನಿಸ್: ಇಗಾ ಗೆಲುವಿನ ಓಟ

ರಫೆಲ್ ನಡಾಲ್‌ಗೆ ಮೆಕೆಂಜಿ ಆಘಾತ

ಮೆಲ್ಬರ್ನ್ (ಎಎಫ್‌ಪಿ): ಹಾಲಿ ಚಾಂಪಿಯನ್ ರಫೆಲ್ ನಡಾಲ್ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಎರಡನೇ ಸುತ್ತಿನಲ್ಲೇ ಆಘಾತ ಅನುಭವಿಸಿದ್ದಾರೆ.

ಬುಧವಾರ ರಾಡ್ ಲೇವರ್ ಅರೆನಾದಲ್ಲಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಸ್ಪೇನ್ ಆಟಗಾರ 4–6, 4–6, 5–7ರಿಂದ ಅಮೆರಿಕದ ಮೆಕೆಂಜಿ ಮೆಕ್‌ಡೊನಾಲ್ಡ್ ಎದುರು ಎಡವಿದರು.

ಮೆಲ್ಬರ್ನ್‌ನಲ್ಲಿ ಭಾರಿ ಮಳೆ ಸುರಿದ ಕಾರಣ ಈ ಪಂದ್ಯವನ್ನು ಒಳಾಂಗಣದಲ್ಲಿ ಆಡಿಸಲಾಗಿತ್ತು. 36 ವರ್ಷದ ನಡಾಲ್ ಅವರಿಗೆ ಈ ಹಣಾಹಣಿಯಲ್ಲಿ ಚಪ್ಪೆಭಾಗದಲ್ಲಿ ಕಾಡಿದ ನೋವೂ ಹಿನ್ನಡೆ ಉಂಟುಮಾಡಿತು. ಅದಕ್ಕಾಗಿ

7 ವರ್ಷಗಳಲ್ಲೇ ಹಾಲಿ ಚಾಂಪಿಯನ್ ಒಬ್ಬರು ಇಷ್ಟು ಬೇಗ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರಿಂದ ನಿರ್ಗಮಿಸಿದ್ದು ಇದೇ ಮೊದಲು. ಸ್ಪೇನ್ ಆಟಗಾರ 22 ಗ್ರ್ಯಾನ್‌ಸ್ಲಾಮ್ ಕಿರೀಟ ಧರಿಸಿದ್ದಾರೆ. ಗಾಯ ಮತ್ತು ವಯಸ್ಸಿನ ಕಾರಣ ಅವರು ಮುಂಬರುವ ಟೂರ್ನಿಗಳಲ್ಲಿ ಆಡುವ ಕುರಿತು ಸಾಕಷ್ಟು ಪ್ರಶ್ನೆಗಳು ಎದ್ದಿವೆ.



ಮೆಕೆಂಜಿ ಮೆಕ್‌ಡೊನಾಲ್ಡ್

ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ ಅಮೆರಿಕದ ಫ್ರಾನ್ಸೆಸ್ ಟೈಫೊ 6-4, 6-4, 6-1ರಿಂದ ಚೀನಾದ ಶಾಂಗ್ ಜುಂಚೆಂಗ್ ಎದುರು, ಇಟಲಿಯ ಜಾನಿಕ್ ಸಿನ್ನರ್ 6-3, 6-2, 6-2ರಿಂದ ಅರ್ಜೆಂಟೀನಾದ ಥಾಮಸ್ ಎಚೆವೆರಿ ಎದುರು, ಕೆನಡಾದ ಫೆಲಿಕ್ಸ್ ಅಗರ್ ಅಲಿಯಾಸಿನ್ 3-6, 3-6, 6-3, 6-2, 6-2ರಿಂದ ಸ್ಲೊವೇಕಿಯಾದ ಅಲೆಕ್ಸ್ ಮೊಲ್ಕನ್ ಎದುರು ಗೆಲುವು ಸಾಧಿಸಿದರು.

ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಇಗಾ ಶ್ವಾಂಟೆಕ್ ಗೆಲುವಿನ ಓಟ ಮುಂದುವರಿಸಿದರು. ಎರಡನೇ ಸುತ್ತಿನ ಪಂದ್ಯದಲ್ಲಿ ಪೋಲೆಂಡ್ ಆಟಗಾರ್ತಿ 6-2, 6-3ರಿಂದ ಕೊಲಂಬಿಯಾದ ಮರಿಯಾ ಕ್ಯಾಮಿಲೊ ಒಸೊರಿಯೊ ಎದುರು ಗೆದ್ದರು. ಅಮೆರಿಕದ ಕೊಕೊ ಗಫ್ 6-3, 7-6 (7/4)ರಿಂದ ಬ್ರಿಟನ್‌ನ ಎಮ್ಮಾ ರಡುಕಾನು ಎದುರು ಗೆದ್ದರು.

ಕ್ವಾರ್ಟರ್‌ಫೈನಲ್‌ನತ್ತ ಭಾರತದ ಚಿತ್ತ

ಭುವನೇಶ್ವರ (ಪಿಟಿಐ): ಅಜೇಯ ಓಟ ಮುಂದುವರಿಸುವ ತವಕದಲ್ಲಿರುವ ಭಾರತ ತಂಡವು ವಿಶ್ವಕಪ್ ಹಾಕಿ ಟೂರ್ನಿಯ ಗುಂಪು ಹಂತದ ತನ್ನ ಕೊನೆಯ ಪಂದ್ಯದಲ್ಲಿ ಗುರುವಾರ ವೇಲ್ಸ್ ಸವಾಲು ಎದುರಿಸಲಿದೆ.

ಕ್ವಾರ್ಟರ್‌ಫೈನಲ್ ಹಂತಕ್ಕೆ ನೇರ ಪ್ರವೇಶ ಪಡೆಯಲು ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವದ ಬಳಗ ಈ ಪಂದ್ಯವನ್ನು ದೊಡ್ಡ ಅಂತರದಿಂದ ಗೆಲ್ಲಲು ಎದುರು ನೋಡುತ್ತಿದೆ.

ಡಿ ಗುಂಪಿನಲ್ಲಿ ಭಾರತ ಮತ್ತು ಇಂಗ್ಲೆಂಡ್ ತಲಾ ಎರಡು ಪಂದ್ಯಗಳಿಂದ ನಾಲ್ಕು ಪಾಯಿಂಟ್ಸ್ ಕಲೆಹಾಕಿವೆ. ಆದರೆ ಗೋಲು ವ್ಯತ್ಯಾಸದಲ್ಲಿ ಇಂಗ್ಲೆಂಡ್ (+5) ತಂಡವು ಭಾರತಕ್ಕಿಂತ (+2) ಮುಂದಿದೆ. ಗುರುವಾರ ಭಾರತದ ಪಂದ್ಯಕ್ಕಿಂತ ಮೊದಲು ಇಂಗ್ಲೆಂಡ್ ಹಾಗೂ ಸ್ಪೇನ್ ಸೆಣಸಲಿವೆ. ಹೀಗಾಗಿ ಈ ಪಂದ್ಯದ ಫಲಿತಾಂಶವನ್ನು ಗಮನಿಸಿ ಆಟದ ತಂತ್ರ ರೂಪಿಸುವ ಅವಕಾಶ ಭಾರತಕ್ಕಿದೆ. ಸ್ಪೇನ್ ಎದುರಿನ ಪಂದ್ಯದಲ್ಲಿ ಇಂಗ್ಲೆಂಡ್ ಸೋಲು ಅಥವಾ ಡ್ರಾ ಸಾಧಿಸಿದರೆ, ಭಾರತ ತಂಡದವರಿಗೆ ಯಾವುದೇ ಚಿಂತೆ ಇಲ್ಲ. ಆಗ ಭಾರತ ವೇಲ್ಸ್ ತಂಡವನ್ನು ಸೋಲಿಸಿದರೆ ಸಾಕು. ಒಂದು ವೇಳೆ ಇಂಗ್ಲೆಂಡ್ ತಂಡವು ಸ್ಪೇನ್ ವಿರುದ್ಧ ಗೆದ್ದರೆ, ಭಾರತ ಕನಿಷ್ಠ ಐದು ಗೋಲುಗಳಿಂದ ವೇಲ್ಸ್‌ಗೆ ಸೋಲುಣಿಸಬೇಕು.

ವೇಲ್ಸ್ ಅನ್ನು ಮಣಿಸಿದರೆ ಭಾರತ ಟೂರ್ನಿಯಿಂದ ಹೊರಬೀಳುವುದಿಲ್ಲ. ಗುಂಪಿನಲ್ಲಿ ಎರಡನೇ ಸ್ಥಾನ ಪಡೆದು ಕ್ರಾಸ್ ಓವರ್ ಪಂದ್ಯದಲ್ಲಿ ಆಡಲಿದೆ. ಸಿ ಗುಂಪಿನಲ್ಲಿ ಮೂರನೇ ಸ್ಥಾನ ಪಡೆದ ತಂಡವನ್ನು ಎದುರಿಸಲಿದೆ.

ಪೆನಾಲ್ಟಿ ಕಾರ್ನರ್‌ಗಳನ್ನು ಗೋಲುಗಳಲ್ಲಿ ಪರಿವರ್ತಿಸುವಲ್ಲಿ ಸುಧಾರಣೆ ಕಾಣಬೇಕಿದೆ


ಬಂಧನ: ವಿಶ್ವಕಪ್ ಟೂರ್ನಿಯ ಪಂದ್ಯಗಳ ಟಿಕೆಟ್‌ಗಳನ್ನು ಬ್ಲ್ಯಾಕ್‌ನಲ್ಲಿ ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಐವರನ್ನು ಭುವನೇಶ್ವರನಲ್ಲಿ ಪೊಲೀಸರು ಬಂಧಿಸಿದ್ದಾರೆ.



ಇಂದಿನ ಪಂದ್ಯಗಳು

- ಮಲೇಷ್ಯಾ–ನ್ಯೂಜಿಲೆಂಡ್ ಮಧ್ಯಾಹ್ನ 1ರಿಂದ
- ನೆದರ್ಲೆಂಡ್ಸ್–ಚಿಲಿ ಮಧ್ಯಾಹ್ನ 3ರಿಂದ
- ಸ್ಪೇನ್–ಇಂಗ್ಲೆಂಡ್ ಸಂಜೆ 5ರಿಂದ
- ಭಾರತ–ವೇಲ್ಸ್ ಸಂಜೆ 7ರಿಂದ

ಲೈವ್ ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಹರ್ಮನ್‌ಪ್ರೀತ್

ದ್ಯುತಿ ತಾತ್ಕಾಲಿಕ ಅಮಾನತು

ನವದೆಹಲಿ (ಪಿಟಿಐ): ಭಾರತದ ಸ್ಪ್ರಿಂಟರ್ ದ್ಯುತಿ ಚಾಂದ್ ಅವರು ನಿಷೇಧಿತ ಉದ್ದೀಪನ ಮದ್ದು ಸೇವಿಸಿದ್ದು ಸಾಬೀತಾಗಿದ್ದು ತಾತ್ಕಾಲಿಕವಾಗಿ ಅಮಾನತು ಮಾಡಲಾಗಿದೆ.

ಕಳೆದ ವರ್ಷ ಡಿಸೆಂಬರ್ 5ರಂದು ಭುವನೇಶ್ವರದಲ್ಲಿ ದ್ಯುತಿ ಅವರಿಂದ ಪರೀಕ್ಷೆಗಾಗಿ ಮಾದರಿ ಸಂಗ್ರಹಿಸಲಾಗಿತ್ತು. ಇದರಲ್ಲಿ ನಿಷೇಧಿತ ಅಂಶ ಇರುವುದು ಪತ್ತೆಯಾಗಿತ್ತು. ದ್ಯುತಿ ಅವರು ಸ್ನಾಯು ಮತ್ತು ಮೂಳೆಗಳ ಬಲವರ್ಧನೆಗಾಗಿ ಈ ಪದಾರ್ಥವನ್ನು ಸೇವಿಸಿದ್ದರೆಂದು ಹೇಳಲಾಗಿದೆ.

ಜ. 3ರಂದು ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕವು ದ್ಯುತಿ ಅವರಿಗೆ ಬರೆದ ಪತ್ರದಲ್ಲಿ ನಿಷೇಧಿತ ಪದಾರ್ಥ ಸೇವಿಸಿರುವುದನ್ನು ತಿಳಿಸಿದೆ.

ದ್ಯುತಿ ಅವರು, ಜಕಾರ್ತದಲ್ಲಿ 2018ರಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದ 100 ಮತ್ತು 200 ಮೀಟರ್ಸ್ ಓಟಗಳಲ್ಲಿ ಬೆಳ್ಳಿ ಪದಕ ಗೆದ್ದಿದ್ದರು.

ಸದ್ಯ 'ಎ' ಸ್ಯಾಂಪಲ್ ಪರೀಕ್ಷೆಯಲ್ಲಿ ಮದ್ದಿನ ಅಂಶ ಇರುವುದು ಕಂಡುಬಂದಿದೆ. ಒಂದು ವೇಳೆ ಬಿ ಸ್ಯಾಂಪಲ್‌ನಲ್ಲೂ ಸಾಬೀತಾದರೆ ದ್ಯುತಿ ಅವರು ನಾಲ್ಕು ವರ್ಷಗಳ ಅವಧಿಗೆ ಅಮಾನತಾಗುವ ಸಾಧ್ಯತೆಯಿದೆ.

ಕ್ರಿಕೆಟ್: ಅಜೇಯ ತ್ರಿಶತಕ ಗಳಿಸಿದ ಕುಬೇರ್

ಬೆಂಗಳೂರು: ಬ್ರಾಹ್ಮಣ್ಯತೀರ್ಥ ಆರ್. ಕುಬೇರ್ (ಅಜೇಯ 315) ಗಳಿಸಿದ ತ್ರಿಶತಕದ ಬಲದಿಂದ ಸೇಂಟ್ ಪಾಲ್ ಇಂಗ್ಲಿಷ್ ಶಾಲಾ ತಂಡವು ಬಿಟಿಆರ್ ಶೀಲ್ಡ್ ಟ್ರೋಫಿಗಾಗಿ ನಡೆಯುತ್ತಿರುವ ಕೆಎಸ್‌ಸಿಎ ಗುಂಪು 1ರಿಂದ 2ನೇ ಡಿವಿಷನ್ ಲೀಗ್ ಟೂರ್ನಿಯಲ್ಲಿ ಗೆದ್ದಿತು. ಇಲ್ಲಿ ನಡೆದ ಪಂದ್ಯದಲ್ಲಿ ಸೇಂಟ್ ಪಾಲ್ 400 ರನ್‌ಗಳಿಂದ ಬಿಎನ್‌ಎಂ ಸ್ಕೂಲ್ ವಿರುದ್ಧ ಗೆದ್ದಿತು. ಮೊದಲು ಬ್ಯಾಟ್ ಮಾಡಿದ ಸೇಂಟ್ ಪಾಲ್ 49 ಓವರ್‌ಗಳಲ್ಲಿ 6 ವಿಕೆಟ್‌ಗೆ 541 ರನ್ ಗಳಿಸಿತು. ಬಿಎನ್‌ಎಂ 40.5 ಓವರ್‌ಗಳಲ್ಲಿ 141 ರನ್‌ಗೆ ಆಲೌಟ್ ಆಯಿತು. ಕುಬೇರ್ (23ಕ್ಕೆ 3) ಬೌಲಿಂಗ್‌ನಲ್ಲೂ ಮಿಂಚಿದರು.


ಕ್ರಿಕೆಟ್: ಸೂಪರ್ ಸಿಕ್ಸ್ ಹಂತಕ್ಕೆ ಭಾರತ

ಬೆನೊನಿ, ದಕ್ಷಿಣ ಆಫ್ರಿಕಾ (ಪಿಟಿಐ): ಮನ್ನತ್ ಕಶ್ಯಪ್ (12ಕ್ಕೆ 4) ಬೌಲಿಂಗ್ ಬಲದಿಂದ ಭಾರತ ತಂಡದವರು 19 ವರ್ಷದೊಳಗಿನ ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಸೂಪರ್ ಸಿಕ್ಸ್ ಹಂತ ತಲುಪಿದರು. ಬುಧವಾರ ಇಲ್ಲಿ ನಡೆದ ಗುಂಪು ಹಂತದ ಪಂದ್ಯದಲ್ಲಿ ಭಾರತ 83 ರನ್‌ಗಳಿಂದ ಸ್ಕಾಟ್ಲೆಂಡ್ ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರ್: ಭಾರತ: 20 ಓವರ್‌ಗಳಲ್ಲಿ 4ಕ್ಕೆ 149 (ಗೊಂಗಾಡಿ ತ್ರಿಶಾ 57, ರಿಚಾ ಘೋಷ್ 33, ಶ್ವೇತಾ ಶೆರಾವತ್ ಔಟಾಗದೆ 31; ಕ್ಯಾಥರೀನ್ ಫ್ರೇಸರ್ 31ಕ್ಕೆ 2, ನಯ್ಮಾ ಶೇಖ್ 32ಕ್ಕೆ 1, ಒರ್ಲಾ ಮೊಂಟ್‌ಗೊಮೆರಿ 28ಕ್ಕೆ 1). ಸ್ಕಾಟ್ಲೆಂಡ್: 13.1 ಓವರ್‌ಗಳಲ್ಲಿ 66 (ಐಸ್ಲಾ ಲಿಸ್ಟರ್ 14, ಡಾರ್ಸಿ ಕಾರ್ಟರ್ 24; ಮನ್ನತ್ ಕಶ್ಯಪ್ 12ಕ್ಕೆ 4, ಅರ್ಚನಾ ದೇವಿ 14ಕ್ಕೆ 3, ಸೋನಮ್ ಯಾದವ್ 1ಕ್ಕೆ 2). ಫಲಿತಾಂಶ: ಭಾರತ ತಂಡಕ್ಕೆ 83 ರನ್‌ಗಳ ಜಯ

ರಣಜಿ: ಕರ್ನಾಟಕಕ್ಕೆ ಮಯಂಕ್ ಆಸರೆ

ತಿರುವನಂತಪುರ: ಕರ್ನಾಟಕ ತಂಡವು ಇಲ್ಲಿ ನಡೆಯುತ್ತಿರುವ ರಣಜಿ ಕ್ರಿಕೆಟ್ ಪಂದ್ಯದಲ್ಲಿ ಕೇರಳ ತಂಡದ ವಿರುದ್ಧ ಮೊದಲ ಇನಿಂಗ್ಸ್ ಮುನ್ನಡೆ ಗಳಿಸುವ ಹಾದಿಯಲ್ಲಿ ತಾಳ್ಮೆಯ ಬ್ಯಾಟಿಂಗ್‌ಗೆ ಮೊರೆಹೋಗಿದೆ.



ಮಯಂಕ್

ನಾಯಕ ಮಯಂಕ್ ಅಗರವಾಲ್ (ಬ್ಯಾಟಿಂಗ್ 87; 159ಎ, 4X4, 6X3) ತಂಡಕ್ಕೆ ಆಸರೆಯಾಗಿದ್ದಾರೆ. ಸಚಿನ್ ಬೇಬಿ ಶತಕ ಹಾಗೂ ಜಲಜ್ ಸಕ್ಸೇನಾ ಅರ್ಧಶತಕದ ಬಲದಿಂದ ಆತಿಥೇಯ ತಂಡವು ಮೊದಲ ಇನಿಂಗ್ಸ್‌ನಲ್ಲಿ 342 ರನ್‌ಗಳನ್ನು ಗಳಿಸಿದೆ. ಎರಡನೇ ದಿನದಾಟದ ಮುಕ್ತಾಯಕ್ಕೆ ಕರ್ನಾಟಕವು 49 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 137 ಗಳಿಸಿದೆ. ಮಯಂಕ್ ಮತ್ತು ನಿಕಿನ್ ಜೋಸ್ (ಬ್ಯಾಟಿಂಗ್ 16) ಕ್ರೀಸ್‌ನಲ್ಲಿದ್ದಾರೆ. ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಲು ಇನ್ನೂ 205 ರನ್‌ಗಳನ್ನು ಗಳಿಸಬೇಕಿದೆ.

ಮೊದಲ ದಿನವಾದ ಮಂಗಳವಾರ ಕೇರಳ ತಂಡವು 90 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 224 ರನ್ ಗಳಿಸಿತ್ತು. 116 ರನ್ ಗಳಿಸಿದ್ದ ಸಚಿನ್ ಮತ್ತು 31 ರನ್ ಹೊಡೆದಿದ್ದ ಜಲಜ್ ಕ್ರೀಸ್‌ನಲ್ಲಿದ್ದರು. ಬುಧವಾರ ಬೆಳಿಗ್ಗೆ ಇನಿಂಗ್ಸ್ ಮುಂದುವರಿಸಿದ ಸಚಿನ್ ತಮ್ಮ ಮೊತ್ತಕ್ಕೆ ಮತ್ತೆ 24 ರನ್ ಸೇರಿಸಿದರು. ಜೊತೆಗೆ ತಂಡದ ಮೊತ್ತವನ್ನೂ ಹೆಚ್ಚಿಸಿದರು. ಇನ್ನೊಂದಡೆ ಜಲಜ್ ಕೂಡ ಅವರಿಗೆ ಜೊತೆ ನೀಡಿದರು. ಕರ್ನಾಟಕದ ಸ್ಪಿನ್ನರ್ ಶ್ರೇಯಸ್ ಗೋಪಾಲ್ ಎಸೆತದಲ್ಲಿ ಸಚಿನ್ (141; 307ಎ, 4X17, 6X1) ದೊಡ್ಡ ಹೊಡೆತಕ್ಕೆ ಯತ್ನಿಸಿದರು. ಫೀಲ್ಡರ್ ಮನೀಷ್ ಪಾಂಡೆ ಚುರುಕಾಗಿ ಪಡೆದ ಕ್ಯಾಚ್‌ಗೆ ನಿರ್ಗಮಿಸಿದರು. ಇನ್ನೊಂದೆಡೆ ಬ್ಯಾಟ್ ಬೀಸುತ್ತಿದ್ದ ಜಲಜ್ ಸಕ್ಸೆನಾ (57; 134ಎ, 4X7, 6X1) ಅವರ ಆಟಕ್ಕೆ ಮಧ್ಯಮವೇಗಿ ಕೌಶಿಕ್ ತಡೆಯೊಡ್ಡಿದರು. ಮೊದಲ ದಿನ ನಾಲ್ಕು ವಿಕೆಟ್ ಗಳಿಸಿ ಮಿಂಚಿದ್ದ ಕೌಶಿಕ್ ಐದು ವಿಕೆಟ್‌ಗಳ ಗೊಂಚಲು ಪೂರೈಸಿದರು. ತಮ್ಮ ಇನ್ನೊಂದು ಓವರ್‌ನಲ್ಲಿ ನಿಧೀಶ್ ವಿಕೆಟ್ ಕೂಡ ಉರುಳಿಸಿ, ಕೇರಳ ಇನಿಂಗ್ಸ್‌ಗೆ ತೆರೆಯೆಳೆದರು.

ಕರ್ನಾಟಕದ ಆರಂಭ ಚೆನ್ನಾಗಿರಲಿಲ್ಲ. ಟೂರ್ನಿಯಲ್ಲಿ 3 ಶತಕ ಗಳಿಸಿರುವ ಆರ್. ಸಮರ್ಥ್ ಇನಿಂಗ್ಸ್‌ನ 4ನೇ ಎಸೆತದಲ್ಲಿಯೇ ವೈಶಾಕ್ ಚಂದ್ರನ್ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಆದರು. ಅವರು ಇಲ್ಲಿ ಖಾತೆ ತೆರೆಯಲಿಲ್ಲ. ಮಯಂಕ್ ಮತ್ತು ದೇವದತ್ತ ಪಡಿಕ್ಕಲ್ ಜೊತೆಗೂಡಿ 2ನೇ ವಿಕೆಟ್‌ಗೆ 89 ರನ್ ಸೇರಿಸಿದರು. 28ನೇ ಓವರ್ ನಲ್ಲಿ ದೇವದತ್ತ ಅವರು ನಿಧೀಶ್ ಎಸೆತ ದಲ್ಲಿ ಬೌಲ್ಡ್ ಆದರು. ಮಯಂಕ್ ಜೊತೆಗೂಡಿದ ನಿಕಿನ್ ವಿಕೆಟ್ ಪತನ ತಡೆದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕೇರಳ: 130.1 ಓವರ್‌ಗಳಲ್ಲಿ 342 (ಸಚಿನ್ ಬೇಬಿ 141, ಜಲಜ್ ಸಕ್ಸೇನಾ 57, ಸಿಜೊ ಮನ್ 24, ವಿ.ಕೌಶಿಕ್ 54ಕ್ಕೆ6, ಶ್ರೇಯಸ್ ಗೋಪಾಲ್ 69ಕ್ಕೆ2) ಕರ್ನಾಟಕ: 49 ಓವರ್‌ಗಳಲ್ಲಿ 2 ವಿಕೆಟ್‌ಗೆ 137 (ಮಯಂಕ್ ಬ್ಯಾಟಿಂಗ್ 87, ನಿಕಿನ್ ಜೋಸ್ ಬ್ಯಾಟಿಂಗ್ 16, ವೈಶಾಖ ಚಂದ್ರನ್ 37ಕ್ಕೆ1, ನಿಧೀಶ್ 29ಕ್ಕೆ1)

ಐಎಸ್‌ಎಲ್: ಬಿಎಫ್‌ಸಿಗೆ ಜಯ

ಜಮ್ಶೆಡ್‌ಪುರ (ಪಿಟಿಐ): ಸಂಘಟಿತ ಆಟವಾಡಿದ ಬೆಂಗಳೂರು ಎಫ್‌ಸಿ ತಂಡದವರು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಸತತ ಮೂರನೇ ಜಯ ಗಳಿಸಿದರು.

ಬುಧವಾರ ಇಲ್ಲಿ ನಡೆದ ಪಂದ್ಯದಲ್ಲಿ ಬಿಎಫ್‌ಸಿ 3–0ಯಿಂದ ಜಮ್ಶೆಡ್‌ಪುರ ಎಫ್‌ಸಿ ವಿರುದ್ಧ ಗೆದ್ದಿತು. ವಿಜೇತ ತಂಡಕ್ಕಾಗಿ ರೋಹಿತ್ ಕುಮಾರ್ (7ನೇ ನಿಮಿಷ), ರಾಯ್‌ಕೃಷ್ಣ (34ನೇ ನಿ.) ಮತ್ತು ಶಿವಶಕ್ತಿ ನಾರಾಯಣನ್ (62ನೇ ನಿ.) ಗೋಲು ಗಳಿಸಿದರು.

ಈ ಗೆಲುವಿನೊಂದಿಗೆ ಬಿಎಫ್‌ಸಿಯ ಪ್ಲೇ ಆಫ್ ಹಂತದ ಆಸೆ ಜೀವಂತವಾಗುಳಿದಿದೆ.

ಅಕ್ಸೆಲ್ಸನ್‌ಗೆ ಮಣಿದ ಶ್ರೀಕಾಂತ್

ನವದೆಹಲಿ (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ಅವರು ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನಲ್ಲೇ ಸೋಲನುಭವಿಸಿದರು.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಹಣಾಹಣಿಯಲ್ಲಿ ಶ್ರೀಕಾಂತ್ 14-21, 19-21ರಿಂದ ಡೆನ್ಮಾರ್ಕ್‌ನ, ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ವಿಕ್ಟರ್ ಅಕ್ಸೆಲ್ಸನ್ ಎದುರು ಎಡವಿದರು.

ಮೊದಲು ಗೇಮ್‌ಅನ್ನು ಕೈಚೆಲ್ಲಿದ ಬಳಿಕ ಶ್ರೀಕಾಂತ್ ಎರಡನೇ ಗೇಮ್‌ನಲ್ಲಿ ಹೋರಾಟ ನಡೆಸಿದರು. ಒಂದು ಹಂತದಲ್ಲಿ 14–5ರಿಂದ ಮುನ್ನಡೆ ಸಾಧಿಸಿದ್ದರು. ಆದರೆ ಅದೇ ಲಯ ಮುಂದುವರಿಸುವಲ್ಲಿ ಅವರಿಗೆ ಸಾಧ್ಯವಾಗಲಿಲ್ಲ.